# ಅಪರಂಜಿ



ತಿಳಿನಗೆಯ ಕಾರಂಜಿ

ಡಿಸೆಂಬರ್ 2021



"ಸ್ವಲ್ಪ ಓ.ಟಿ.ಪಿ. ಹೇಳ್ಬಿಡೀಮ್ಮ "

ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 39**

**ಸಂಚಿಕೆ - 3**

**ಡಿಸೆಂಬರ್ - 2021**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ದುಪಟಿ ದುರಂತ | ಟೀಯಸ್ಸಾರ್ರಾವ್ | 6 |
| ಸ್ಮಾರ್ಟ್ ಫೋನೂ... | ಸೂರ್ಯನಾರಾಯಣ ಹೆಚ್. | 9 |
| ಚಾಲಾಕಿ ಪಿ.ಎ. | ಅರವಿಂದ ಜಿ. ಜೋಷಿ | 12 |
| ಕೆಂಪು ಬಸ್ಸಿನ ಕಂಪು | ಸುಚಿತ್ರಾ ಹೆಗಡೆ | 13 |
| ಎತ್ತಣೆಂದೆತ್ತ ಸಂಬಂಧವಯ್ಯ | ಸಂಧ್ಯಾ ರಮೇಶ್ | 16 |
| ನಿಮ್ಮ ಲೇಖನ ತಿರಸ್ಕೃತವಾಗಿದೆ | ಕುಮುದಾ ಪುರುಷೋತ್ತಮ್ | 20 |
| ಸೇರಿಗೆ ಸವ್ವಾಸೇರು | ಅಶೋಕ ಪೂಜಾರ | 23 |
| ಹ್ಯಾಪಿ ದೀಪಾವಳಿ | ಹಿರಿಯೂರು ರಾಘವೇಂದ್ರ | 26 |
| ಹುರಿಗಾಳು ಪ್ರಸಂಗ | ವೈ.ಎನ್. ಗುಂಡೂರಾವ್ | 29 |
| ತುಂತುರು | ದನಂಅ | 31 |
| ಮಾತು ಬಿಡೋದು | ಸುಕೇಶವ | 33 |
| ಕಾಂಕ್ರೀಟ್ ಕಾಡಿನಲ್ಲಿ... | ಎಂ.ಎಸ್. ರಘುನಂದನ | 36 |
| ಕೆಲವು ಚುಟುಕಗಳು | ಬೇಲೂರು ರಾಮಮೂರ್ತಿ | 38 |
| ಯಾರಿಗೆ ಗೊತ್ತು ಏನಾಯ್ತೆಂದು? | ವಿ. ವಿಜಯೇಂದ್ರ ರಾವ್ | 40 |

ಮುಖಪುಟ : **ಇಂಟರ್‌ನೆಟ್ ಕೃಪೆ**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

ಲಕ್ಷಾಂತರ ಜನರ ಕಣ್ಮಣಿಯಾಗಿ, ಸದಾ ಹಸನ್ಮುಖಿಯಾಗಿದ್ದ
ಪುನೀತ್ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು
ಅಪರಂಜಿ ಬೇಡುತ್ತಾಳೆ !

*****

ಟೆಂಡರ್ ಕರೆಯದೆಯೇ " ಗುತ್ತಿಗೆ" – ಪತ್ರಿಕೆ
ಈಗ ಯಾರದೋ 'ಕುತ್ತಿಗೆಗೆ " ಆಪತ್ತು ಕಾದಿದೆ !!

*****

"ಮೂರ್ಖರು ಮಾತ್ರ ಸುಮ್ಮನಿರುತ್ತಾರೆ " – ಹೇಳಿಕೆ
ಸೈಲೆನ್ಸ್ ಈಸ್ ಗೋಲ್ಡನ್ ಅಂತ ಅಪರಂಜಿ ನಕ್ಕಳಂತೆ!!

*****

ಸೇವೆ , ಸಂಕಲ್ಪ , ಸಮರ್ಪಣೆಯೇ ಬಿಜೆಪಿ ಮೌಲ್ಯ – ಸುದ್ದಿ
ಇವೆಲ್ಲ ಸರ್ವವಿದಿತ ಆಗಿದ್ದರೂ ಪುನರುಕ್ತಿಗೆ ಕಾರಣವೇನು?

*****

ಯೌವನದಲ್ಲಿ ಮಾಡುವ ಹಣಕಾಸಿನ ಆರು ತಪ್ಪುಗಳು–ಪತ್ರಿಕೆ
ಆ ಕಾಲದಲ್ಲಿ ಹಣಕಾಸು ಎಲ್ಲಿಂದ ಬರುತ್ತೆ ಸ್ವಾಮಿ?

*****

ಮರಳು ಗಣಿಗಾರಿಕೆಗೆ ನೀತಿಯ ಅಂಕುಶ – ಪತ್ರಿಕೆ

*****

ನೀತಿಯೂ ನವಿರಾದ ಮರಳಿನಂತೆ ಕೈನಿಂದ ಜಾರಿಹೋಗುತ್ತೆ!!

*****

ಕನ್ನಡ ಕಡ್ಡಾಯ ; ಹೈ ಕೋರ್ಟ್ ಅತೃಪ್ತಿ – ಸುದ್ದಿ
ಅರೆ, ಉಚ್ಚ ನ್ಯಾಯಾಲಯ ಅಂತಲಾದರೂ ಬರೆದರೆ ವಾಸಿ!!

*****

ಬಿಟ್ ಕಾಯಿನ್ ಎಂಬ ಮಾಯಾ ಬಜಾರ್ ಎಂಬ ಮೂವಿ
ಮಾಡುತ್ತಾರೆ ಅಂಬುದು ಶುದ್ಧ ಕುಹಕ !!

*****

" ನೈತಿಕತೆ " ಪಾಠ ಮಾಡಬೇಡಿ ! – ಹೇಳಿಕೆ
ಹೌದು, ಇಲ್ಲದೆ ಇರೋದರ ಬಗ್ಗೆ ಪಾಠ ಎಲ್ಲಿಂದ ತರೋಣ?

# “ನಮ್ಮ ನಿಮ್ಮಲ್ಲಿ”

♦ ಶಿವಕುಮಾರ್

ಕೊರವಂಜಿ ಪತ್ರಿಕೆ ತನ್ನ ಜೀವಿತಾವಧಿಯಲ್ಲಿ ಅನೇಕ ಸುಪ್ರಸಿದ್ಧ ನಗೆ ಲೇಖಕರನ್ನು ಸೃಷ್ಟಿಸಿತು. ಅ.ರಾಸೇ, ಕೇಫ, ದಾಶರಥಿ ದೀಕ್ಷಿತ್, ಸುನಂದಮ್ಮ, ಅ.ರಾ.ಮಿತ್ರ, ರಾಮಿ ಇತ್ಯಾದಿಯಾಗಿ ಅನೇಕರು ಹಾಸ್ಯ ಬರಹಗಾರರಾಗಿ ಖ್ಯಾತಿಯನ್ನು ಪಡೆದು ಕನ್ನಡ ಜನಮಾನಸದಲ್ಲಿ ಒಂದು ಸ್ಥಿರವಾದ ಸ್ಥಾನವನ್ನು ಗಳಿಸಿದ್ದಾರೆ. ಇಂತಹ ಪ್ರತಿಭಾನ್ವಿತ ನಗೆಗಾರರ ಮಟ್ಟಕ್ಕೆ ನಿಲ್ಲಬಲ್ಲ ಲೇಖಕರೊಬ್ಬರು ಕೊರವಂಜಿಗೆ ಬರೆಯುತ್ತಿದ್ದರು. ಬರಹ ವೃತ್ತಿಯನ್ನು ಅವರು ಮುಂದುವರಿಸದ ಕಾರಣದಿಂದಲೋ ಏನೋ ಓದುಗರ ಮನದಲ್ಲಿ ಅವರ ಹೆಸರು ನಿಲ್ಲಲಿಲ್ಲ. ಅವರೇ, "ಬೀರಣ್ಣ" ಎಂಬ ಕಾವ್ಯನಾಮದಡಿಯಲ್ಲಿ ಬರೆಯುತ್ತಿದ್ದ ಡಾ॥ ಬಿ.ಆರ್. ನಾರಾಯಣ ಐಯ್ಯಂಗಾರ್ ಅವರು.

ನಾರಾಯಣ ಐಯ್ಯಂಗಾರ್ ರಾ.ಶಿ. ಯವರ ಬಾಲ್ಯದ ಗೆಳೆಯ. ಮೆಡಿಕಲ್ ಕಾಲೇಜಿನಲ್ಲಿ ರಾ.ಶಿ.ಯವರ ಸಹಪಾಠಿ. ಆ ದಿನಗಳಲ್ಲಿ, ಮೈಸೂರು ಮೆಡಿಕಲ್ ಕಾಲೇಜು ಇನ್ನೂ ಬೆಂಗಳೂರಿನಿಂದ ಸ್ಥಾನಪಲ್ಲಟವಾಗಿರಲಿಲ್ಲ. ಇನ್ನೂ ಬೆಂಗಳೂರಿನಲ್ಲೇ ಇತ್ತು. ಒಮ್ಮೆ ಕ್ಲಾಸಿನಲ್ಲಿ ಪಾಠಗಳು ಬೋರ್ ಹೊಡೆದದ್ದರಿಂದ ಕ್ಲಾಸಿಗೆ ಚಕ್ಕರ್ ಹಾಕಿ, ಗೆಳೆಯರಿಬ್ಬರೂ ಗಾಳಿಸಂಚಾರಕ್ಕೆ ಹೊರಟಿದ್ದರು. ಹತ್ತಿರದಲ್ಲೇ ಇದ್ದ ತುಳಸಿ ತೋಟದ ರಂಗಮಂದಿರದಲ್ಲಿ ಯಾವುದೋ ವಿವಿಧ ವಿನೋದಾವಳಿ ಕಾರ್ಯಕ್ರಮ ನಡೆಯುತ್ತಿತ್ತು. ಮಿತ್ರರಿಬ್ಬರೂ ರಂಗಮಂದಿರದೊಳಗೆ ನುಗ್ಗಿದರು. ಅಲ್ಲಿ " ಶೂರ್ಪನಖಾ ಕುಲ ವೈಭವ" ಎಂಬ ನಾಟಕವೊಂದು ನಡೆಯುತ್ತಿತ್ತು. ನಾಟಕವನ್ನು ಬರೆದವರು ಟಿ.ಪಿ.ಕೈಲಾಸಮ್. ಆಗಿನ ಕಾಲದ ಕಂಪನಿ ನಾಟಕಗಳನ್ನು ಗೇಲಿ ಮಾಡಿ ಬರೆದಿದ್ದ ನಾಟಕವದು. ಈ ನಾಟಕದಲ್ಲಿ ಶೂರ್ಪನಖಿಯ ಸಖಿಯಾದ ಒಬ್ಬ ಐಯ್ಯಂಗಾರ್ ಸಖಿ, ತನ್ನದೇ ಆದ ವಿಶಿಷ್ಟವಾದ ಕನ್ನಡ ಮಿಶ್ರಿತ ತಮಿಳಿನಲ್ಲಿ ತನ್ನ ಸಖಿಯರನ್ನು ಉದ್ಯಾನವನದ ವಿಹಾರಕ್ಕೆ ಕರೆದ ದೃಶ್ಯ ಈ ಮಿತ್ರರನ್ನು ತಕ್ಕಮಟ್ಟಿಗೆ ರಂಜಿಸಿತು. ಆ ದೃಶ್ಯ ಮುಗಿದು ಮುಂದಿನ ದೃಶ್ಯ ಪ್ರಾರಂಭವಾಗುವುದಕ್ಕೆ ಮೊದಲು ರಂಗ ಸಜ್ಜಿಕೆಗೋಸ್ಕರ ಪರದೆಯನ್ನು ಮುಚ್ಚಿದ್ದರು. ಆ ಸಮಯದಲ್ಲಿ ಪರದೆಯ ಇದುರಿಗೆ ಮಧ್ಯವಯಸ್ಕನೊಬ್ಬನು ಬಂದು ನಿಂತನಂತೆ. ಕಪ್ಪು ಬಣ್ಣದ ನೆಟ್ ಬನಿಯನ್, ಕಚ್ಚೆ ಪಂಚೆ ಉಟ್ಟಿದ್ದ ಬರಿಗಾಲಿನ ಆ ವ್ಯಕ್ತಿ, ವೇದಿಕೆಯ ಅಂಚಿನಲ್ಲಿ ನಿಂತು ಹಾವಭಾವಸಹಿತವಾಗಿ ಇಂಗ್ಲೀಷಿನ ಶಿಶುಗೀತೆಯೊಂದನ್ನು ಹೇಳಿದನಂತೆ.

ದೇರ್ ವಾಸ್ ಎನ್ ಓಲ್ಡ್ ಉಮನ್

ಹು ಲಿವ್ಡ್ ಇನ್ ಎ ಷೂ

ಷಿ ಹ್ಯಾಡ್ ಟೂ ಮೆನಿ ಛಿಲ್ಡ್ರನ್

ಷಿ ಡಿಡ್ ನಾಟ್ ನೋ ವಾಟ್ ಟು ಡೂ.

ರಾ.ಶಿ.ಯವರಿಗೆ ಈ ಬಾಲಿಶವಾದ ನಟನೆಯನ್ನು ನೋಡಿದಾಗ ಇಲ್ಲಿ ಯಾಕಾದರೂ ಬಂದನಪ್ಪಾ ಅನ್ನಿಸಿತಂತೆ. ಅಷ್ಟರಲ್ಲಿ ಆ ಕರಿಯ ಬನಿಯನ್ ಧಾರಿ ಮೆಲ್ಲನೆ ವೇದಿಕೆಯುದ್ದಕ್ಕೂ ನಡೆದುಬಂದು , ಬಲತುದಿಯಲ್ಲಿ ನಿಂತು ,

ದೇರ್ ವಾಸ್ ಅನದರ್ ಓಲ್ಡ್ ಉಮನ್

ಹು ಲಿವ್ಡ್ ಇನ್ ಅನದರ್ ಷೂ

ಷಿ ಹ್ಯಾಡ್ ನೋ ಛಿಲ್ಡ್ರನ್

ಬಟ್ ಬೈ ಗ್ಯಾಡ್ , ಷಿ ನ್ಯೂ ವಾಟ್ ಟು ಡೂ

ಅಂದಾಗ, ರಾ.ಶಿ. ಮತ್ತು ಅಪ್ಪಣ್ಣ (ಮಿತ್ರನ ಸಲುಗೆಯ ನಾಮ)ರಿಗೆ ನಗು ತಡೆಯಲಾಗಲಿಲ್ಲವಂತೆ. ಆ ನೆಟ್ ಬನಿಯನ್ ಧಾರಿಯೇ ಟಿ.ಪಿ. ಕೈಲಾಸಮ್. ಈ ಮಿತ್ರದ್ವಯರಿಗೆ ಅಂದು ಕೈಲಾಸಮ್ ರವರೊಂದಿಗೆ ಆದ ಪರಿಚಯ ಮುಂದೆ ಕೊರವಂಜಿಯ ಹುಟ್ಟಿಗೆ ಕಾರಣವಾಯಿತು.

ನಾರಾಯಣ ಐಯ್ಯಂಗಾರ್ ಅವರ ತೀಕ್ಷ್ಣ ಹಾಸ್ಯ ಮನೋಭಾವವನ್ನು ಗುರುತಿಸಿ, ರಾ.ಶಿ.ಯವರು ಅವರನ್ನು ಕೊರವಂಜಿಗೆ ಬರೆಯುವಂತೆ ತಾಕೀತು ಮಾಡಿದರು. "ಬೀರಣ್ಣ" ಎಂಬ ಕಾವ್ಯನಾಮದಡಿಯಲ್ಲಿ ನಾರಾಯಣ ಐಯ್ಯಂಗಾರ್ ಕೊರವಂಜಿಗೆ ಅನೇಕ ಉತ್ಕೃಷ್ಟ ಲೇಖನಗಳನ್ನು ಬರೆದರು. ಪುಟ್ಟೂರಾಯನ ಪಥ್ಯ, ಗಾಳಿಬಂದಾಗ ತೂರಿಕೋ, ರಂಗಪ್ಪ ರಾವಣ ಭಾತ್ ಇತ್ಯಾದಿ ಲೇಖನಗಳು ವುಡ್‌ಹೌಸ್ ಶೈಲಿಯ ಹಾಸ್ಯವನ್ನು ಬಹು ಕಲಾತ್ಮಕವಾಗಿ ಮೆರೆಸಿದವು. ಉದಾಹರಣಾರ್ಥವಾಗಿ ಅವರ ಪುಟ್ಟೂರಾಯನ ಪಥ್ಯ ಕಥೆಯ ಜಿಸ್ಟ್ ಅನ್ನು ಇಲ್ಲಿ ನೋಡಿ.

ಪುಟ್ಟೂರಾಯ ಭೀಮಣ್ಣನ ದೊಡ್ಡಪ್ಪನ ಮಗ. ಭೀಮಣ್ಣ ಯಾರು ಅಂತೀರೋ? ಅವನು ಬ್ರಹ್ಮೇಂದ್ರ ಭವನದ ಖಾಯಂ ಗಿರಾಕಿ. ಅಲ್ಲಿನ  ತಿಂಡಿಕಟ್ಟೆಯಲ್ಲಿ ಅವನದ್ದೇ ದರ್ಬಾರು.  ಅವತ್ತು ಯಾರೋ ಒಬ್ಬ ಹೊಸ ಗಿರಾಕಿ, " ಖಾರ ಕೆಟ್ಟದ್ದು ಮೈಗೆ " ಅಂದುಬಿಟ್ಟರಂತೆ. ತಗೋ ಭೀಮಣ್ಣ ಶುರು ಮಾಡಿಯೇ ಬಿಟ್ಟ ತನ್ನ " ಪುಟ್ಟೂರಾಯ ಪ್ರಗಾಥಾ !"

ಪುಟ್ಟೂರಾಯ ಪುಸ್ತಕದ ಹುಳು. ಓದಿ ಓದಿ ಯಾರೋ ಮರುಳಾದರಂತೆ, ಹಾಗೆ ಇವನೂ ಸಹಾ. ಒಮ್ಮೆ ಯಾವುದೋ ಪುಸ್ತಕದಲ್ಲಿ "ಖಾರ ತಿನ್ನಬಾರದು " ಅಂತ ಬರೆದಿತ್ತಂತೆ. ಅದನ್ನು ಓದಿ, ಇವನು ತನ್ನ ಪಥ್ಯ ಶುರುಮಾಡಿಯೇ ಬಿಟ್ಟ. ಇವನು ಪಥ್ಯ ಮಾಡುವ ಕಟ್ಟುನಿಟ್ಟನ್ನು ನೋಡಿ ಮನೆಯವರಿಗೆಲ್ಲಾ ಆಶ್ಚರ್ಯ. " ಒಂದು ದಿವಸವಾಯಿತು ಹತ್ತು ದಿನಗಳಾದವು, ಆದರೂ ಪುಟ್ಟುವು ಸಿಹಿಸಾರು, ಖಾರ ಸೋಕದ ಪಲ್ಯ, ನೀರು ಮಜ್ಜಿಗೆ ಇವುಗಳನ್ನು ಬಿಟ್ಟು ಬೇರೆ ಏನನ್ನೂ ಕೇಳಲಿಲ್ಲ. ಕೇಳುವುದು ಹಾಗಿರಲಿ, ಮೆಣಸಿನಕಾಯಿ ತೂಗಿದ್ದ ತಕ್ಕಡಿಯಲ್ಲಿ ತೂಗಿಸಿ ತಂದದ್ದೆಂದು ಗೆಣಸನ್ನೂ ಸಹಾ ಗೊಬ್ಬರಕ್ಕೆ ಒಗೆದುಬಿಟ್ಟ ಮನುಷ್ಯ !".

ಮೊದಮೊದಲು ಇದರಿಂದ ಪುಟ್ಟೂರಾಯನಿಗೆ ಒಳ್ಳೆಯದೇ ಆಯಿತು. ಅವನ ಕೋಪದ ಪ್ರಕೃತಿ ಶಾಂತವಾಯಿತು. ಆದರೆ ಸಂಗಡಿಗರು ಬಿಡಬೇಕಲ್ಲ. ಒಬ್ಬ ಗೆಳೆಯ ಬಂದು, " ನೋಡು ಪುಟ್ಟೂ, ಇವತ್ತು ನಮ್ಮ ಮನೆಯಲ್ಲಿ ಬೆಳದಿಂಗಳೂಟ – ಬಿಸಿಬೇಳೆ ಹುಳಿಯನ್ನ ಇತ್ಯಾದಿ ! ನಿನಗೆ ಗೊತ್ತೇ ಇದೆ, ನಮ್ಮಜ್ಜಿ ಬಿಸಿ ಬೇಳೆ ಹುಳಿಯನ್ನವನ್ನ ಎಷ್ಟು ಚೆನ್ನಾಗಿ ಮಾಡ್ತಾಳೆ ಅಂತ. ನಿನ್ನ ಕರೆಯೋಣ ಅನ್ನಿಸ್ತು, ಆದರೆ ನಿನ್ನ ಪಥ್ಯಕ್ಕೆ ಭಂಗ ಆಗಬಾರದಲ್ಲಾ "ಅಂತ ಹೇಳಿದ. ಪುಟ್ಟು ಊಟಕ್ಕೇಳುವಾಗ, ಅವರಮ್ಮನನ್ನು ಕುರಿತು, " ಅಮ್ಮ ಏನಡಿಗೆ?" ಅಂತ ಕೇಳಿದರೆ ಆಕೆ, " ಏನು ಮಾಡಲೋ ಪುಟ್ಟು, ಯಥಾಪ್ರಕಾರ ಅನ್ನ, ಸಿಹಿ ಸಾರು, ಖಾರ ಹಾಕದ ಪಲ್ಯ. ಮತ್ತೇನು ಮಾಡಲಿ? ಎಲ್ಲರಿಗೂ ಈರನಗೆರೆ ಬದನೇಕಾಯಿ ಎಣ್ಣೆಗಾಯಿ ಮಾಡಿದ್ದೆ. ಎಲ್ಲರೂ ಮೇಲಿಂದ ಮೇಲೆ ಚಪ್ಪರಿಸಿಕೊಂಡು ತಿಂದರು. ಮಾಡಿದವಳು ನನಗೇ ಉಳಿಯಲಿಲ್ಲ." ಅಂತ ಹೇಳಿದಳು. ಅಷ್ಟು ಹೊತ್ತಿಗೆ ಪುಟ್ಟುವಿನ ತಂಗಿ ಬಂದು, "ಪುಟ್ಟಣ್ಣ ಈ ಸಲ ಹುರಿಗಾಳು ಎಷ್ಟು ಚೆನ್ನಾಗಿದೆ ಅಂತೀಯಾ, ನೀನು ಖಾರ ಬಿಡದೇ ಇದ್ದರೆ ಎಷ್ಟು ಹೊಗಳುತ್ತಿದ್ದೆಯೋ ?" ಅಂತ ಹೇಳಿದಾಗಂತೂ, ಪುಟ್ಟು ಏನೂ ಮಾತಾಡದೇ ತನ್ನ ಕೊಠಡಿಗೆ ಹೋಗಿ ಮಲಗಿದ.. ಮಲಗಿದಾಗಲೂ ಕನಸೆಲ್ಲಾ ಊಟದ್ದೇ. " ಬಿಸಿಬೇಳೆ ಹುಳಿಯನ್ನ, ಬದನೇಕಾಯಿ ಎಣ್ಣೆಗಾಯಿ, ನೆಲ್ಲಿಕಾಯಿ ಉಪ್ಪಿನಕಾಯಿ, ತೆಂಗಿನಕಾಯಿ ಚಟ್ನಿ, ಖಾರದ ಹುರಿಗಾಳು, ಒಂದರೊಂದಿಗೊಂದು ಕಣ್ಣು ಮುಚ್ಚಾಲೆ ಆಡುವಂತೆ ತೋರಿತು. ಒಂದು ಸಲ ಉಪ್ಪಿನಕಾಯಿ ಸಿಕ್ಕಿಕೊಳ್ಳುವುದು. ಮತ್ತೊಂದು ಸಲ ಬಿಸಿಬೇಳೆ. ಇವುಗಳ ಜೊತೆಗೆ ಖಾರದ ಹುರುಳಿ ಹಪ್ಪಳ ಹುಣಸೇ ತೊಕ್ಕು ಹೇಗೋ ಬಂದು ಸೇರಿಕೊಂಡು ಬಿಟ್ಟವು. ತೊಕ್ಕು ಎಲ್ಲವನ್ನೂ ಅಟ್ಟಿಸಿಕೊಂಡು ಹೋಗಲಾರಂಭಿಸಿತು. ಆದರೆ ಇದ್ದಕ್ಕಿದ್ದಹಾಗೆಯೇ ಕಾಯಿ ಚಟ್ನಿಯನ್ನು ಯಾರೂ ಹಿಡಿಯುವುದಗಕ್ಕೇ ಆಗಲಿಲ್ಲ. ಎಲ್ಲಿ ನೋಡಿದರೂ ಚಟ್ನಿಯೇ. ಆದರೆ ಕೈಗೆ ಮಾತ್ರಾ ಸಿಗದು. ತಪ್ಪಿಸಿಕೊಂಡು ಓಡುತ್ತಾ ಕಿಲಕಿಲ ಎಂದು ನಗುವುದು .................." ಹೀಗೆ ಸಾಗುತ್ತದೆ ಬೀರಣ್ಣನವರ ಕಲ್ಪನಾ ಲಹರಿ. ಕೊನೆಗೆ ಹೆಂಡತಿಯ ಬುದ್ಧಿವಾದಕ್ಕೆ ಶರಣಾಗಿ ಖಾರಾಸೇವೆ, ಖಾರದ ಬೂಂದಿ, ಖಾರದ ಉಪ್ಪೇರಿ ಇವುಗಳನ್ನು ಸೇವಿಸಿ ಪುಟ್ಟೂರಾಯ ತನ್ನ ಪಥ್ಯವನ್ನು ಮುಕ್ತಾಯ ಮಾಡುವುದರೊಂದಿಗೆ ಕಥೆ ಮುಗಿಯುತ್ತದೆ.

ಮೊನ್ನೆ ನವೆಂಬರ್ ಹತ್ತರಂದು ರಾ.ಶಿ.ಯವರು ಹುಟ್ಟಿದ ದಿನ. ಅಂದು ರಾ.ಶಿ.ಯವರ ನಿಕಟ ಮಿತ್ರರೆಲ್ಲಾ ನೆನಪಿಗೆ ಬಂದರು. ಬೀರಣ್ಣ, ಕೈಲಾಸಮ್, ಮತ್ತು ಇತರ ಅನೇಕ ಪ್ರತಿಭಾನ್ವಿತರು ಸೃಷ್ಟಿಸಿದ ಆ ನಗೆ ಲೋಕದ ಮಧುರ ಸ್ಮೃತಿಗೆ ಇದೊಂದು ನೆನಪಿನ ಕಾಣಿಕೆ. ■

---

**ವರುಷ ಕಳೆದಿದೆ ಮತ್ತೊಂದು**

**ಸಂದುಹೋಗಿದೆ**

**ವರುಷ ಎರಡು ಸಾವಿರದ ಇಪ್ಪತ್ತೊಂದು**

**ಬರುವ ವರುಷ**

**ಎರಡು ಸಾವಿರದ ಇಪ್ಪತ್ತೆರಡು**

**ಜನತೆಗೆ ತೊಡಿಸಲಿ**

**ಸಂತಸ, ನೆಮ್ಮದಿ, ಆನಂದಗಳ ಕೋಡು**

# ದುಪಟಿ ದುರಂತ

**। ಟೀಯಸ್ಸಾರ್ರಾವ್**

ರಾಮು ಬೆಂಗಳೂರಿಗೆ ಅವರಕಡೆ ಯಾವುದೋ ಮದುವೆಗಾಗಿ ಬಂದು ನಮ್ಮ ಮನೆಯಲ್ಲೂ ನಾಲ್ಕು ದಿನವಿದ್ದು ಹೋದ. ಹೋದೊಡನೆ ಬಿರುಗಾಳಿಯಂತೆ ಒಂದು ಕಾಗದ ಬಂತು:

ಅಯ್ಯಾ!

ನಾನು ಬೆಂಗಳೂರಿನಲ್ಲೇ ನನ್ನ ರಗ್ಗು ಮರೆತು ಬಂದಿದ್ದೇನೆ. ಮೈಸೂರಿನಲ್ಲಿ ನಾನು ಈದಿನ ರೈಲಿಳಿದಾಗ ಏನೋ ಭಾರ ಕಡಿಮೆಯಾದ ಹಾಗೆ ತೋರಿತು. ಏನೂಂತ ನೋಡುವಾಗ 'ರಗ್ಗಿ'ಲ್ಲ! ಅದು ರೈಲಿನಲ್ಲಿ ಕಳೆದುಹೋಗಿರುವುದಕ್ಕೆ ಕಾರಣವಿಲ್ಲ. ನಿಮ್ಮ ಮನೆಯಲ್ಲೇ ಬಿಟ್ಟಿರಬೇಕು. ದಯವಿಟ್ಟು ತೆಗೆದಿರಿಸು. ಭಾನುವಾರ ಅದಕ್ಕಾಗಿ ಬಂದು ತೆಗೆದುಕೊಂಡು ಹೋಗುತ್ತೇನೆ. ಅದಿಲ್ಲದೆ ಇರುವುದರಿಂದ ಹೇಗ್ಹೇಗೋ ಆಗಿದೆ. ಇಂಗ್ಲೀಷಿನಲ್ಲಿ ಹೇಳುವುದಾದರೆ I am not myself. ಬಾಕೀ ವಿಷಯ ಮೊಖ್ತಾ.

**ಇತಿ–ರಾಮು**

ನಾನು ಉತ್ತರ ಬರೆಯಬೇಕಾಯಿತು– ಬರೆದೆ.

ಅಯ್ಯಾ ಮನುಷ್ಯ!

ನಿನ್ನ ರಗ್ಗು ಇಲ್ಲೇ ನಿಂತು ಹೋಗಿದೆಯೆಂದು ಬರೆದಿದ್ದೀಯೆ. ರಗ್ಗು ಎಂದರೆ ಕನ್ನಡದಲ್ಲಿ ದುಪಟಿ ತಾನೆ? ನಿನ್ನ ಪೇಚಾಟದಲ್ಲಿ ನನಗೆ ಪೂರ್ಣ ಸಹಾನುಭೂತಿಯಿದೆಯಾದರೂ 'ಆ ನಿನ್ನ ದುಪಟಿ' ಇಲ್ಲಿಲ್ಲ. ಇದ್ದರೆ ತಕ್ಷಣ ಪತ್ತೆಯಾಗುತ್ತಿತ್ತು. ಮೊನ್ನೆ ಇಲ್ಲಿ ನಿನ್ನ ತಂಗಿಯ ಓರಗಿತ್ತಿಯ ಮದುವೆಯಲ್ಲಿ ಬೀಗರಿಗೂ ನಿಮಗೂ, ಬಂದವರು ಕೂರಲು ಹಾಸಿದ್ದ ಒಂದು ಭಾರೀ ಗುಡಾರದ ವಿಷಯದಲ್ಲಿ ಕೊಂಚ ರಾದ್ಧಾಂತ ನಡೆದು ಬೀಗರಾತನೊಬ್ಬ ಪನ್ನೀರುದಾನಿ ತೆಗೆದು ಅದರಮೇಲೆ ಚೆಲ್ಲಿದನಲ್ಲ! ಅದುತಾನೆ ನಿನ್ನ ರಗ್ಗು? ಹಾಗಾದರೆ ಇಲ್ಲಿಲ್ಲ. ನೀನು ಹೊರಟ ಮೇಲೆ ನಮ್ಮ ಮನೆಯಲ್ಲಿ ಹತ್ತಾರು ತಗಣೆ ಸಂಸಾರಗಳು ಅಲ್ಲಲ್ಲಿ ಕಾಣಿಸಿಕೊಂಡು ಸಾಕಷ್ಟು ಹಾವಳಿ ಎಬ್ಬಿಸಿವೆಯಾದ್ದರಿಂದ ಯಾವುದಾದರೂ ಮೂಲೆಯಲ್ಲಿ ನಿನ್ನ 'ರಗ್ಗು' ಅಡಗಿರಬಹುದೋ ಎಂಬ ಗುಮಾನಿಯಿಂದ ಮನೆಯ ಮೂಲೆಮೂಲೆಯೆಲ್ಲಾ ತಲಾಷ್‌ಮಾಡಿದೆ, ಇಲ್ಲ. ಇದ್ದರೆ ಅದರದೇ ಆದ, (ಕ್ಷಮಿಸು, ನಿನ್ನದೇ ಆದ) ಒಂದು ಅಪೂರ್ವ ಗಂಧದಿಂದ ಅದನ್ನು ಪತ್ತೆ ಹಚ್ಚಬಹುದಾಗಿತ್ತು ದಯವಿಟ್ಟು ಇನ್ನೊಂದು ಸಾರಿ ಜ್ಞಾಪಿಸಿಕೋ ಎಲ್ಲಿ ಬಿಟ್ಟಿಯೋ, ಇನ್ನೇನೂ ವಿಶೇಷವಿಲ್ಲ.

ಇಂತು............

ಅವನು ಬಿಡಲಿಲ್ಲ.

ಅಯ್ಯಾ ಪ್ರಾಣಿ!

ಅದು ಇಲ್ಲಿಲ್ಲ ನಾನು ತರಲೇ ಇಲ್ಲ. ನಿಮ್ಮಲ್ಲೇ ಮರೆತು ಬಂದೆ ಹುಡುಗರ್ಯಾರಾದರೂ ಆಟವಾಡುವುದಕ್ಕೆ ಎತ್ತಿಟ್ಟಿರಬಹುದು. ನೋಡಿ ತಿಳಿಸು. ಖಂಡಿತಾ ನೀನು 'ಸಿಕ್ಕಿತು' ಅಂತ ಬರೆಯುವ ತನಕ, ನನ್ನ ಮನಸ್ಸಿಗೆ ಶಾಂತಿ ಇಲ್ಲ. ನನ್ನ ಸರ್ವಸ್ವವೇ ಇಲ್ಲದಂತಾಗಿ ಮಂಕು ಕವಿತಿದೆ. ಬಾಕಿ ಏನೂ ಇಲ್ಲ.

**ಇತಿ–ರಾಮು.**

P.S ನಿಮ್ಮ ಮನೆಯಲ್ಲಿಲ್ಲದಿದ್ದರೆ, ನಿಮ್ಮಜ್ಜಿ ಮನೆಯಲ್ಲಿ ಒಂದು ದಿನ ಮಲಗಿದ್ದೆನಲ್ಲ! ಅಲ್ಲಿರಬಹುದು. ದಯವಿಟ್ಟು ಕೇಳು. ಅಂತೂ ಬೆಂಗಳೂರಲ್ಲೇ ಇದೆ ಅದು. ಅಯ್ಯೋ ಪೀಕಲಾಟವೇ ಅಂತ ಮರುಗೀಚಿದೆ.

ಅಯ್ಯಾ ಮಹಾಪ್ರಾಣಿ!

ನಿನ್ನ ಕಾಗದ ತಲ್ಪಿತು ಅಭಿಪ್ರಾಯವಾಗಲಿಲ್ಲ. ನಿನ್ನ ಹಿಂದಿನ ಕಾಗದ ಬಂದೊಡನೆ ಮನೆಯೆಲ್ಲಾ ತಲಾಷ್‌ಮಾಡಿದೆ ನಿನ್ನ ರಗ್ಗು ಅದರಾಣೆ ಇಲ್ಲಿಲ್ಲ. ಮೊನ್ನೆ ನಮ್ಮ ಮನೆಯಲ್ಲಿ ಚಿಕ್ಕದೊಂದು ಕಳ್ಳತನವಾಯಿತು. ನಿನ್ನ ದುಃಖದಲ್ಲಿ ಇದೇನು ಅಂತ ಬರೆಯಲಿಲ್ಲ. ಆ ಕಳ್ಳತನದಲ್ಲಿ ನಿನ್ನ ದುಪಟಿ ಮಾಯವಾಗಿರಬಹುದೆಂದು ನೀನು ಊಹಿಸಬಹುದು ಅದು ಅಸಾಧ್ಯ ಯಾವ ಖದೀಮ ಕಳ್ಳನಿಗೂ ನಿನ್ನ ದುಪಟಿಮೇಲೆ ಕೈಮಾಡಲು ಎದೆ ಬಾರದು.

ನಮ್ಮ ಹುಡುಗರು ಆಟಕ್ಕೆ ತೆಗೆದುಕೊಂಡಿರಬಹುದೆಂದು ಬರೆದಿದ್ದೀಯೆ. ಶುದ್ಧತಪ್ಪು ಭಾವನೆ. ನಮ್ಮ ಮನೆ ಹುಡುಗರು ಕಂಬಳಿ ಮನೆ ಕಟ್ಟಿ ಆಡುತ್ತಿರುವುದುಂಟು. ಆದರೆ ನಿನ್ನ ರಗ್ಗನ್ನು ಮೂಸಿನೋಡುವ ಸಾಹಸಕ್ಕೆ ಕೂಡ ಅವರು ಹೋಗಿಲ್ಲವೆಂಬ ಭರವಸೆ ನನಗಿದೆ. ಸಮಾಧಾನ ತಂದುಕೊ. ಇನ್ನೊಂದು ಸಾರಿ ತುಟಿಕಚ್ಚಿ ಯೋಚಿಸು–ಸಿಕ್ಕುತ್ತೆ.

ನಮ್ಮಜ್ಜಿ ಮನೆಯಲ್ಲಿರಬಹುದೆಂದು ಬೇರೆ ಬರೆದಿರುವೆ. ನಮ್ಮಜ್ಜಿ ಮನೆಗೆ ಮೊನ್ನೆ ಬೆಂಕಿ ಬಿದ್ದು ಮನೆಯಲ್ಲಿದ್ದಬದ್ದದ್ದೆಲ್ಲಾ (ಮನುಷ್ಯರನ್ನು ಬಿಟ್ಟು) ಭಸ್ಮವಾಯಿತು. ಆದ್ದರಿಂದ ನಿನ್ನ 'ರಗ್ಗು' ಅಲ್ಲಿಲ್ಲ. ಇದ್ದಿದ್ದರೆ ಅದು ಎಂತಹ ಬಡಬಾಗ್ನಿಗೂ ಬೇಯುವ ಚಿನ್ಹೆಕೂಡ ತೋರಿಸುತ್ತಿರಲಿಲ್ಲವೆಂಬುದು ನಿನಗೆ ಗೊತ್ತೇ ಇದೆಯಲ್ಲ!

ಅಲ್ಲದೆ ಅಕಸ್ಮಾತ್ ಬೇಹುಷಾರಿಯಿಂದ ರೈಲಿನಲ್ಲಿ ಕಳೆದುಹೋಗಿದ್ದರೆ, ಖಂಡಿತಾ ಇಷ್ಟರಲ್ಲೇ ನಿನ್ನ ಅಡ್ರೆಸ್ಸಿಗೆ ಅದರ ಪಾರ್ಸಲ್ ಬರುತ್ತೆ. ಅದು ಕಾಶೀವರೆಗೆ ಪ್ರಯಾಣಮಾಡಿದ್ದರೂ ವಾಪಸ್, M S R. ಗೇ ಬರುತ್ತೆ. ಬರೀ ವಾಸನೆಯಿಂದ ಕಳೆದು ಹೋದ ಮಾಲುಗಳ ಮಾಲೀಕರನ್ನು ಪತ್ತೆ ಹಚ್ಚುವ ಎಕ್ಸ್‌ಪರ್ಟ್‌ಗಳಿದ್ದಾರಲ್ಲ ರೈಲ್ವೆ ಡಿಪಾರ್ಟ್‌ಮೆಂಟುಗಳಲ್ಲಿ! ತಾಳಿದವನು ಬಾಳಿಯಾನು!

ಇತಿ––––––

ನಂತರ ಎರಡುವಾರ ಅವನ ಉಸಿರಿಲ್ಲ. ಆಮೇಲೆ ಒಂದು ಮಂಗಳವಾರ ಮಟ ಮಟ ಮಧ್ಯಾನ್ಹ ಅರಿಸಿನ ಪೂರಿತ ಲಕ್ಕೋಟಿಯೊಂದು ಬಾಗಿಲ ಸಂದಿನಲ್ಲಿ ಬಿತ್ತು.

ನನ್ನ ಅಚ್ಚುಮೆಚ್ಚಿನ ಬಚ್ಚಾ!

ಮೆಚ್ಚಿದೆ ನಿನ್ನಯ ಹೆಚ್ಚಿನ ಅನುಭವದ ಮಾತಿಗೆ. ಬಚ್ಚಲಿಗಿಳಿದಾಗ ಸ್ವಚ್ಛಮನಸ್ಸಿನಿಂದ ಯೋಚಿಸಿದೆ. ಮನಬಿಚ್ಚಿ, ತುಟಿಕಚ್ಚಿ ತಲೆಕೆರೆದೆ. ಅರೆ ಹುಚ್ಚಾ! ನಿನ್ನ ನೆಚ್ಚಿನ ಹಚ್ಚಡ ಇಲ್ಲೇ ಎಲ್ಲಾದರೂ ಬಚ್ಚಿಟ್ಟಂತೆ ಮರೆಯಾಗಿರಬಹುದೆ? ಹಲ್ಲಿ ಲೊಚ್ಚಲೊಚ್ಚೆಂದಿತು. ನನ್ನ ಹೊಟ್ಟೆಯಲ್ಲಿದ್ದ ಕಿಚ್ಚು ನಂದಿತು. ಬೆಚ್ಚಗೆರೆಡು ಚೊಂಬು ತಲೆಗೆ ಹಾಕಿ ಕಣ್ಣೊರಸಿಕೊಳ್ಳುವಾಗ ಹಿತ್ತಲಿನ ಹಚ್ಚ ಹಸುರಿನ ಮಧ್ಯೆ ಮಳೆಯೆಂದು ಬೆಚ್ಚಗೆ ಹೊಚ್ಚಿದ್ದಾಳೆ ನಮ್ಮಾಕೆ ಸೌದೆ ರಾಶಿಯ ಮೇಲೆ ನನ್ನ water proof ಹಚ್ಚಡವ. ಏನು ಕೆಚ್ಚೆದೆ! ಹೆಚ್ಚೇಕಿ ತುಸುರೇಗಿ 'ವಿಚ್ಚೀ' (ನಮ್ಮಾಕೆ 'ವಿಶಾಲಾಕ್ಷಿ') ಅಂದೆ.

"ನಿಮ್ಮ ದಯವೇನು, ನಿಮ್ಮ ದುಪಟಿ ದಯದಿಂದ ಸೌದೆ ಅಂಥಾ ಮಳೆಯಲ್ಲೂ ಒಣಗಿ ಸದ್ಯ ಕಣ್ಣುರಿ ತಪ್ಪಿತು ನಾಲ್ಕು ದಿನ" ಅಂತ ರಗ್ಗು ತೆಗೆದು ಸೌದೆ ಒಳಕ್ಕೆ ಸಾಗಿಸಿದಳು.

ಹೆಚ್ಚೇನೂ ಇಲ್ಲ. ನಾಳೆ ವಾರ ಹಚ್ಚಡ ಒಗೆಯಬೇಕೆಂದು ಪ್ರೋಗ್ರಾಂ ಹಾಕಿದೆ ಇದನ್ನು ಕೇಳಿ, ಆರುಚಾರು ಸೋಪು, 1/2 ಮಣ ಸೀಗೆ, ಒಂದು ಮಕರಿ ಚೌಳುಮಣ್ಣು, ಬೇಯಿಸುವುದಕ್ಕೆ 5 ಮಣ ಸರ್ವೆ ಸೌದೆ, ಒಂದು ರಾಜಾರಾಣೀ ಸಾಬೂನು ನಾಲ್ಕಾಣೆ ಪಾಷಾಣ ಎಲ್ಲಾ ಪಟ್ಟಿ ಹಾಕಿಟ್ಟಿದ್ದಾಳೆ ನಮ್ಮಾಕೆ.

ಮುಂದಿನ ತಿಂಗಳು ಮ್ಯಾಚಿಗೆ ಬರುವಾಗ ತರುತ್ತೇನೆ ನೋಡು. ಗುರುತೇ ಸಿಗಲಾರದು ಅದು ನನಗೆ 9 ವರ್ಷದಿಂದ All purpose rug ಆಗಿದೆ. ಹೋಲ್ಡಾಲು, ಜಮ್ಖಾನ, ಕಂಬಳಿ, ಕೆಲವೇಳೆ ಟವಲು, ಪಂಚೆ ಕೂಡ ಆಗಿದೆ ಪ್ರಯಾಣದಲ್ಲಿ!

ವೃಥಾ ತೊಂದರೆ ಕೊಟ್ಟೆ. ಕ್ಷಮಿಸು ರಗ್ಗು ಪತ್ತೆಯಾದಾಗಿನಿಂದ ಮನಸ್ಸು ಉಲ್ಲಾಸವಾಗಿದೆ. ರಜ ತೆಗೆದುಕೊಂಡೆ ಈ ದಿನ. ನುಗ್ಗೇಕಾಯಿ ಹುಳಿಮಾಡಿ ಸಂಡಿಗೆ ಕರೀ ಅಂದಿದ್ದೇನೆ. ಅಷ್ಟೆ. ಅರರೆ! ನನ್ನೆದುರಿಗೆ ಬಾಗಿಲ ಮೂಲೆಯಲ್ಲಿರುವ ರಗ್ಗನ್ನು ಯಾರೋ ಮೆಲ್ಲಗೆ ಎಳೆದಂತೆ ತೋರುತ್ತೆ ಒಳಗಿಂದ. ಏನೋ ಕೃತ್ರಿಮ!

**ಇಂತು–ರಾಮು.**

ದಯಾನಿಧೇ! ಸದ್ಯ ದುಪಟಿ ವ್ಯವಹಾರ ನಿಂತಿಲ್ಲ! ಒಂದು ಬಟ್ಟಲು ಚಾ ಹೀರೋಣ ಅಂತ ಎದ್ದು ಹೊರಟೆ. ■

---

# ಟೀಎಸ್ಸಾರ್ ಭೂಬಾಣದ ಝಲಕ್

ಗಂಡನ ಹೆಸರಿನ ಹಿಂದೆ ಹೆಂಡತಿಯ ಹೆಸರನ್ನು ಸೇರಿಸಿಕೊಂಡು ಸಂಬೋಧನೆ ಮಾಡುವ ಲೋಕಾರೂಢಿಯನ್ನು ಮಹಿಳಾ ವರ್ಷದಲ್ಲಿ ಬದಲಾಯಿಸಿ ಹೆಂಡತಿಯ ಹೆಸರಿನ ಹಿಂದೆ ಗಂಡನ ಹೆಸರನ್ನು ಸೇರಿಸಿಕೊಳ್ಳುವ ಸಂಪ್ರದಾಯವನ್ನೇಕೆ ಜಾರಿಗೆ ತರಬಾರದೆಂಬುದಾಗಿ ಲಖನೌದಲ್ಲಿ ನಡೆದ ವಿಶ್ವ ಮಹಿಳಾ ವರ್ಷದ ವಿಚಾರ ಗೋಷ್ಠಿಯಲ್ಲಿ ಸವಾಲು ಹಾಕಲಾಯಿತಂತೆ.

**ಭಲೋ ವಿಚಾರ, ಕಾಲಕಾಲದಿಂದ ಮನೆಯ ಗಂಡಸು ಸಾಮಾನ್ಯವಾಗಿ ಹೆಂಗಸಿನಂತೆಯೇ ವಿಧೇಯತೆಯಿಂದ ನಡೆದುಕೊಂಡು ಬರುತ್ತಿಲ್ಲವೇ ?**

# ಸ್ಮಾರ್ಟ್ ಫೋನೂ , ಒಡೆಯುವ ಸ್ಕ್ರೀನೂ !

। ಸೂರ್ಯ ನಾರಾಯಣ .ಹೆಚ್ .

ಸ್ಮಾರ್ಟ್ ಫೋನ್ ಇಲ್ಲದವರು ಈಗ ವಿರಳಾತಿವಿರಳ. ಒಂದಕ್ಕಿಂತ ಹೆಚ್ಚು ಸ್ಮಾರ್ಟ್ ಫೋನ್ ಹೊಂದಿದವರೂ ಸಾಕಷ್ಟು ಜನ ಇದ್ದಾರೆ. ನನ್ನ ಹತ್ತಿರವೂ ಒಂದು ಇದೆ. 'i'Phone ಅಲ್ಲ... 'my'Phone ಅಷ್ಟೇ. 2005 ರ' Nokia 1100' ಮಾಡೆಲ್ ನಿಂದ ತೊಡಗಿ , ಇಂದಿನವರೆಗೆ ಬಹಳಷ್ಟು ಫೋನ್ ಗಳನ್ನು ಬಳಸಿದ್ದೇನೆ. ಅವೆಲ್ಲರ ಗುಣಾವಗುಣಗಳ ಬಗ್ಗೆ ವಿಮರ್ಶೆ ಮಾಡಲು ಬೇರೆ ತಾಂತ್ರಿಕ ನಿಪುಣರಿದ್ದಾರೆ. ಆದರೆ ಒಂದು ವಿಷಯ ನನ್ನ ಅನುಭವಕ್ಕೆ ಬಂದದ್ದು, ಫೋನಿನ ಬೆಲೆ ಹೆಚ್ಚಾದಷ್ಟೂ, ಅದು ಕೈಯಿಂದ ಜಾರಿ ಬೀಳುವ ಮತ್ತು ಸ್ಕ್ರೀನ್ ಒಡೆಯುವ ಸಾಧ್ಯತೆಗಳು ಹೆಚ್ಚು.!

2005ರಲ್ಲಿ ನೋಕಿಯಾ 1100 ಕೊಂಡಾಗ, ಹೆಚ್ಚು ಕಡಿಮೆ 4–5 ವರ್ಷ ಅದೇ ಫೋನ್ ಬಾಳಿಕೆ ಬಂದಿತ್ತು. ನನ್ನೊಂದಿಗೆಯೇ, ಮಳೆಯಲ್ಲಿ ನೆಂದು, ಬಿಸಿಲಲ್ಲಿ ಬೆಂದ ಅನುಭವವಿತ್ತು ಅದಕ್ಕೆ... ನಾನು ಬಸವಳಿದರೂ ಅದು ಬಸವಳಿಯುತ್ತಿರಲಿಲ್ಲ! ಮಳೆಯಲ್ಲಿ ನೆಂದಾಗಲೂ, ಮೊಬೈಲನ್ನು ಒಮ್ಮೆ ಒಣಬಟ್ಟೆಯಲ್ಲಿ ಒರಸಿದರೆ ಆಯಿತು. ಹೆಚ್ಚೆಂದರೆ , ಒಮ್ಮೆ ಹಿಂಭಾಗದ ಕವರ್ ಬಿಚ್ಚಿ, ಬ್ಯಾಟರಿ ಯನ್ನು ಒಣಬಟ್ಟೆಯಲ್ಲಿ ಒರಸಿ, ಬಾಯಿಯಿಂದ ಗಾಳಿ ಊದಿದರೆ ಅದಕ್ಕೆ ಸಮಾಧಾನವಾಗುತ್ತಿತ್ತು. ಸ್ವಿಚ್ ಆನ್ ಮಾಡಿದರೆ ಪುನಃ ವರ್ಕ್ ಆಗಲಿಕ್ಕೆ ತೊಂದರೆ ಇರಲಿಲ್ಲ. ಕೆಲವು ಸಲ ನನ್ನ ಕೈಯಿಂದ ನೆಲಕ್ಕೆ ಬಿದ್ದು 3 ಭಾಗಗಳಾಗಿ ಚದುರಿದ್ದು ಇದೆ. 3 ಭಾಗಗಳು ಎಂದರೆ, (1) ಕೀಪ್ಯಾಡ್,ಸ್ಕ್ರೀನ್ ಸಹಿತ ಇರುವ ದೊಡ್ಡ ಭಾಗ, (2) ಬ್ಯಾಟರಿ (3)ಹಿಂಭಾಗದ ಕವರ್. ಈ ಮೂರು ಭಾಗಗಳನ್ನು ಒಟ್ಟು ಸೇರಿಸಿದರೆ, ಜರಾಸಂಧನಂತೆ ಪುನಃ ಜೀವ ತಳೆದು ಕೆಲಸ ಮಾಡಲು ಸುರು ಮಾಡುತ್ತಿತ್ತು!!. ಅದನ್ನು ಒಲ್ಲದ ಮನಸ್ಸಿನಿಂದಲೇ ನಿವೃತ್ತಿ ಮಾಡಿಸಿದ್ದು ; ಹೊಸ ಮೋಡೆಲ್ಗಳು ಬಂದ ಕಾರಣ !

ಇತ್ತೀಚೆಗಿನ 5–6 ವರ್ಷಗಳಲ್ಲಿ, ಅಷ್ಟೇ ಸಂಖ್ಯೆಯ ಫೋನ್ಗಳನ್ನೂ ಕೊಂಡುಕೊಳ್ಳಬೇಕಾಗಿ ಬಂತು. 'ಮೆಮೊರಿ ಸಾಲಲ್ಲ', '3ಜಿ ಸಿಗಲ್ಲ', 'ಕ್ಯಾಮೆರಾ ಹಳತಾಯಿತು', 'ಮುಂದೆಯೂ, ಹಿಂದೆಯೂ ಕ್ಯಾಮೆರಾ ಬೇಕೇ ಬೇಕು' ..... ಹೀಗೆಲ್ಲ ಕಾರಣಗಳನ್ನೂ ಆಕ್ಷೇಪಗಳನ್ನೂ ಸ್ವಲ್ಪ ಕಾಲ ಎದುರಿಸಿ ತಡೆದುಕೊಳ್ಳುತ್ತಿದ್ದೆ. ಆದರೆ, ಒಡೆದ ಸ್ಕ್ರೀನ್ ಒಂದು ತಾಳಿಕೊಳ್ಳಲು ಆಗುವುದಿಲ್ಲ.

ಮೊದಲ ಸ್ಮಾರ್ಟ್ ಫೋನ್ ಕೊಂಡಾಗ ಅನುಭವದ ಕೊರತೆ, ಸ್ಕ್ರೀನ್ ಕವರ್/ ಗಾರ್ಡ್ ಹಾಕಿಸಿರಲಿಲ್ಲ. ಕೊಂಡು ತಿಂಗಳಾಗುವಷ್ಟರಲ್ಲೇ, ಕೈಯಿಂದ ಬಿತ್ತು. ಪ್ರಥಮ ಪ್ರಯತ್ನದಲ್ಲೇ ಸ್ಕ್ರೀನೂ ಒಡೆದು ಹೋಯಿತು. ಬೇಸರ ನುಂಗಿಕೊಂಡು , ಅದೇ ಕಂಪನಿಯವರ ಸರ್ವಿಸ್ ಸೆಂಟರಿಗೆ ಹೋಗಿ ಒಂದಷ್ಟು ದುಡ್ಡು ಪೀಕಿ ಹೊಸ ಸ್ಕ್ರೀನ್ ಹಾಕಿಸಿ ಆಯಿತು. ಈ ಸರ್ತಿ ಅವರು ಸಲಹೆ ಕೊಟ್ಟಂತೆ, 300 ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟು ಸ್ಕ್ರೀನ್ ಗಾರ್ಡ್ ಹಾಕಿಸಿದೆ. ಮುಂದೊಂದು ದಿನ ಅಂಗಿ ಕಿಸೆಯಲ್ಲಿ ಇಟ್ಟಿದ್ದ ಫೋನ್, ನಾನು ಯಾವುದೊ ಕಾರಣಕ್ಕೆ ಮುಂದೆ ಬಗ್ಗುವಾಗ ಕೆಳಗೆ ಬಿದ್ದಿತು. ಸ್ಕ್ರೀನ್ ಗಾರ್ಡ್ ಇದ್ದರೂ, ಟಚ್ ಸ್ಕ್ರೀನ್ ಬಿರುಕು ಬಂದಿತ್ತು. ಸಿಮೆಂಟ್ ನೆಲಕ್ಕೆ ಬಿದ್ದರೆ ಹಾಗಾಗುತ್ತದೆ ಎಂಬ ಸಮಜಾಯಿಸಿ ಸಿಕ್ಕಿತು; ಒಂದೇ ಬಿರುಕು ಮಾತ್ರ ಬಂದುದು ಆ ಸ್ಕ್ರೀನ್ ಗಾರ್ಡ್ ರಕ್ಷಣೆಯಿದ್ದುದರಿಂದ

ಎಂಬ ಹೆಗ್ಗಳಿಕೆ ಬೇರೆ ಹೇಳಿದ ಸರ್ವಿಸ್ ಸೆಂಟರಿನವನು!

ಕಾಲಾಂತರದಲ್ಲಿ ನಂತರದ ಮೊಬೈಲ್ ಬಂತು. ಇದಕ್ಕೆ ಹೆಚ್ಚು ಕಡಿಮೆ 750 ರೂ ತೆತ್ತು , ಸ್ಕ್ರೀನ್ ಕವರ್ ಮತ್ತು, ಹಿಂಭಾಗಕ್ಕೂ ಒಂದು ಕವರ್ ಇರಲಿ ಎಂದು ಹಾಕಿಸಿದೆನು. ಒಂದು ದಿನ ಸಪತ್ನೀಕನಾಗಿ ಹತ್ತಿರದ ನೆಂಟರ ಮನೆಗೆ ಹೋಗಬೇಕಾಗಿ ಬಂತು. ಅವರ ಮಗು, ಒಂದೂವರೆ ವರ್ಷ ಆಗಿರಬಹುದು. ಸಭ್ಯತೆ, ಶಿಷ್ಟಾಚಾರದ ಅಂಗವಾಗಿ, ಆ ದಂಪತಿಗಳಿಗೆ ನನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿಸಬೇಕಲ್ಲವೇ..? ಹಲ್ಲು ಕಿರಿಯುತ್ತ ಮಗುವನ್ನು ಎತ್ತಿಕೊಳ್ಳುವಂತೆ..'ಬಾ' ಎಂದು ಸ್ವಲ್ಪವೇ ಕೈ ಚಾಚಿದೆನು. ನಾನು ಚತುರ್ನೇತ್ರನಾದುದರಿಂದ, ಹೆಚ್ಚಾಗಿ ಚಿಕ್ಕ ಮಕ್ಕಳು ನನ್ನ ಹತ್ತಿರ ಬರುವುದಿಲ್ಲ ಎಂಬ ಒಂದು ಅನುಭವದ ಭರವಸೆಯ ಮೇಲೆ 'ಬಾ' ಎಂದದ್ದು. ಅರೆ..! ಮಗು ನಗುತ್ತ ಅಮ್ಮನ ತೋಳಿನಿಂದ ಇತ್ತ ಬಾಗಿತು. ಹಿಂಜರಿಯುವ ಪ್ರಶ್ನೆಯೇ ಇಲ್ಲ.. "ಹಾ ಹಾ .. ಬಾರೋ..!" ಎತ್ತಿಕೊಂಡು ಆಯಿತು. 5 ಸೆಕೆಂಡಿನಲ್ಲಿಯೇ ಮಗುವನ್ನು ಸ್ವಸ್ಥಾನಕ್ಕೆ ಸೇರಿಸುವುದು ಎಂದು ನನ್ನ ಆಲೋಚನೆ. ಆದರೆ ಅದಕ್ಕೂ ಮೊದಲೇ, ಮಗು ನನ್ನ ಅಂಗಿ ಕಿಸೆಯಲ್ಲಿದ್ದ ಮೊಬೈಲನ್ನು ಎತ್ತಿ ಬಿಟ್ಟಿತು. ಮೊಬೈಲ್ ಬಿದ್ದರೆ ಒಡೆಯದು ಎಂಬ ಒಂದು ಧೈರ್ಯದಲ್ಲಿ ಸುಮ್ಮನೆ ಇದ್ದೆನು. ಒಂದೆರಡು ಕ್ಷಣದಲ್ಲಿಯೇ ಮಗು ಮೊಬೈಲನ್ನು ಬಾಯಿಗೆ ಇಟ್ಟು ಜೋರಾಗಿ ಕಚ್ಚಿತು. ಕೂಡಲೇ ಪೇಚು ನಗೆ ನಗುತ್ತ ಮಗುವನ್ನು ಅಮ್ಮನ ತೋಳಿಗೆ ವರ್ಗಾಯಿಸಿ ಮೊಬೈಲನ್ನು ಮೆಲ್ಲಗೆ ಕೈಗೆ ತೆಗೆದುಕೊಂಡೆನು. ನೋಡುತ್ತೇನೆ, ಸ್ಕ್ರೀನ್ ಒಂದು ಬದಿಯಲ್ಲಿ 2–3 ಬಿರುಕು ಬಂದಿದೆ. ದೀರ್ಘಾಯುಷ್ಮಾನ್ ಭವ!" ಎಂದು ಹರಸಿ, ಮಗುವಿನ ಹಲ್ಲಿನ ಶಕ್ತಿಯನ್ನೂ, ಚೂಟಿತನವನ್ನೂ ಕೊಂಡಾಡಿ, ಕಾಫಿ ಕುಡಿದ ಮೇಲೆಯೇ ಹೊರಟೆನು.

ಆಮೇಲೆಯೂ 4 ಸರ್ತಿ ಸ್ಕ್ರೀನ್ ಒಡೆದಿದೆ ; 1 ಬಾರಿ ನನ್ನ ಕೈಯಿಂದ ಬಿದ್ದೂ, 3 ಬಾರಿ ಮಕ್ಕಳ ಕೈಯಿಂದ ಬಿದ್ದೂ ಒಡೆದಿದೆ . ನನ್ನ ಮಕ್ಕಳು, ನೆಂಟರ ಮಕ್ಕಳು ಎಂದು ಬೇಧ ಭಾವ ಮೊಬೈಲಿಗೆ ಇಲ್ಲ; ನಿಯತ್ತಾಗಿ ಬಿದ್ದಷ್ಟು ಸರ್ತಿಯೂ ಒಡೆದಿದೆ. ಕವರ್, ಸ್ಕ್ರೀನ್ ಗಾರ್ಡ್ ಇತ್ಯಾದಿ ಇದ್ದರೂ, ಬೀಳುವಾಗ ಹೇಗೋ ಮಾಯದಲ್ಲಿ, ಅದರ ಅಂಚು ನೆಲಕ್ಕೆ ಅಪ್ಪಳಿಸುವುದು ಈ ಒಡೆಯುವಿಕೆಯ ಮೂಲ ಕಾರಣ ಎಂದು ಅನುಭವಿಸಿ ತಿಳಿದಿದ್ದೇನೆ. ಅಂಚು ಎಂದರೆ, ಮೊಬೈಲಿನ ಅಗಲ ಭಾಗ ಮತ್ತು ಉದ್ದದ ಭಾಗ ಸೇರುವ ಬಿಂದು. ಇದು ಹೇಗೆ ನೋಡಿದರೂ, ಕವರ್ ಮತ್ತು ಸ್ಕ್ರೀನ್ ಗಾರ್ಡಿನ ಹೊರಗೆ ನಿಲ್ಲುತ್ತದೆ. ಸೂಜಿಮೊನೆಯಷ್ಟು ಇದ್ದರೂ, ಈ ಭಾಗ ಮೊಬೈಲಿಗಿಂತಲೂ ಮೊದಲೇ ನೆಲಕ್ಕಪ್ಪಳಿಸಿ , ನನ್ನನ್ನು ಕಳೆದ 4 ಸರ್ತಿ ದುಃಖ ತಪ್ತನನ್ನಾಗಿಸಿದೆ. ಇಷ್ಟು ಸರ್ತಿಯೂ ಸ್ಕ್ರೀನ್ ಗಾರ್ಡ್ ಒಡೆಯಲಿಲ್ಲ ; ಒಳಗಿನ ಟಚ್ ಸ್ಕ್ರೀನ್ ಒಡೆಯುವುದು ಬಾಕಿ ಆಗಿಯೂ ಇಲ್ಲ !

ನಾನು ಹೇಳಿದ ಈ 4 ಸರ್ತಿಯಲ್ಲಿ, ಒಮ್ಮೆ ಸ್ಕ್ರೀನ್ ಒಡೆದದ್ದು ಕೊರೋನ ಕಾರಣದಿಂದಾಗಿ ! ಹೇಗೆ ಎಂದು ಕೇಳಿದಿರಾ..? ಇತ್ತೀಚೆಗೆ ನಾನು ಸರಕಾರ ಅನುಮತಿಸಿದ ಅಗತ್ಯ ವಸ್ತುವೊಂದನ್ನು ಖರೀದಿಸಲು, ಅನುಮತಿಸಿದ ಸಮಯದಲ್ಲೇ ಪೇಟೆಗೆ ಹೋದೆ. ಸಂಶಯಿಸಬೇಡಿ, ಸುಮ್ಮನೆ 'ಲಾಕ್ ಡೌನ್' ಹೇಗೆ ಮಾಡುತ್ತಾರೆ ಎಂದು ನೋಡಲು ಹೋದದ್ದಂತೂ ಅಲ್ಲ. ಸರಿ, ಹೋಗಿ ಬಂದವನೇ, ಅಂಗಿ ಕಿಸೆಯಲ್ಲಿದ್ದ ಮೊಬೈಲನ್ನು ಮೆಲ್ಲನೆ ಎರಡೇ ಬೆರಳಲ್ಲಿ (ಹೆಬ್ಬೆರಳು ಮತ್ತು ತೋರುಬೆರಳಲ್ಲಿ) ಎತ್ತಿ ಟೇಬಲ್ ಮೇಲೆ ಇಟ್ಟು , ಆಮೇಲೆ ಸ್ವಚ್ಛವಾಗಿ ಕೈ ಕಾಲು ತೊಳೆದು ಬಟ್ಟೆ ಬದಲಾಯಿಸುವುದು ಈ ಕೊರೋನ ಸಮಯದಲ್ಲಿ ನನ್ನ ರೂಢಿ.

ಈ ಎರಡೇ ಬೆರಳಿನಲ್ಲಿ ಮೊಬೈಲ್ ಎತ್ತುವುದು, ಕೈಯಲ್ಲಿ ಏನಾದರೂ ಕೀಟಾಣು ಇದ್ದರೆ, ಮೊಬೈಲಿಗೆ ಅಂಟಿಕೊಳ್ಳುವುದು ಸಾಧ್ಯವಾದಷ್ಟೂ ಕಡಿಮೆ ಆಗಲಿ ಎಂಬ ಉದ್ದೇಶಕ್ಕೆ. ಅಂದೇಕೋ , ಎರಡೇ ಬೆರಳಲ್ಲಿ ಮೊಬೈಲ್ ಎತ್ತಿದ್ದು ಅದಕ್ಕೆ ಇಷ್ಟವಾಗಲಿಲ್ಲ; ಗೌರವ ಕೊಟ್ಟದ್ದು ಕಡಿಮೆಯಾಯಿತೋ ಏನೋ. ಟಪ್ಪೆಂದು ಕೆಳಗೆ ಬಿತ್ತು..ಯಥಾ ಪ್ರಕಾರ ಅಂಚು ನೆಲಕ್ಕೆ ಅಪ್ಪಳಿಸಿತು...ಸ್ಕ್ರೀನ್ ಅಷ್ಟುದ್ದಕ್ಕೆ ಬಿರುಕು ಬಿಟ್ಟಿತು. "ಎರಡು ಕೈಯಲ್ಲಿ ಹಿಡಿದರೂ ಮೊಬೈಲ್ ಎಷ್ಟೋ ಸರ್ತಿ ಬೀಳಿಸಿದ್ದೀರಿ... ಇನ್ನು ಎರಡು ಬೆರಳಲ್ಲಿ ಎತ್ತುವುದು ಬೇಕಿತ್ತೇ...? ಮೊಬೈಲಿನಲ್ಲಿ ಕೊರೋನ ಬರುವುದಿಲ್ಲ ಎಂದು ಹೇಳಿದರೂ ಕೇಳುವುದಿಲ್ಲ ನೀವು !" ಎಂಬ ಉಪದೇಶ ಬೇರೆ ಸಿಕ್ಕಿತು !

ಈಗ ಆಫೀಸಿಗೆ ಹೋಗದೆ ಸ್ವಲ್ಪ ಸಮಯ ಆಯಿತು; ಕೊರೋನ ಮಾಯೆ. ಆಫೀಸಿನಲ್ಲಿದ್ದಾಗ ಬೇರೆ ಕೆಲವರ ಒಡೆದ ಸ್ಕ್ರೀನ್ ನೋಡಿ ಸಮಾಧಾನ ಪಟ್ಟುಕೊಳಬಹುದಿತ್ತು. ಬೇರೆ ಕೆಲವರ ಎಂದಾಗ ನೆನಪಾಯಿತು ನೋಡಿ. ಮುಖ್ಯವಾಗಿ ನನ್ನ ಸ್ತ್ರೀ ಸಹೋದ್ಯೋಗಿಗಳದ್ದು... ಒಡೆದ ಸ್ಕ್ರೀನ್ ಫೋನುಗಳು . ಒಂದು ವಿಷಯ ಅರ್ಥ ಮಾಡಿಕೊಂಡದ್ದು, ಒಡೆದ ಮೊಬೈಲ್ ಸ್ಕ್ರೀನ್ ಇರುವ ಲೇಡಿ ಸಹೋದ್ಯೋಗಿ ಇದ್ದರೆ, ಅವಳು ವಿವಾಹಿತಳೂ, ಚಿಕ್ಕ ಮಗು/ ಮಕ್ಕಳು ಇರುವವಳೂ ಆಗಿರುತ್ತಾಳೆ. ತಾಳಿ, ಕಾಲುಂಗುರ ನೋಡಿ ವಿವಾಹಿತೆ ಎಂದು ತಿಳಿದುಕೊಳ್ಳ ಬಹುದು ...... ಒಡೆದ ಸ್ಕ್ರೀನ್ ನೋಡಿ ಅವಳಿಗೆ ಮಕ್ಕಳೂ ಆಗಿವೆ ಎಂದೂ ಅರ್ಥೈಸಬಹುದು!!!. ಅವಿವಾಹಿತೆಯೋ, ಅವಳು ಸ್ಕ್ರೀನ್ ಒಡೆದ ತಕ್ಷಣ ಒಂದೋ ಹೊಸತು ಕೊಳ್ಳುತ್ತಾಳೆ, ಇಲ್ಲವೇ ಸ್ಕ್ರೀನ್ ಬದಲಿಸುತ್ತಾಳೆ. ಮಕ್ಕಳಿರುವ ಮಹಿಳೆ ಆದರೆ, ಈ ವಿಷಯದಲ್ಲಿ ಸ್ವಲ್ಪ ದಿವ್ಯ ನಿರ್ಲಕ್ಷ್ಯ . ಅವಳಿಗೆ ಗೊತ್ತು, ಸ್ಕ್ರೀನ್ ಚೇಂಜ್ ಮಾಡಿದರೂ ಒಂದೆರಡು ವಾರ ಬಾಳಿಕೆ ಬಂದರೆ ಹೆಚ್ಚು!

ಏನೇ ಆಗಲಿ, ನಿಮ್ಮ ಮೊಬೈಲ್ ಸ್ಕ್ರೀನ್ ಒಡೆದರೆ ಹೆಚ್ಚು ದುಃಖ ಪಡಬೇಡಿ... ನೀವು ಒಂಟಿಯಲ್ಲವೇ ಅಲ್ಲ.. ! ನಾನೂ ಇದ್ದೇನೆ !!

ನನಗೆ ಸ್ಮಾರ್ಟ್ ಫೋನುಗಳ ಬಗ್ಗೆ ಇನ್ನೊಂದು ತಕರಾರೂ ಇದೆ. ಹೊಸ ಮೊಬೈಲಲ್ಲಿ 3–4 ಕ್ಯಾಮೆರಗಳೂ ಇವೆ; ಹಾಗೆಯೆ ಬಲಭಾಗದಲ್ಲಿ 3–4 ಬಟನ್ ಗಳೂ ಇವೆ. ಕರೆ ಸ್ವೀಕಾರ ಮಾಡಲು ಮತ್ತು ಕರೆ ಅಂತ್ಯ ಗೊಳಿಸಲು 2 ಬಟನ್ ಇದ್ದರೆ ಬಹಳ ಅನುಕೂಲವಿತ್ತು. ಅಮೇರಿಕಾ/ ಯೂರೋಪ್ ಬಳಕೆ ದಾರರು ಕೈ ತೊಳೆದುಕೊಳ್ಳುವುದು , ಒದ್ದೆ ಮಾಡುವುದು ಕಡಿಮೆ. ಬೆವರುವುದೂ ಕಡಿಮೆ. ನಾವಾದರೂ, ದಿನಕ್ಕೆ 10 –15 ಸರ್ತಿ ಯಾದರೂ ಕೈ ತೊಳೆದುಕೊಳ್ಳುವುದು ಇದ್ದೇ ಇದೆ. ಆಹಾರ ಸೇವೆ ಮೊದಲು ಮತ್ತು ಬಳಿಕ, ಶೌಚಾಲಯ ಬಳಕೆ, ಸ್ನಾನ... ಇತ್ಯಾದಿ .ಅಲ್ಲದೆ, ಕೈ ಬೆವರು ಕೂಡ ಕೈಯನ್ನು ತೇವಗೊಳಿಸುತ್ತದೆ. ಇದೇ ಸಂದರ್ಭದಲ್ಲಿ ಆಗಿರುತ್ತದೆ ನಮಗೆ ಮೊಬೈಲ್ ಕರೆ ಬರುವುದು. ಟಚ್ ಸ್ಕ್ರೀನ್ ಮುಟ್ಟಿದರೆ, ಕರೆ ಸ್ವೀಕಾರ ಆಗುವುದೇ ಇಲ್ಲ... ಬೆರಳು ಧಾರಾಳವಾಗಿ ಜಾರುತ್ತದೆ. ಇದು ಭಾರತೀಯ ಬಳಕೆದಾರರ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳದೆ, ಮಾಡಿದರೂ ಮಹತ್ವ ಕೊಡದೆ ನಿರ್ಲಕ್ಷಿಸಿದುದಾಗಿ ನನ್ನ ಭಾವನೆ.! ಪರವಾಗಲಿಲ್ಲ, ಇನ್ನಾದರೂ ಕರೆ ಸ್ವೀಕಾರ ಮಾಡಲು ಮತ್ತು ಕರೆ ಅಂತ್ಯ ಗೊಳಿಸಲು 2 ಬಟನ್, ಮೊಬೈಲಿನ ಬಲದೋ, ಎಡದೋ... ಒಟ್ಟಿನಲ್ಲಿ ಎಲ್ಲಾದರೂ ಆದೀತು. ಸೇರಿಸಿಬಿಡಿ ಎಂದು ಫೋನ್ ತಯಾರಕರನ್ನು ಒತ್ತಾಯಿಸುತ್ತಿದ್ದೇನೆ.! ■

# ಚಾಲಾಕಿ ಪಿ.ಎ.

**●ಅರವಿಂದ.ಜಿ. ಜೋಷಿ**

ತನ್ನ ಪೂರ್ವ ಜನ್ಮದ ಪುಣ್ಯದಿಂದಲೋ ಅಥವಾ ಪಕ್ಷದ ಪ್ರಭಾವದಿಂದಲೋ ಅಂತೂ ಈ ಬಾರಿಯ ಚುನಾವಣೆಯಲ್ಲಿ ಪ್ರಪ್ರಥಮ ಬಾರಿ ಶಾಸಕನಾಗಿ ಚುನಾಯಿತನಾಗಿದ್ದ ಐವತ್ತರ ಹರೆಯದ ಮಾನಪ್ಪ. ತನ್ನೆದುರು ನಿಂತ ಜನರೊಂದಿಗೆ ಮಾತನಾಡಲು ಮುಂದಾದರೆ ಆತನ ಗಂಟಲಿನ ದ್ರವ ಒಣಗಿದಂತಾಗಿ "ಬ್ಬೆ..ಬ್ಬೆ.."ಎನ್ನುವ ಸ್ವರ ಹೊರಹೊಮ್ಮುತ್ತಿತ್ತು. ಆತನ ಕ್ಷೇತ್ರದ ಅಭಿಮಾನಿ ಬಳಗದವರು ಅಂದು "ಪರಿಸರ ಮಾಲಿನ್ಯ ಮತ್ತು ನಾವು"ಎಂಬ ವಿಚಾರಗೋಷ್ಠಿ ಏರ್ಪಡಿಸಿ, ನೂತನ ಶಾಸಕ ಮಾನಪ್ಪನವರನ್ನು ಒಪ್ಪಿಸಿದ್ದರು. ಆ ದಿನ ಕಾರ್ಯಕ್ರಮ ಸಂಜೆ ಐದಕ್ಕೆ ನಿಗದಿಯಾಗಿತ್ತು. ಆದರೆ ಮಧ್ಯಾಹ್ನದಿಂದಲೇ ಹೇಗಪ್ಪಾ ಆ ಸಂದರ್ಭ ಎದುರಿಸೋದು ಎಂಬ ಚಿಂತೆ ಬೆಂಬಿಡದೇ ಮಾನಪ್ಪನ ಮನದಲ್ಲಿ ಕುಟುಕಲಾರಂಭಿಸಿತ್ತು. ಆತನ ಪಿ.ಎ.ಮಹಾ ಚಾಲಾಕಿ, ವಾಕ್ ಚತುರ. ಎಂಥ ಕ್ಲಿಷ್ಟ ಪರಿಸ್ಥಿತಿ ಎದುರಾದರೂ ಬಾಸ್ ನನ್ನು ಕೂಡ ಬಚಾವ್ ಮಾಡುವ  ಟ್ಯಾಲೆಂಟ್ ಹೊಂದಿದ್ದ. ಅಂದು ಸಂಜೆ ಮಾನಪ್ಪ ಪಿ.ಎ. ನೊಂದಿಗೆ ಮ್ಲಾನ ಮನದಿಂದ ಕಾರು ಏರಿ ಹೊರಟಿದ್ದ. ದಾರಿಯುದ್ದಕೂ ತನ್ನ ಮನದಲ್ಲಿ ಕೊತ ಕೊತ ವಿಷಯದ ಬಗ್ಗೆ ಪಿ.ಎ.ನೊಡನೆ ಹಂಚಿ ಮನಸ್ಸು ಹಗುರಾಗಿಸಿ ಕೊಳ್ಳಲು ಯತ್ನಿಸಿದ. ಮಹಾ ಸೂಕ್ಷ್ಮ ಬುದ್ಧಿಯ ಪಿ.ಎ. " ಸಾರ್..ಆ ವಿಷಯ ನನಗೆ ಬಿಟ್ಟು ಬಿಡಿ,"ಎಂದ

"ಅಂದ್ರೇ..ನೀವೇ ಮಾತಾಡ್ತೀರಾ?" ಮಾನಪ್ಪ ಪ್ರಶ್ನಿಸಿದ.

"ಛೆ..ಹಾಗೆಲ್ಲಾದ್ರೂ ಉಂಟೇ, ಸಾರ್, ಅಲ್ಲಿ –ನೀವು ಮಾತಾಡಲ್ಲ ನಾನೂ ಮಾತಾಡಲ್ಲ ನೋಡ್ತಾ ಇರಿ" ಎಂದ.

ಅಷ್ಟರಲ್ಲಿ ಕಾರು, ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳಕ್ಕೆ ತಲುಪಿತು. ಇಬ್ಬರೂ ಕಾರಿನಿಂದ ಇಳಿಯುತ್ತಿದ್ದಂತೆ ನೆರೆದ ಜನ ಶಿಳ್ಳೆ ಚಪ್ಪಾಳೆಗಳಿಂದ ಸ್ವಾಗತಿಸಿದರು. ಮಾನಪ್ಪ ಜೇಬಿನಿಂದ ಕರ್ಚೀಫ್ ತೆಗೆದು ಮುಖ ಒರೆಸಿಕೊಳ್ಳುತ್ತ ವೇದಿಕೆಗೆ ಬಂದು, ತನಗಾಗಿ ಮೀಸಲಿಟ್ಟ ಕುರ್ಚಿ ಮೇಲೆ ಆಸೀನನಾದ. ಮುಂದೆ ಹತ್ತು ಹದಿನೈದು ನಿಮಿಷದಲ್ಲೆಲ್ಲ ಸ್ವಾಗತ ಭಾಷಣ, ಉದ್ಘಾಟನೆ ಕಾರ್ಯ ಮುಗಿಯಿತು.

ಕಾರ್ಯಕ್ರಮದ ಸಂಯೋಜಕ ಮೈಕ್ ಎದುರು ಬಂದು "ಮಹಾ ಜನಗಳೇ, ಈಗ ನಮ್ಮ ನಿಮ್ಮ, ಅಚ್ಚುಮೆಚ್ಚಿನ ನೂತನ ಶಾಸಕರಾದ ಶ್ರೀಯುತ ಮಾನಪ್ಪನವರು ಈ ದಿನದ ಕಾರ್ಯಕ್ರಮದ ಮಹತ್ವದ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲಿದ್ದಾರೆ" ಎಂದು ಅನೌನ್ಸ್ ಮಾಡಿದ. ಮಾನಪ್ಪ ಹಿಂದೆ ಕುಳಿತ ಪಿ.ಎ.ಗೆ ಏನು ಮಾಡುವುದು ಎಂದು ಕಣ್ಣಲ್ಲೇ ಕೇಳಿದ. ಆಗ ಪಿ.ಎ. ಎದ್ದು ಹೋಗಿ ಸಂಕ್ಷಿಪ್ತವಾಗಿ ತನ್ನ ಪರಿಚಯ ಮಾಡಿಕೊಂಡು, "ಮಹನಿಯರೇ ತಮ್ಮಲ್ಲಿ ಇಂದಿನ ಕಾರ್ಯಕ್ರಮದ ಬಗ್ಗೆ ಗೊತ್ತಿದೆ ಎನ್ನುವವರು ದಯವಿಟ್ಟು ಕೈ ಎತ್ತಿ" ಎಂದ. ನೆರೆದ ಜನರಲ್ಲಿ ಶೇಕಡಾ ಎಪ್ಪತ್ತರಷ್ಟು ಜನ ಕೈ ಎತ್ತಿದರು. ಅದನ್ನು ಗಮನಿಸಿದ ಪಿ.ಎ. "ವೆರಿ ಗುಡ್ ನಿಮಗೆ ಗೊತ್ತಿರುವ ವಿಷಯವನ್ನು ಯಾರಿಗೆ ಗೊತ್ತಿಲ್ಲವೋ ಅವರಿಗೆ ನೀವೇ ತಿಳಿಸಿಬಿಡಿ. ಈಗ ಸಾಹೇಬರಿಗೆ ತುರ್ತಾಗಿ ಮೀಟಿಂಗ್‌ಗೆ ಹೋಗಬೇಕಾಗಿದೆ" ಎನ್ನುತ್ತ ಒಂದು ಕೈಯಿಂದ  ಮೊಬೈಲ್ ಕಿವಿಗೆ ಮೆತ್ತಿಕೊಂಡವ ಮಾನಪ್ಪನವರನ್ನು ಹಾರ ಹಾಕಿದ ಗೆಟಪ್ನಲ್ಲಿಯೇ ಕರೆದುಕೊಂಡು ಹೋಗಿ ಕಾರು ಏರಿಬಿಟ್ಟ! ■

# ಕೆಂಪು ಬಸ್ಸಿನ ಕಂಪು

**। ಸುಚಿತ್ರಾ ಹೆಗಡೆ**

ನಾನು ಕಾಲೇಜು ಓದುವ ಕಾಲದಲ್ಲಿ ಸರ್ಕಾರಿ ಕೆಂಪು ಬಸ್ಸುಗಳ ಸುವರ್ಣ ಯುಗ ನಡೆದಿತ್ತು. ಪಿಯುಸಿಯಿಂದ ಬಿಎಡ್ ವರೆಗೆ ಸತತ ಆರು ವರ್ಷಗಳ ಕಾಲ ದಿನವೂ ಹತ್ತಿಳಿಯುತ್ತಿದ್ದ ಈ ಕೆಂಪು ಬಸ್ಸು ಕಲಿಸಿದಷ್ಟು ಬದುಕಿನಪಾಠವನ್ನು ಯಾವ ರೈಲು ಮತ್ತು ವಿಮಾನಗಳೂ ಕಲಿಸಿಲ್ಲ. ಈಗ ಸರ್ಕಾರಿ ಬಸ್ಸುಗಳ ಬಣ್ಣಗಳು ಬದಲಾಗಿ ಕೆಂಪುಬಸ್ಸು ಅಷ್ಟೊಂದು ಕೆಂಪಾಗಿ ಕಾಣುವದೇ ಇಲ್ಲ. ಹಳೆಯ ಕೆಂಪು ಬಸ್ಸುಗಳ ನೆನಪಿನ ನೆರಳು ಬಿದ್ದಾಗಲೆಲ್ಲ ನನ್ನಮನ ತಂಪು ತಂಪು.

ಸುಮಾರು ಇಪ್ಪತ್ತೈದು ಮೂವತ್ತು ವರ್ಷಗಳ ಹಿಂದೆ ಕೆಂಪು ಬಸ್ಸಿನ ಕಂಡಕ್ಟರ್ ಮತ್ತು ಡ್ರೈವರ್ ಗಳು ಯಾವವಿಐಪಿಗಳಿಗಿಂತ ಕಡಿಮೆ ಇರಲಿಲ್ಲ. ಎಷ್ಟೆ ಆದರೂ ರಜನಿಕಾಂತನ ವಂಶಸ್ಥರಲ್ಲವೇ.. ಅವರ ಆ ಖಾಕಿ ಸಮವಸ್ತ್ರ, ಆ ಗತ್ತು .. ನೋಡುತ್ತಿದ್ದ ಆ ಕಾಲದ ಎಷ್ಟೋ ಹುಡುಗರ ಕನಸು ಡ್ರೈವರ್ ಅಥವಾ ಕಂಡಕ್ಟರ್ ಆಗುವುದೇಆಗಿತ್ತು ಎಂದರೆ ನೀವು ನಂಬಲೇಬೇಕು.

ಯಾವ ಡ್ರೈವರ್ ತುಂಬಾ ವೇಗವಾಗಿ ಬಸ್ಸು ಚಲಾಯಿಸುತ್ತಾರೆ..ಸ್ಟೈಲಾಗಿ ಟರ್ನ್ ಮಾಡುತ್ತಾರೆ ಕಂಡಕ್ಟರ್ ರೈಟ್ ಟಿಕೆಟ್..ಟಿಕೆಟ್..ಮುಂದೆ ಹೋಗಿ..ಯಾರ್ರೀ ಸಿರ್ಸಿ..ಸಿದ್ಧಾಪುರ್..ಹಳಿಯಾಳ್ ಹುಬ್ಳೀ..ಎಂದುಹೇಳುತ್ತ ವಿಶಲ್ ಹೊಡೆಯುವ ಶೈಲಿಗೆ ಫಿದಾ ಆಗುವವರ ಗುಂಪೇ ಇತ್ತು. ಆದರೆ ನಮ್ಮಂತ ಬಸ್ ಪಾಸ್ ಇರುವಕಾಲೇಜು ಮಕ್ಕಳು ಅವರಿಗೆ ಬಿಟ್ಟಿಯಾಗಿ ಪ್ರಯಾಣಿಸುವವರಂತೆ ಭಾಸವಾಗುತ್ತಿದ್ದೆವು. ಹ್ಞಾಂ ಕೆಲವು ಸುಂದರ ಹುಡುಗಿಯರಿಗೆ ಮಾತ್ರ ವಿನಾಯಿತಿ ಇತ್ತು.

ನನ್ನ ಬಸ್ಸಿನ ಪ್ರಯಾಣದ ಆ 'ರಸ' ಗಳಿಗೆಗಳನ್ನು ಇಂದಿಗೂ ಮರೆಯಲಾಗಿಲ್ಲ. ಕುಮಟಾದಲ್ಲಿ ಬಸ್ಸು ಬಂದುನಿಂತಾಗ ಮುಂಬೈ ಲೋಕಲ್ ಹತ್ತುವಷ್ಟು ರಷ್ ಅಲ್ಲದಿದ್ದರೂ ನಮ್ಮಲ್ಲಿ ಯಾವಾಗಲೂ ಒಂದು ಇಪ್ಪತ್ತೈದುಮೂವತ್ತು ಜನರ ಗುಂಪು ನುಗ್ಗಿ ಮೊದಲು ಹತ್ತಿ ಸೀಟ್ ಹಿಡಿಯಲು ಸದಾ ಕಾದಿರುತ್ತಿತ್ತು. ನಮ್ಮಕಡೆ ಬಸ್ಸಿನಸೀಟಿನ ಮೇಲೆ ಕರ್ಚೀಫು, ಕೊಡೆ, ಚೀಲ ಏನಾದರೂ ಬಸ್ಸಿನ ಕಿಟಕಿಯಿಂದಲೇ ಇಟ್ಟದ್ದೇ ಆದರೆ ಅದು ಸೀಟ್ ರಿಸರ್ವೇಶನ್ ಮಾಡಿದಷ್ಟೇ ಪಕ್ಕಾ. ತುಂಬಾ ಸಲ ಎಷ್ಟೇ ಮೊದಲು ಹತ್ತಿದರೂ ಎಲ್ಲ ಸೀಟುಗಳ ಮೇಲೆ ಏನಾದರೂ ಇದ್ದು, ನಿಯಮಗಳನ್ನು ಪಾಲಿಸುವ ನಮ್ಮಂತ ಪಾಪದವರು ನಿಂತೇ ಇರಬೇಕಾಗಿತ್ತು. ಆದರೆ ಕ್ರಮೇಣ ಬಿಸಿರಕ್ತದ ಪುಡಿ ಲಾಯರಿಗಳ ಒಂದು ಗುಂಪು ಅವುಗಳನ್ನು ಎತ್ತಿಟ್ಟು " ಸೀಟಿನ ಮೇಲೆ ನಿಮ್ಮ ಹೆಸರೇನಾದರೂ ಬರೆದಿದೆಯಾ..ಮೊದಲು ಹತ್ತಿದವರೇ ಸೀಟಿನ ನಿಜವಾದ ವಾರಸುದಾರರು" ಎಂಬ ಲಾಪಾಯಿಂಟ್ ಮೇಲೆ undefined 'ಕುಳಿತು' ಘನಘೋರ ವಾದವನ್ನೇ ನಡೆಸಿ ಸೀಟಿನ ವ್ಯವಹಾರಕ್ಕೆ ರಾಜಕೀಯ ಬಣ್ಣತುಂಬಿದರು.

ನೋಡ ನೋಡುತ್ತ, ನಂತರದ ದಿನಗಳಲ್ಲಿ ಈ ಸೀಟು ಹಿಡಿಯುವವರು ಸಂಘಟಿತರಾಗಿ ತಮ್ಮ ಪಕ್ಷವನ್ನು ರಚಿಸಿದರು. ಯಾವ ಗುಂಪುಗಳಿಗೂ ಸೇರದ ನಮ್ಮಂತವರಿಗೆ 'ಮಾಫಿಯಾ' ಎನ್ನುವ ಹೊಸ ಪದವನ್ನುಪರಿಚಯಿಸಿದರು. ಆಮೇಲೆ ಇರುವ ಪಕ್ಷ, ಸಿದ್ಧಾಂತದ ಆಧಾರದಲ್ಲಿ ಹೋಳಾಗಿ ಭಿನ್ನಮತೀಯರು ಹೊಸ

ಪಕ್ಷಕಟ್ಟಿದರು.

ಬಿಸಿರಕ್ತದ ಕೆಚ್ಚಿನ ತರುಣರ ಕ್ರಾಂತಿಕಾರಿ ಪಕ್ಷದ ಮುಂದೆ ಮೊದಲನೆಯ ಪಕ್ಷ ಸ್ವಲ್ಪ ಹಳೆಯ ಸಂಪ್ರದಾಯದ್ದುಎಂದೆನಿಸಲು ಶುರುವಾಗಿತ್ತು. ಬಸ್ಸು ನಿಲ್ಲುತ್ತಿದ್ದಂತೆ ಟವೆಲ್ಲು, ಚೀಲಗಳನ್ನು ಇಡುವ ಹಳೆಯ ಪದ್ಧತಿಗಳಿಗೆಲ್ಲಜೋತು ಬೀಳದೇ ಸೀದಾ ಕಿಟಕಿಯಲ್ಲಿ ಮುಖವಿಟ್ಟು ಸೀಟಿನ ಮೇಲೆ, ಗುಟ್ಕಾ ತಿಂದು ಕೆಂಪು ರಸಉಗುಳುವುದೇನು..ಒಂದು ಚಪ್ಪಲಿಯನ್ನೇ ಸೀಟಿನ ಮೇಲೆ ಎಸೆಯುವದೇನು..ಪೈಪೋಟಿಯಲ್ಲಿ ಎಷ್ಟೊಂದುಹೊಸ ಹೊಸ ಸೃಜನಶೀಲ ವಿಧಾನಗಳು ಜಾರಿಗೆ ಬಂದವೆಂದರೆ ನಮ್ಮ ತಟಸ್ಥ ತೃತೀಯ ಬಣ ಇನ್ನು ಮುಂದೆ ಈ ಜನ್ಮದಲ್ಲೇ ಬಸ್ಸಿನದೊಂದೇ ಅಲ್ಲ ಯಾವ ಸೀಟಿನಲ್ಲೂ ಕೂರಲ್ಲ ಎಂದು ಪ್ರತಿಜ್ಞೆ ಮಾಡಿದ್ದೆವು.

ಕರಾವಳಿಯ ಬೇಸಿಗೆಯಲ್ಲಿ, ತುಂಬಿದ ಬಸ್ಸಿನಲ್ಲಿ,  ಅನುಭವಿಸುವ ಶೆಕೆಗೆ, ಬೆವರ ವಾಸನೆಯ ಜೊತೆಗೆ ಹತ್ತು ಹಲವಾರು ನರುಗಂಪುಗಳು ಸೇರಿ ಆಗುವ ಪರಿಮಳದ ಫ್ಯೂಷನ್ ವರ್ಣನಾತೀತ.  ಬಸ್ಸು ಹೊರಡುತ್ತಿದ್ದಂತೆ ಆಹಾ ಎಂದುಕೊಳ್ಳುವಷ್ಟರಲ್ಲಿ ಕುಳಿತವರ ದೂರದ ಪ್ರಯಾಣಿಕರ ಬುತ್ತಿಯ ಗಂಟುಹೊರಬರುತ್ತಿತ್ತು. ಬಗೆಬಗೆಯ ಆಹಾರದ ವಾಸನೆಯಿಂದ ನಮ್ಮ ಹಸಿದ ಹೊಟ್ಟೆಯಲ್ಲಿ ಹಾಹಾಕಾರ.

ಅಷ್ಟರಲ್ಲಿ ಬಸ್ಸು ಪ್ರಯಾಣ ಒಗ್ಗದ, ಅಪರೂಪಕ್ಕೆ ಬಸ್ಸು ಹತ್ತಿ ಕುಮಟೆ ಪೇಟೆಗೆ ಬಂದ ಒಂದೆರಡು ಹೆಂಗಸರುಮಕ್ಕಳು ವಾಂತಿ ಮಾಡುವ ಕಾರ್ಯಕ್ರಮ ಶುರುವಾಗುತ್ತಿತ್ತು. ಹೆಂಗಸರೇನೋ ಕಿಟಕಿಯಲ್ಲಿ ತಲೆ ಹೊರಗೆ ಹಾಕಿವಾಂತಿಯ ಧಾರೆಯನ್ನು ಹಿಂದಿನವರೆಗೂ ಕಳಿಸಿದಾಗ..ಹಿಂದಿನ ಸೀಟಿನವರಿಗೆ ಕಿಟಕಿಗಳು ಸರಿಯಾಗಿಮುಚ್ಚಿಕೊಳ್ಳದೇ ಸವಾಲೆಸೆಯುತ್ತಿದ್ದವು. ಚಿಕ್ಕ ಮಕ್ಕಳ ವಾಂತಿಗೆ ಆಗೀಗ ಕೈ ಬೊಗಸೆಯೇ ಸಿಂಕಿನಂತೆ ವರ್ತಿಸುತಿತ್ತು.

ಹೀಗೆ ಪ್ರಯಾಣಿಕರ ಊಟದ ಆಟವು  ಮುಗಿಯುತ್ತಿದ್ದಂತೆ ನಮ್ಮೂರ ರಸಿಕರ ರಂಗಪ್ರವೇಶ ಕೈಯಲ್ಲಿಕಡ್ಡಾಯವಾಗಿರುವ ಕವಳದ ಸಂಚಿಯೊಂದಿಗೆ. ಈಗ ನಮ್ಮ ಜನರ ಹೃದಯವಂತಿಕೆಯ ಪ್ರದರ್ಶನ ತಮ್ಮದೇಶೈಲಿಯಲ್ಲಿ " ಕವಳ ಹಾಕ್ತ್ರೀ ? ( ಹವ್ಯಕರ ಪ್ರಶ್ನೆಯಲ್ಲೇ ಉತ್ತರವೂ ಅಡಕ) ಎಂದು ಅಪ್ಪಟ ಹವ್ಯಕಕವಳಾತಿಥ್ಯ ಶುರುವಾದ ಕೆಲವೇ ನಿಮಿಷಗಳಲ್ಲಿ ಇಡೀ ಬಸ್ಸು ಭಾವೈಕ್ಯತೆಯ 'ಬೀಡಾ'ಗಿ ಬದಲಾಗುತ್ತಿತ್ತು.

ಎಲ್ಲರ ಬಾಯಲ್ಲಿ ಎಲೆ, ಅಡಿಕೆ, ಸುಣ್ಣ ಮತ್ತು ಹೊಗೆಸೊಪ್ಪಿನ  ಜೊತೆಗೆ ನಮ್ಮೂರಲ್ಲಿ ಎಲ್ಲರ ಅತ್ಯಂತ ನೆಚ್ಚಿನವಿಷಯವಾದ ರಾಷ್ಟ್ರ ಮತ್ತು ರಾಜ್ಯ ರಾಜಕಾರಣಗಳ ಚರ್ವಿತ ಚರ್ವಣ..ಆದರೆ ಈ ಸಲ ತೊದಲು ಮಾತುಗಳಆರ್ಭಟ..ಯಾಕೆಂದರೆ ಎಲ್ಲರ ಬಾಯಲ್ಲಿ ಎಲೆಯಡಿಕೆ ..ಹ್ಞಾ..ಕೆಲವು ಯುವಕರು ಈ ಎಲ್ಲ ಜಂಜಡಗಳಿಗೆಬೀಳದೇ ಸ್ಟೈಲಾಗಿ ಒಂದೇ ಒಂದು ಗುಟ್ಕಾ ಪ್ಯಾಕೆಟ್ ಹರಿದು ಬಾಯಲ್ಲಿ ಸುರುವುತ್ತಿದ್ದರು.

ಆಗ ನಮ್ಮಲ್ಲಿಯ ಹುಲಿಯಮ್ಮ, ನಾಗು, ಕಿಣಿಮಾಮ, ಅಂತೋಣಿ, ರಫೀಕಣ್ಣ ಮುಂತಾದವರು ತಾವೇನು ಕಡಿಮೆ ಎಂದು  ಸೀಟಿನಡಿಯಲ್ಲಿ ಕಂಡಕ್ಟರನ ಕಣ್ಣಿಗೆ

ಕಾಣದಂತೆ ಹುಷಾರಾಗಿ ಅಡಗಿಸಿಟ್ಟ ಕುಮಟೆಯಮೀನುಪೇಟೆಯಿಂದ ತಂದ ಶೆಟ್ಲಿ, ಒಣಮೀನು, ಬಂಗುಡೆ ಮೀನುಗಳಿಂದ ತುಂಬಿದ ಚೀಲಗಳು ತಮ್ಮ ಶಕ್ತ್ಯಾನುಸಾರ ಬಸ್ಸಿನ ವಾತದಲ್ಲಿ ತಮ್ಮ ನಾತವನ್ನೂ ಬೆರೆಸುತ್ತಿದ್ದವು.

ಇಷ್ಟೊತ್ತಿಗೆ ಬಸ್ಸಿನಲ್ಲಿ ಊಟ,ಕವಳ, ಮೀನು,ವಾಂತಿ ಮತ್ತು ಗುಟ್ಕಾ ಮಿಶ್ರಿತ ಒಂದಕ್ಕೊಂದು ಹೊಂದದ ಸಮ್ಮಿಶ್ರಸರಕಾರದ ಅಡ್ಡ ವಾಸನೆ. ಅಷ್ಟರಲ್ಲಿ ನಮ್ಮ ನಿಲ್ದಾಣ ಇನ್ನೇನು ಬಂತು ಎಂದು ಉಸಿರು ಬಿಡುವಷ್ಟರಲ್ಲಿ ಬಹುತೇಕರ ಮುಖಗಳು ಮತ್ತೆ ಕಿಟಕಿಯಲ್ಲಿ ..ಈ ಸಲ ಹಿಂದಿನ ಸೀಟಿನಲ್ಲಿ ಕುಳಿತವರ ಮೇಲೆ ತುಂತುರು ಕೆಂಪುರಸ ಧಾರೆ

ಕೊನೆಗೂ ಕಂಡಕ್ಟರ್ " ಯಾರ್ರೀ ಕತಗಾಲು..ಬರ್ರಿ ಹಿಂದೆ..ಇಳೀರಿ ಬೇಗ.." ಅನ್ನುವಾಗ ನಮ್ಮೂರಿನವರು ಮತ್ತುಮುಂದೆ ಹೋಗುವ ಪ್ರಯಾಣಿಕರಲ್ಲಿ ವಿದಾಯದ ವಿಷಾದಯೋಗ. ಬಿಡಲಾರದೇ ಬೀಳ್ಕೊಟ್ಟು 'ಬರ್ಲೀ..ನಮ್ಮನೆ ಇಲ್ಲೆಯಾ..ಬನಿ ಒಂದ್ಸಲ..ಹ್ಞಾ..' ಅನ್ನುತ್ತ ಕೆಳಗಿಳಿದು ಇನ್ನೊಂದು ಬಾರಿ ಟಾಟಾಅನ್ನುವಷ್ಟರಲ್ಲಿ ಕೆಂಪು ಬಸ್ಸು ಕೆಂಪು ಧೂಳೆಬ್ಬಿಸಿ, ಕಪ್ಪು ಹೊಗೆಯ ಶೂನ್ಯದಲ್ಲಿ ಮಾಯವಾಗುತ್ತಿತ್ತು.

ದ್ವೀಪಗಳಲ್ಲಿ ಬದುಕುತ್ತಿರುವ ಇಂದಿನ ದಿನಗಳಲ್ಲಿ ಇಂಥ ಅಪರೂಪದ ಮಾನವೀಯ ಬಂಧಗಳು, ಮಣ್ಣಿನೊಂದಿಗೆ ಬೆರೆತ ಹಸಿಯಾದ ಬದುಕಿನ ಚಿತ್ರಗಳು ಕೇವಲ ನೆನಪುಗಳಲ್ಲಿ ಮಾತ್ರ ಜೀವಂತವಾಗಿವೆ ಅನ್ನಿಸುತ್ತಿದೆ.



## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



ಕಾಲ ಬಳಿಯಲ್ಲಿರುವ ಬಾಳೇಹಣ್ಣಿನ ಸಿಪ್ಪೆಯನ್ನು ಕಾಣದೆ –
"ಮುಂದೇನು ಬರುವುದೆಂದು ಯಾರಿಗೆ ಈ ಕಾಲದಲ್ಲಿ ಹೇಳುವುದಕ್ಕೆ ಸಾಧ್ಯ ಸ್ವಾಮಿ ?

# ಎತ್ತಣಿಂದೆತ್ತಣ ಸಂಬಂಧವಯ್ಯ!

**। ಸಂಧ್ಯಾ ರಮೇಶ್**

ಸೂರ್ಯನ ರಶ್ಮಿಗಳು ಕಿಟಕಿಯಿಂದ ತೂರಿ ಬಂದು, ಮೊಗವನ್ನು ಚುಂಬಿಸಿ, 'ಎದ್ದೇಳು ಮಾರಾಯಾ, ನಾನಾಗಲೇ ಉದಯಿಸಿ ಎರಡು ತಾಸಿನ ಮೇಲಾಯ್ತು' ಎಂದು ಹೇಳಿದಂತೆ ಭಾಸವಾಗುತ್ತಿದ್ದರೂ, ಏಳಲು ಏನೋ ಸೋಮಾರಿತನ ವೆಂಕ್ಟೂಗೆ. 'ಎಷ್ಟಾದರೂ ರವಿವಾರ, ದಿನಾ ದಡಬಡಿಸಿ ಆಫೀಸಿಗೆ ಹೋಗುವುದು ಇದ್ದದ್ದೇ ಮಾಮೂಲು, ಇನ್ನಷ್ಟು ಹೊತ್ತು ಮಲಗಿದರಾಯ್ತು' ಎಂದು ಮಗ್ಗುಲು ಬದಲಾಯಿಸುತ್ತಿರುವಾಗಲೇ, ಮಲ್ಲಿಗೆಯ ಕಂಪು, ಪರಿಮಳ ಸೂಸುವ ಸೆಂಟು, ಸನಿಹದಲ್ಲೇ ಆಘ್ರಾಣಿಸಿದಂತಾಗಿ, ಮೆಲ್ಲನೆ ಕಣ್ಣು ಬಿಟ್ಟ. ಎದುರಲ್ಲೇ ನಿಂತಿದ್ದಾಳೆ ಭರ್ಜರಿ ರೇಶ್ಮೆ ಸೀರೆಯುಟ್ಟು ಸರ್ವಾಭರಣಭೂಷಿತಳಾಗಿ, ಸರ್ವಾಲಂಕಾರ ಶೋಭಿತಳಾದ ಪತ್ನಿ ಪದ್ಮ.

'ಇದೇನೇ ಪದ್ದು, ಇಷ್ಟು ಬೆಳಿಗ್ಗೆ ಮದ್ವೆ ಹೆಣ್ಣಿನ ತರಹ ತಯಾರಾಗಿದ್ದೀಯಲ್ಲೇ, ಅಥವಾ ಇದು ನನ್ನ ಕನಸೇ' ಎಂದ ಇನ್ನೂ ನಿದ್ರಾದೇವಿಯ ವಶದಿಂದ ಪೂರ್ತಿ ಹೊರಬರದಿದ್ದ ವೆಂಕ್ಟು.

'ರೀ, ಎಷ್ಟು ಸಲ ಹೇಳಿದ್ದೀನಿ ನಿಮಗೆ, ನನ್ನ ಪದ್ದು ಅಂತ ಕರೀಬೇಡಿ, ಪೆದ್ದು ಅಂದ ಹಂಗಾಗುತ್ತೆ. ಪದ್ಮಿನಿ ಅನ್ನೋದು ಕಷ್ಟವಾದ್ರೆ ಪದ್ಮಾ ಅಂತಾದ್ರೂ ಅನ್ನಿ. ಪಕ್ಕದ್ಮನೆ ಜ್ಯೋತಿ ಯಜಮಾನ್ರು ನೋಡಿ, ಹೆಂಡ್ತಿನ್ನ ಚಿನ್ನ, ಬಂಗಾರಿ ಅಂತೆಲ್ಲಾ ಎಲ್ಲರ ಮುಂದೇ ಕರೀತಾರೆ, ನೀವು ಮಾತ್ರ ನನ್ನ ಪದ್ದು, ಪೆದ್ದು ಅಂತ ಕರೆದರೆ ನನಗೆಷ್ಟು ಸಂಕಟ ಆಗಲ್ಲ. ನಿಮಗೆಲ್ಲಿ ಅರ್ಥ ಆಗ್ಬೇಕು? ರಸಿಕತೆ ಬೇಕು ಅದಕ್ಕೆಲ್ಲಾ' ಅಂತ ಎಷ್ಟು ಬಾರಿ ಅವಳಿಂದ ಕೇಳಿಸಿಕೊಂಡಿದ್ದರೂ, 'ನಾಯಿ ಬಾಲ ಡೊಂಕು' ಅನ್ನೋ ಹಾಗೆ ವೆಂಕ್ಟೂ ಮಾತ್ರ ತನ್ನ ರೀತಿಯಲ್ಲೇ ಕರೆಯುತ್ತಿದ್ದುದು ತಪ್ಪಿರಲಿಲ್ಲ.

'ನೋಡಿ, ಇಷ್ಟು ಚೆನ್ನಾಗಿ ಅಲಂಕಾರ ಮಾಡಿಕೊಂಡು ಎಷ್ಟು ಚೆನ್ನಾಗಿ ಕಾಣ್ತಾ ಇದ್ದೀನಿ ಅಂತಾದರೂ 'ಪದ್ಮ' ಅಂತ ಪ್ರೀತಿಯಿಂದ ಕರೆದಿದ್ದರೆ ನಿಮ್ಮ ಗಂಟೇನು ಹೋಗ್ತಿತ್ತೋ?' ಎಂದು 'ಮದ್ವೆ ಹೆಣ್ಣು ಅಂದ್ರಿ, ಮದ್ವೆಗೇ ನಾನು ಹೊರಟಿರೋದು' ಎಂದಳು ಮುನಿಸು ತೋರಿಸುತ್ತಾ.

'ಮತ್ತೆ ಮದ್ವೆ ಏನೇ ನಿಂಗೆ? ನನ್ನ ಗತಿ?' ಧಿಡೀರನೆ ಎಚ್ಚೆತ್ತು ಕುಳಿತ ವೆಂಕ್ಟು.

'ಥೂ, ಹೋಗ್ರಿ, ನಿಮ್ಗೆ ಯಾವಾಗ್ಲೂ ತಮಾಷೇನೇ, ನಾನು ಮೊನ್ನೆ ಹೇಳಿರಲಿಲ್ವಾ, ನನ್ನ ಸೋದರತ್ತೆ ಮಗಳ ನಾದಿನಿ ಮಗಳ ಮದುವೆ ಅಂತ, ನಾನು ಮೊದ್ಲೇ ಹೋಗಿರ್ತೀನಿ. ನೀವು ನಿಧಾನಕ್ಕೆ ಬನ್ನಿ' ವಯ್ಯಾರದಿಂದ ಉಲಿದಳು ಪದ್ಮ.

'ಸೋದರತ್ತೆ ಮಗಳ ನಾದಿನಿ ಮಗಳು, ಏನೇನೋ ಬಾದರಾಯಣ ಸಂಬಂಧ, ಯಾಕೇ ಹೋಗ್ಬೇಕು ಈ ಮದ್ವೆಗೆ' ಬೇಸರದಿಂದ ಗೊಣಗಿದ ಪತಿರಾಯ.

'ಬಾದ್ರಾಯಣ, ರಾಮಾಯಣ ಅಂತೆಲ್ಲಾ ರಾಗ ಎಳೆಯಬೇಡಿ, ನಮ್ಮ ಸೋದರತ್ತೆ ಕಮಲತ್ತೆ ಕಣ್ರೀ, ಎಷ್ಟೋ ಪ್ರೀತಿ ಅವರಿಗೆ ನನ್ನ ಕಂಡ್ರೆ. ಎಷ್ಟು ಉಪಚಾರ ಮಾಡ್ತಾರೆ ನಾವು ಅವರ ಮನೆಗೆ ಹೋದಾಗ್ಲೆಲ್ಲಾ'

’ನಾನಂತೂ ಅವರ ಮನೆಗೆ ಒಂದು ಸಲನೂ ಹೋಗಿದ್ದು ನೆನಪಾಗ್ತಾ ಇಲ್ಲ. ಅವರೇ ನಮ್ಮನೆಗೆ ಬಂದು ’ನಂಗೆ ಆ ತಿಂಡಿ ಇಷ್ಟ, ಈ ಅಡುಗೆ ಇಷ್ಟ, ನೀನು ಎಷ್ಟು ಚೆನ್ನಾಗಿ ಅಡುಗೆ ತಿಂಡಿ ಮಾಡ್ತೀಯೇ’ ಅಂತ ನಿನ್ನ ಹೊಗಳಿ ಅಟ್ಟಕ್ಕೇರಿಸಿ ಚೆನ್ನಾಗಿ ಮೇದು ಹೋಗಿದ್ದು ಮಾತ್ರ ನೆನಪಿಗೆ ಬರ್ತಾ ಇದೆ’ ಛೇಡಿಸಿದ ವೆಂಕ್ಟು.

’ನೋಡಿ, ಹೀಗೆಲ್ಲಾ ನಮ್ಮ ತೌರುಮನೆಯವರನ್ನ ಅವಮಾನ ಮಾಡ್ಬೇಡಿ, ಬೆಳಿಗ್ಗೆ, ಬೆಳಿಗ್ಗೆ. ಈಗ ನಿಮ್ಮ ಜೊತೆ ಆರ್ಗ್ಯೂ  ಮಾಡೋದಿಕ್ಕೆ ಟೈಮ್  ಇಲ್ಲ, ಮಂಗಳಗೌರಿ ಪೂಜೆ ಹೊತ್ತಿಗೆ ಅಲ್ಲಿರ್ಬೇಕು ನಾನು. ತಿಂಡಿ ಟೇಬಲ ಮೇಲೆ ಇಟ್ಟಿದ್ದೀನಿ. ಗಿಫ್ಟ್ ತೊಗೊಂಡಿದೀನಿ. ನೀವು ಊಟದ ಹೊತ್ತಿಗೆ ಬಂದ್ರ ಸಾಕು. ಹಾಂ, ಛತ್ರ ಇರೋದು ವಸಂತನಗರದಲ್ಲಿ, ಸೆಕೆಂಡ್ ಮೇನ್, ಥರ್ಡ್ ಕ್ರಾಸ್, ಲಕ್ಷ್ಮೀ ನಾರಾಯಣ ಕಲ್ಯಾಣ ಮಂಟಪ, ಬರ್ತೀನಿ’ ಅಂತ ಬೈ ಹೇಳಿ ಹೊರಟವಳಿಗೆ, ’ಹ್ಯಾಗೆ ಹೋಗ್ತೀಯೇ’ ಅಂತ ಇವನು ಕೇಳಿದ್ದೇ ತಪ್ಪಾಯ್ತು.

’ಹೋಗ್ತೀನ್ರೀ ಆಟೋದಲ್ಲಿ. ಇಷ್ಟು  ಅಲಂಕಾರ ಮಾಡಿಕೊಂಡು ನಿಮ್ಜೊತೆ ಸ್ಕೂಟರ್ ಮೆರವಣಿಗೆ ಹೋಗೋದಕ್ಕಾಗುತ್ಯೇ? ನಮ್ಹತ್ರಾನೂ ಕಾರ್ ಇದ್ದಿದ್ರೆ, ರಾಣಿ ಥರಾ ನಿಮ್ಮ ಪಕ್ಕ  ಕೂತ್ಕೊಂಡು ಜಂ ಅಂತ ಹೋಗ್ತಿದ್ದೆ’ ಅಂತ ಒಂದು ಮಾತಿನ ಬಾಂಬ್ ಸಿಡಿಸಿ ಹೊರಟಳು ಪದ್ಮ. ಬೆಪ್ಪಾಗಿ ಕುಳಿತ ವೆಂಕ್ಟೂ.

====

ಸಿನಿಮಾ ಹೀರೋ ಥರಾ ಅಲ್ಲದಿದ್ದರೂ, ಇದ್ದುದರಲ್ಲಿಯೇ ಸ್ಮಾರ್ಟ್ ಆಗಿ ಕಾಣುವಂತೆ ತಯಾರಾಗಿ, ಮದುವೆ ಮನೆಯತ್ತ ಹೊರಟ. ಇಲ್ಲದಿದ್ದರೆ ಹೆಂಡತಿ ಸುಮ್ಮನಿರುತ್ತಾಳೆಯೇ?

’ನಾನಿಷ್ಟು ಚೆನ್ನಾಗಿ ಕಾಣುವಂತೆ ಸಿಂಗರಿಸಿಕೊಂಡಿರುವಾಗ, ನೀವು ಆ ಬಣ್ಣ ಹೋದ ಶರ್ಟ್ ಹಾಕ್ಕೊಂಡು ನನ್ ಜೊತೆ ಬಂದ್ರೆ ನನಗೆಷ್ಟು ಮುಜುಗರ ಆಗತ್ತೆ ಎಲ್ಲರ ಮುಂದೆ! ನನ್ನ ಜೊತೆ ಹೊರಗೆ ಬರುವಾಗಲಾದ್ರೂ ಸ್ವಲ್ಪ ಟ್ರಿಮ್ ಆಗಿ ಡ್ರೆಸ್ ಆಗ್ಬಾರ್ದಾ’ ಅಂತ ಎಷ್ಟು ಬಾರಿ ಹೇಳಿದ್ದಾಳೋ?

ಮಧ್ಯಾಹ್ನ 12.30 ಹೊತ್ತಿಗೆ  ಕಲ್ಯಾಣಮಂಟಪದ ಮುಂದೆ ಸ್ಕೂಟರ್ ಪಾರ್ಕ್ ಮಾಡಿ, ಒಳನಡೆದ. ಮುಗುಳ್ನಗುತ್ತಾ, ಪನ್ನೀರು, ಗುಲಾಬಿ ಹೂವಿನೊಂದಿಗೆ ಸ್ವಾಗತಿಸಿದರು ಸಾಲಾಗಿ ನಿಂತಿದ್ದ ಲಲನಾಮಣಿಯರು. ಬಿಸಿಲಲ್ಲಿ ಬಂದಿದ್ದರಿಂದ ಸುಧಾರಿಸಿಕೊಳ್ಳಲು ಹತ್ತಿರದ ಕುರ್ಚಿಯೊಂದರಲ್ಲಿ ಆಸೀನನಾದ.

ಮದುವೆ ಮನೆ ವಾತಾವರಣ, ಸಡಗರ, ಸಂಭ್ರಮ ತುಂಬಿ ತುಳುಕಾಡುತ್ತಿತ್ತು ಎಲ್ಲೆಲ್ಲೂ! ಕುರ್ತಾ, ಪೈಜಾಮಾಧಾರಿಗಳು, ಸೂಟುಬೂಟುಧಾರಿಗಳು ಅಲ್ಲಲ್ಲಿ ಗುಂಪಾಗಿ ಹರಟುತ್ತಿದ್ದರೆ, ರೇಶ್ಮೆ ಸೀರೆ, ಝುಗಮಗಿಸುವ, ಕಣ್ಣು ಕೋರೈಸುವ ಆಭರಣಗಳನ್ನು ತೊಟ್ಟು, ಮೋಹಕ ನಗುವಿನೊಂದಿಗೆ ನೂತನ ಲೋಕದಲ್ಲಿ ವಿಹರಿಸುತ್ತಿರುವಂತೆ ಕಾಣುವ ಪ್ರಮೀಳಾ ವೃಂದ. ಮಿನಿ ಆಭರಣಗಳ ಮಳಿಗೆ, ಅಥವಾ ರೇಶ್ಮೆ ಸೀರೆಗಳ ಶೋರೂಂ ಹಾಗೆ ಕಲ್ಯಾಣ ಮಂಟಪ ಗೋಚರಿಸುತ್ತಿತ್ತೆಂದರೆ ಉತ್ಪ್ರೇಕ್ಷೆ ಅಲ್ಲ. ಇನ್ನು ಮಕ್ಕಳ  ಆಟೋಟಗಳ ಕಲರವ, ಎಲ್ಲವನ್ನೂ ಮೂಕಪ್ರೇಕ್ಷಕನಾಗಿ ನೋಡುತ್ತಿದ್ದ ವೆಂಕ್ಟು.

ಮಾಂಗಲ್ಯಧಾರಣೆಯೂ ಆಗಿ, ವಧುವರರನ್ನು ಅಭಿನಂದಿಸಲು 'ಕ್ಯೂ' ಹನುಮಂತನ ಬಾಲದಂತಿತ್ತು. 'ಎಲ್ಲಾ ಸರಿ, ಒಬ್ರೂ ಪರಿಚಯದವರು ಕಾಣ್ತಾ ಇಲ್ವಲ್ಲ?

ನವದಂಪತಿಗಳಿಗೆ ವಿಶ್ ಮಾಡಲು ಹೋಗೋಣ ಎಂದರೆ, ಅವರ ಪರಿಚಯವೇ ಇಲ್ಲ. ಈ ಪದ್ದು ಜೊತೆ ಹೋದರೇನೇ ಮರ್ಯಾದೆ! ಇಲ್ಲಾಂದ್ರೆ ತನ್ನ ಕುಲ, ಗೋತ್ರ, ವಂಶಾವಳಿ ತಾನೇ ಹೇಳಿಕೊಳ್ಳೋದೇ? ಇನ್ನೂ ಅವಮಾನ! ಪತ್ನಿಗಾಗಿ ಅಷ್ಟದಿಕ್ಕುಗಳಲ್ಲೂ ಕಣ್ಣಾಡಿಸಿ ಅರಸಲು ಯತ್ನಿಸಿದ.

'ಎಲ್ಲೂ ಕಾಣ್ತಾ ಇಲ್ವಲ್ಲ ಇವಳು? ಗಂಡ ಬರ್ತಾನೆ ಅಂತ ಕಾತುರದಿಂದ ಕಾಯ್ತಾ ಇರ್ತಾಳೆ ಅಂದ್ರೆ, ಇಂಥಾ ಇಕ್ಕಟ್ಟಿಗೆ ಸಿಕ್ಕಿಸಿ ಹಾಕಿಸಿದಳಲ್ಲಾ?' ಎಂದುಕೊಳ್ಳುತ್ತಿರುವಾಗಲೇ, ಆ ಕಡೆ ಮಾತಿನಲ್ಲಿ ತೊಡಗಿ ಯಾವುದಕ್ಕೋ ನಗುತ್ತಿದ್ದ ಮೂರ್ನಾಲ್ಕು ವನಿತೆಯರಲ್ಲಿ ಹೆಂಡತಿಯನ್ನು ಗುರ್ತಿಸಿಯೇ ಬಿಟ್ಟ ವೆಂಕ್ಟು. ಹಸಿರು ರೇಷ್ಮೆ ಸೀರೆ, ಗುಲಾಬಿ ಬಾರ್ಡರ್ ದು, ಮುಡಿ ತುಂಬಾ ಮಲ್ಲಿಗೆ. ತನ್ನ ಕಡೆ ಒಮ್ಮೆಯೂ ತಿರುಗಿ ನೋಡಬಾರದೇ? ಇವಳ ಮಾತಿಗೆ ಬೆಲೆ ಕೊಟ್ಟು ಯಾರ್ದೋ ಮದ್ವೆಗೆ ಬಂದಿದ್ರೂ ಇಷ್ಟು ತಾತ್ಸಾರ ಇವಳಿಗೆ ಅಂತ ಅವಳತ್ತ ಹೋಗಿ ಸೀರೆ ಸೆರಗು ಎಳೆದದ್ದೇ ತಡ, ತಿರುಗಿ ನೋಡಿದಾಕೆಯ ಮುಖದರ್ಶನವಾದ ಕೂಡಲೇ ವಿದ್ಯುತ್ ಶಾಕ್ ತಗುಲಿದಂತವನಾಗಿಬಿಟ್ಟ! ಕೆಂಗಣ್ಣುಗಳಿಂದ ಇವನತ್ತ ದುರದುರನೆ ನೋಡಿದಳಾ ನಾರಿ, ನಡುಗಿಹೋದನಿವನು ಅವಳ ರುದ್ರಾವತಾರ ಕಂಡು!

'ಯಾರ್ರೀ ನೀವು, ಮದ್ವೆ ಮನೆಗೆ ಬಂದು ಈ ಥರಾ ಮಿಸ್ ಬಿಹೇವ್ ಮಾಡ್ತೀರಿ?' ಆಕೆ ಗುಡುಗುತ್ತಿದ್ದಂತೆಯೇ. 'ಸಾರಿ, ಮೇಡಮ್, ನನ್ನ ಹೆಂಡ್ತೀನೂ' ಇನ್ನೂ ಪೂರ್ಣವಾಗಿರಲಿಲ್ಲ ಅವನ ವಾಕ್ಯ, ಅಷ್ಟರಲ್ಲೇ ಅವಳ ಸ್ನೇಹಿತೆ, ಹೌದೌದು, ನಿಮ್ಗೆ ಎಲ್ಲಾ ನಿಮ್ಮ ಹೆಂಡ್ತಿ ತರಾನೇ ಕಾಣ್ತಾರೆ. ನೋಡೋಕೆ ಜಂಟಲ್ ಮ್ಯಾನ್ ತರಾ ಕಾಣಿಸೋದು, ಮಾಡೋದು ಕಚ್ಡಾ ಕೆಲಸ' ಇನ್ನೂ ಏನೇನು ಬೈಗುಳ ತಿನ್ಬೇಕಿತ್ತೋ, ಮೆಲ್ಲಗೆ ಅಲ್ಲಿಂದ ಜಾಗ ಖಾಲಿ ಮಾಡಿದ. ಕೋಪ, ಸಹನೆ ಕಟ್ಟೆ ಒಡೆಯಿತು ಅವನಿಗೆ. 'ಎಲ್ಲಾ ಈ ಪದ್ದೀ ಇಂದ್ಲೇ ಯಾವ ಮಗ್ಗುಲಲ್ಲಿ ಎದ್ನೋ ಇವತ್ತು? ಮನೆಗಾದ್ರೂ ಹೋಗಿಬಿಡೋಣ ಅಂದ್ರೆ ಹೊಟ್ಟೇಲಿ ಆಗ್ಲೆ ತಾಳವಾದ್ಯ ಪ್ರಾರಂಭವಾಗಿತ್ತು. ಆಗಲೇ ಯಾರೋ ಅನೌನ್ಸ್ ಮಾಡ್ತಾ ಇದ್ದರು. 'ಬಾಳೆ ಎಲೆ ಊಟ ಕೆಳಗಡೆ ಹಾಲ್ ನಲ್ಲಿ. ಬಫೆ ಮಹಡಿ ಮೇಲೆ' ಅಂತ. ಹಸಿವೆಗೆ ನಾಚಿಕೆ ಇದ್ಯಾ?

'Eat shamelessly' ಅಂತಾ ಯಾರೋ ಹೇಳಿದ್ದು ನೆನಪಾಯ್ತು. 'ಬಾಳೆ ಎಲೆ ಊಟ ಹೇಗೂ ಇಷ್ಟ' ಅಂತ ಡೈನಿಂಗ್ ಹಾಲ್ ಕಡೆ ಹೋಗುತ್ತಿದ್ದಂತೆಯೇ ನೂಕುನುಗ್ಗಲು. ಗುಂಪಿನಲ್ಲಿ ಯಾರೋ ಹಿಂದಿನಿಂದ ದಬ್ಬಿದ್ದು ರಭಸ ಎಷ್ಟಿತ್ತೆಂದರೆ, ಒಂದೇ ಬಾರಿಗೆ ಡೈನಿಂಗ್ ಹಾಲ್ ನಲ್ಲೇ ತಳ್ಳಲ್ಪಟ್ಟಿದ್ದ. ಅಲ್ಲೇ ಒಂದು ಖಾಲಿ ಕುರ್ಚಿ ಕಂಡು 'ಬದುಕಿದ್ಯಾ ಬಡಜೀವ' ಎಂದು ಮೇಜಿನ ಮುಂದೆ ಉಪಸ್ಥಿತನಾದ ವೆಂಕ್ಟು. ಬಾಳೆ ಎಲೆಗಳು ಸರಸರನೆ ಪ್ರತ್ಯಕ್ಷವಾದುವು. ನಾನಾ ರೀತಿಯ ವ್ಯಂಜನಗಳು, ಮೇಲೋಗರಗಳು, ಭಕ್ಷ್ಯಗಳು 'ವಿವಾಹ ಭೋಜನವಿದು' ಮನದಲ್ಲೇ ಹಾಡನ್ನು ಗುನುಗಿಕೊಂಡು ಚಪ್ಪರಿಸಿ ಉಂಡು ತೇಗಿದ. ಯಾರ ಮದ್ವೆ ಆದ್ರೇನು? ಹು.ಮುಂ

ಮದ್ವೇಲಿ ಉಂಡೋನೇ ಜಾಣ ಅಲ್ವೇ? ಹೊಟ್ಟೆ ತುಂಬಿದ ಮೇಲೆ ಪದ್ದಿ ಮೇಲಿನ ಸಿಟ್ಟು ಸ್ವಲ್ಪ ಶಾಂತವಾಗಿತ್ತು. ಹೊರಗೆ ಬಂದು ತಾಂಬೂಲ ಸ್ವೀಕರಿಸಿ, ಬೀಡಾ ಜಗಿಯುತ್ತಾ 'ಇನ್ನು ಇವಳು ಎಲ್ಲಿದ್ದಾಳೋ? ಏನಾದ್ರೂ ಮಾಡ್ಕೊಳ್ಳಿ, ಬರ್ಲಿ ಮನೆಗೆ, ಗ್ರಹಚಾರ ಬಿಡಿಸ್ತೀನಿ' ಎಂದುಕೊಳ್ತಾ ಸ್ಕೂಟರ್ ಕಡೆ ಹೊರಟಿದ್ದವನಿಗೆ ಹಿಂದಿನಿಂದ ಪತ್ನಿಯ ದನಿ ಕೇಳಿಸಿತು, 'ರೀ, ರೀ, ಯಾಕ್ರೀ ಇಷ್ಟೊತ್ತು? ನಿಮಗೋಸ್ಕರ ಯಾವಾಗಿಂದ ಕಾಯ್ತಾ ಇದ್ದೀನಿ' ಅಂತ ಓಡೋಡಿ ಬಂದಳು ಪದ್ಮ. ಇವನು ತಾಂಬೂಲ ಜಗಿಯುತ್ತಿದ್ದುದನ್ನು ನೋಡಿ ಶಾಕ್ ಆಗಿ

'ಊಟಾನೂ ಮಾಡ್ಬಿಟ್ರೇನ್ರೀ ನನ್ನ ಬಿಟ್ಟು' ಅಂದ್ಲು ಕೋಪಿಸ್ಕೊಂಡು.

'ನಾನು ಬಂದು ಘಂಟೆ ಮೇಲಾಯಿತು' ಅಂತ ಹೇಳಿ ಫ್ಲಾಷ್ ಬ್ಯಾಕ್ ಎಲ್ಲಾ ಹೇಳಿದವನಿಗೆ, 'ಯಾವ ಕಲ್ಯಾಣ ಮಂಟಪಕ್ಕೇರೀ ನೀವು ಹೋಗಿದ್ದು?' ಗಲಿಬಿಲಿಗೊಂಡು ಕೇಳಿದಳು.

'ಇದೇ 'ಲಕ್ಷ್ಮೀ ವೆಂಕಟೇಶ್ವರ ಕಲ್ಯಾಣ ಮಂಟಪ' ಅನ್ನುತ್ತಿದ್ದಂತೆ,

'ಅಯ್ಯೋ, ಕರ್ಮ, ಕರ್ಮ, ಪಕ್ಕದಲ್ಲಿರೋ ಲಕ್ಷ್ಮೀ ನಾರಾಯಣ ಕಲ್ಯಾಣ ಮಂಟಪ ಅಂತ ಹೇಳಿದ್ದೆನಲ್ರೀ? ಇನ್ವಿಟೇಶನ್ ಕೂಡಾ ಇಟ್ಟು ಬಂದಿದ್ದೆ. ಈಗಾದ್ರೇನಾಯ್ತು, ಬನ್ನಿ, ನನ್ನ ಜೊತೆ ಊಟದ ಶಾಸ್ತ್ರ ಮಾಡಿ. ಮೊದ್ಲು ಬಾಯಿ ತೊಳ್ಕೊಳ್ಳಿ. ನನ್ನ ಕಸಿನ್ಸ್ ಗೆಲ್ಲಾ ಹೇಳಿದ್ದೀನಿ. ನಾವು ಜೊತೇಲೇ ಊಟ ಮಾಡೋದು ಅಂತ' ಎಂದು ಅವನನ್ನು ಎಳೆದುಕೊಂಡೇ ಹೋದ್ಲು, ಅವನು 'ಬೇಡ್ವೆ, ನಂಗೆ ಹೊಟ್ಟೆ ಫುಲ್ ಆಗಿದೆ ಅಂತಂದ್ರೂ, 'ದೂರ್ವಾಸಾತಿಥ್ಯ' ಎಂದರೆ ಇದೇ ಇರ್ಬೇಕು ಎನ್ನಿಸಿತು ಅವನಿಗೆ.

'ವೆಂಕಟೇಶ, ನಾರಾಯಣ' ಇಬ್ರೂ ಒಂದೇ ದೇವರಲ್ವೇ? ದೇವನೊಬ್ಬ ನಾಮ ಹಲವು ಆದ್ರೂ ಹೀಗೆ ಅಕ್ಕಪಕ್ಕದಲ್ಲೇ ವಿಭಿನ್ನ ನಾಮಗಳಿಂದ ನನ್ನನ್ನು ಎಷ್ಟು ಪೇಚಿಗೆ ಸಿಲುಕಿಸಿಬಿಟ್ಟರು ಇವರುಗಳು ಎಂದುಕೊಳ್ಳುತ್ತಲೇ, ಪತ್ನಿ ಸಮೇತ ಪಕ್ಕದ ಕಲ್ಯಾಣ ಮಂಟಪದತ್ತ ಒಲ್ಲದ ಮನಸ್ಸಿನಿಂದ ಹೆಜ್ಜೆಹಾಕತೊಡಗಿದ.



# ನಿಮ್ಮ ಲೇಖನ ತಿರಸ್ಕೃತವಾಗಿದೆ

**। ಕುಮುದಾ ಪುರುಷೋತ್ತಮ್**

ಮುಂದೆ ಬಿಳೀ ಹಾಳೆ. ಕೈಯ್ಯಲ್ಲಿ ಚಲಿಸುತ್ತಿದ ಲೇಖನಿ. ಒಮ್ಮೊಮ್ಮೆ ಲೇಖನಿ ವೇಗವಾಗಿ ಸಾಗಿದರೆ ಮತ್ತೊಮ್ಮೆ ನಿಂತು ಕಕ್ಕಾಬಿಕ್ಕಿಯಾಗುತ್ತಿತ್ತು. ಮಗದೊಮ್ಮೆ ಹಿಂದಿರುಗಿ ಹೋಗಿ ಕೆಲವೊಂದನ್ನು ಬದಲಾವಣೆಗೊಳಿಸಿಯೋ ಅಥವ ತೆಗೆದು ಹಾಕಿಯೋ ಮತ್ತೆ ಮುಂದುವರೆಯುತ್ತಿತ್ತು. ಎಷ್ಟೋ ಹೊತ್ತಿನ ಬಳಿಕ ಲೇಖನಿ ಪೂರ್ಣವಿರಾಮದೊಂದಿಗೆ ವಿಶ್ರಮಿಸಿತು. ರಚಿತವಾದ ಲೇಖನವನ್ನು ಮತ್ತೊಮ್ಮೆ ಪುನರಾವರ್ತಿಸಿ ಆಫೀಸಿನಿಂದ ಮನೆಗೆ ಬಂದ ಪತಿದೇವನ ಮುಂದೆ ಹಿಡಿದಳು. ಅವಳು ಮಾಡಿದ ಹೊಸರುಚಿ, ಬರೆದಹೊಸ ಲೇಖಗಳಿಗೆ ಯಜ್ಞಪಶು ಅವನೇ ತಾನೇ? ಕುಳಿತು ಓದಿದವ ಕೆಣಕಿದ. " ನಿನಗೆ ಸ್ವಲ್ಪವೂ ಧೈರ್ಯವಿಲ್ಲ." ಅವಳು ಕೆರಳಿದ ಅಬ್ಬಕ್ಕನಾದಳು.

"ಇಂತಹ ಮಾತಿನ ಅರ್ಥವೇನು?"

"ದೊಡ್ಡದಾಗಿ ಲೇಖನಗಳನ್ನ ಬರೀತಿ. ಎಲ್ಲೋ ಒಂದ್ಕಡೆ ಎಸೀತೀ. ಪತ್ರಿಕೆಗಳಿಗೆ ಕಳುಹಿಸೋ ಧೈರ್ಯ, ಆತ್ಮ ವಿಶ್ವಾಸ ಎರಡೂ ನಿನಗಿಲ್ಲ."

"ಕಳಿಸೋದು ದಂಡವಂತೆ. ಸುಮ್ಸುಮ್ನೆ ಪ್ರಕಟಿಸೋದಿಲ್ವಂತೆ."

"ಸುಮ್ಸುಮ್ನೆ ಅಂದ್ರೆ?"

"ಪತ್ರಿಕಾ ಕಛೇರೀಲಿ ಯಾರಾದ್ರೂ ತಿಳಿದಿರೋರು ಇರ್ಬೇಕಂತೆ ಅಥವಾ ಶಿಪಾರಸ್ಸು ಮಾಡೋರಾದ್ರೂ ಇರ್ಬೇಕಂತೆ. ಎರಡೂ ಇಲ್ದೆ ಪ್ರಕಟಿಸೋದಿಲ್ವಂತೆ."

"ಯಾರು ಹಾಗಂದಿದ್ದು?"

"ಗಂಗಮ್ಮ ಹೇಳಿದ್ಲು. ಅವ್ಳ ಯಜಮಾನ್ರು ಇದುವರೆಗೂ ಸುಮಾರು ನೂರು ಲೇಖನ ಕಳ್ಸಿದ್ದಾರಂತೆ. ಶಿಪಾರಸ್ಸುಇಲ್ದೆ ಎಲ್ಲಾನೂ ಗೋಡೆಗೆ ಹೊಡೆದ ಚಂಡಿನಂತೆ ಅಷ್ಟೇ ವೇಗವಾಗಿ ವಾಪಸ್ಸು ಬಂದಿದೆಯಂತೆ."

"ಹಾಗಾದ್ರೆ ಇದರ ಪ್ರಯೋಗ ಆಗಿಯೇ ಹೋಗ್ಲಿ. ನಿನಗೆ ಧೈರ್ಯವಿದ್ದರೆ ಈ ನಿನ್ನ ಲೇಖನ ಕಳಿಸು." ಎಂದು ಸವಾಲೆಸೆದ. ಸವಾಲು ಸ್ವೀಕರಿಸಿದವಳು ಗುಂಡಾದ ಅಕ್ಷರದಲ್ಲಿ ಮತ್ತೊಮ್ಮೆ ಬರೆದು ಪತ್ರಿಕೆಗೆ ಕಳುಹಿಸಿಯೇ ಬಿಟ್ಟಳು. ಅದೆಲ್ಲಿ ಪ್ರಕಟವಾದೀತು ಎಂದುಕೊಂಡು ಮರೆತೂ ಬಿಟ್ಟಳು.

ಒಂದು ಮಧ್ಯಾಹ್ನ ಮಾಡಿದ್ದ ಅಕ್ಕಿ ಸಂಡಿಗೆಯನ್ನು ಬಾಲ್ಕನಿಯ ಬಿಸಿಲಿನಲ್ಲಿಟ್ಟು ಅದರ ಮುಂದೆ ತೂಕಡಿಸುತ್ತಿದ್ದಾಗ ಕನಸಿನಲ್ಲಿ 'ಪೋಸ್ಟ್' ಎಂದಂತಾಗಿ ಮೇಲೆದ್ದು ಬಾಗಿಲು ತೆರೆದು ಕೆಳಗೆ ಬಿದ್ದಿದ್ದ ಪೋಸ್ಟ್ ಕಾರ್ಡನ್ನು ಮೇಲೆತ್ತಿಕೊಂಡಳು. ಅದರಲ್ಲಿದ್ದುದು ಎರಡೇ ಸಾಲುಗಳು. ' ನಿಮ್ಮ ಲೇಖನ ಸ್ವೀಕೃತವಾಗಿದೆ. ಸಧ್ಯದಲ್ಲಿಯೇ ಪ್ರಕಟಿಸುತ್ತೇವೆ' ಎಂದಿತ್ತು. ಒಮ್ಮೆ ಓದಿದಳು ಮತ್ತೊಮ್ಮೆ ಓದಿದಳು ಮಗದೊಮ್ಮೆ ಓದಿದಳು....ಹೀಗೆ ಪತಿರಾಯ ಊಟಕ್ಕೆ ಬರುವವರೆಗೂ ಇದೇ ನಡೆಯಿತು. ಬಂದವನು ಭ್ರಮೆ ಹಿಡಿದವಳಂತೆ ಕುಳಿತಿದ್ದವಳನ್ನೂ ಕೈನಲ್ಲಿದ್ದ ಪೋಸ್ಟ್ ಕಾರ್ಡನ್ನೂ ನೋಡಿ ಘಾಬರಿಯಿಂದ ಓದಿ ನಗಲಾರಂಭಿಸಿದ.

"ರೀ ಇದು ನಿಜವಾ ? ನನಗೆ ಭ್ರಮೆಯಲ್ಲವಷ್ಟೇ. ನನ್ನ ಲೇಖನ ನಿಜ್ವಾಗ್ಲೂ ಪ್ರಕಟವಾಗುತ್ತಾ?"

"ಹೋಗಿ ನಿನ್ನ ಗೆಳತಿ ಗಂಗಮ್ಮನ್ನ ಕಣಿ ಕೇಳು."

ಸುಮಾರು ತಿಂಗಳ ಬಳಿಕ ಇವಳ ಲೇಖನವಿದ್ದ ಸಂಚಿಕೆಯ ಗೌರವ ಪ್ರತಿ ಕೈಸೇರಿತು. ಕೂಡಲೇ ಪೇಟೆಯಿಂದ ಒಂದು ಹನ್ನೆರಡು ಪ್ರತಿ ಕೊಂಡು ಖುದ್ದಾಗಿ ಬಂಧುಗಳ ಮನೆಗೆಲ್ಲಾ ಹೋಗಿ ಹಂಚಿ  ನನ್ನ ಲೇಖನ ಓದಿ ಅಭಿಪ್ರಾಯ ತಿಳಿಸಿ ಎಂದು ಬಿನ್ನವಿಸಿ ಬಂದಳು. ಒಂದು ವಾರವಾದರೂ ಒಬ್ಬರಿಂದಲೂ ಪ್ರತಿಕ್ರಿಯೆ ಇದ್ದರೆ! ಇನ್ನು ತಾಮಸ ಸಲ್ಲದು ಎಂದುಕೊಂಡಿದ್ದೇ ಪ್ರತಿಯೊಬ್ಬರಿಗೂ ಫೋನಾಯಿಸಿದಾಗ ಬಂದಿದ್ದು ವಿವಿಧ ಪ್ರತಿಕ್ರಿಯೆಗಳು. " ಅಯ್ಯೋ, ನೀ ಕೊಟ್ಟ ಪತ್ರಿಕೆ ಎಲ್ಲೋ ಇಟ್ಟು ಮರೆತಿದ್ದೀನಿ. ಎಷ್ಟು ಹುಡುಕಿದರೂ ಸಿಗ್ತಾ ಇಲ್ಲಮ್ಮ. ಸಿಕ್ರೆ ಓದಿ ಫೋನ್ ಮಾಡ್ತೀನಿ."

"ಓದೋಕ್ಕೆ ಟೈಮೇ ಆಗ್ತಿಲ್ಲ. ಆದ್ರೆ ಪತ್ರಿಕೆ ತಲೆದಿಂಬು ಕೆಳಗೆ ಭದ್ರವಾಗಿದೆ. ಸಮಯ ಸಿಕ್ಕಿದ್ರೆ ಓದಿ ಹೇಳ್ತೀನಿ."

"ಆವತ್ತೇ ಓದಿದೆ. ಆದ್ರೆ ಈಗ ನೆನಪಿಗೆ ಬರ್ತಾ ಇಲ್ಲ. ತಪ್ಪು ತಿಳಿಬೇಡ. ನನ್ನ ಮಗಾ ಪತ್ರಿಕೇನ ಹಳೇಪೇಪರ್ನೋನಿಗೆ ಹಾಕಿಬಿಟ್ಟಿದ್ದಾನೆ."

"ನನಗೆ ಸಾಮಾನ್ಯವಾಗಿ ಓದೋ ಅಭ್ಯಾಸವಿಲ್ಲ. ನೀನು ತಂದುಕೊಟ್ಟೆಯಲ್ಲಾಂತ ಓದಿದೆ. ಒಂದು ಚೂರೂ ಅರ್ಥವಾಗ್ಲಿಲ್ಲ ಕಣೇ. ಯಾವುದರ ಬಗ್ಗೆ ಬರೆದಿದ್ದೀಯಾ?" ಇದ್ದದ್ದನ್ನು ಇದ್ದಂತೆ ಹೇಳುವ ಪ್ರಾಮಾಣಿಕ ವ್ಯಕ್ತಿಯ ಪ್ರತಿಕ್ರಿಯೆ!

ಮತ್ತೊಂದು ವಾರ ಕಳೆಯಿತು. ಈ ಬಾರಿ ಪೋಸ್ಟ್ ಮನ್ ಮನಿಯಾರ್ಡರ್ ಎಂದು ಕೂಗಿ ಇಪ್ಪತ್ತೈದು ರೂಪಾಯಿ ಕೈಗಿತ್ತ. ಖುಷಿ ಗೊಂಡು ಅವನ ಕೈಗೆ ಐವತ್ತರ ನೋಟೊಂದನ್ನು ಭಕ್ಷೀಸಾಗಿ ಕೊಟ್ಟಾಯಿತು. ಗೌರವ ಧನವನ್ನು ಕಣ್ಣಿಗೊತ್ತಿಕೊಂಡು ದೇವರ ಪಟದ ಮುಂದಿಟ್ಟು ತುಪ್ಪದ ದೀಪ ಹಚ್ಚಿ ಒಂದು ಪ್ರತ್ಯೇಕ ಪರ್ಸಿನಲ್ಲಿ ಕಾಪಿಟ್ಟುಕೊಂಡಳು.

ಒಮ್ಮೆ ಗಂಡನಿಗೆ ಅವಸರಕ್ಕೆ ಹತ್ತು ರುಪಾಯಿ ಚಿಲ್ಲರೆ ಬೇಕಿತ್ತು. " ಒಂದು ಹತ್ತು ರುಪಾಯಿಗೆ ಚಿಲ್ರೆ ಇದ್ರೆ ಕೊಡು" ಎಂದ.

ಇಲ್ಲವೆಂದಳು. "ಅವತ್ತು ಪತ್ರಿಕೇವ್ರು ಕಳ್ಸಿದ್ರಲ್ಲಾ ಅದ್ರಲ್ಲಿಹತ್ತು ತೆಗೆದು ಕೊಡು."

"ಉಹೂಂ, ಆದುಡ್ಡನ್ನು ಖರ್ಚು ಮಾಡೋಲ್ಲ."

"ಖರ್ಚು ಮಾಡ್ಬೇಡ. ಕೇವಲ ಚಿಲ್ಲರೆ. ಇಪ್ಪತ್ತು ಕೊಡ್ತೀನಿ ಎರಡು ಹತ್ತು ಕೊಟ್ರೆ ಸಾಕು."

"ಇಲ್ಲ, ಆ ನೋಟುಗಳು ನನಗೆ ಬಹಳ ಪವಿತ್ರವಾದದ್ದು. ಅದನ್ನು ಯಾರಿಗೂ ಕೊಡೋಲ್ಲ' ಎಂದು ಘೋಷಿಸಿಬಿಟ್ಟಳು.

ಮೊದಲ ಯಶಸ್ಸಿನಿಂದ ಸ್ಫೂರ್ತಿಗೊಂಡು ಮತ್ತೊಂದು ಲೇಖನ ರಚಿಸಿಯಾಯಿತು. ಈಗದು ತಲುಪಿದ್ದು ಮತ್ತೊಂದು ಜನಪ್ರಿಯ ಪತ್ರಿಕಾ ಕಛೇರಿಯನ್ನು. ಮತ್ತದೇ ಪುನರಾವರ್ತನೆ. ಸ್ವೀಕೃತವಾದ ಬಗ್ಗೆ ಮತ್ತೊಂದು ಕಾರ್ಡು, ಗೌರವ

ಪ್ರತಿ, ಒಂದು ಡಜನ್ ಪ್ರತಿಗಳ ವಿತರಣೆ ಈ ಬಾರಿ ಸ್ನೇಹಿತರಿಗೆ, ಇಪ್ಪತ್ತೈದರ ಗೌರವ ಧನ. ಅದೂ ಚಿಕ್ಕ ಪರ್ಸಿನ ದಾರಿ ಹಿಡಿದು ಮೊತ್ತ ಐವತ್ತಕ್ಕೇರಿತು. ಕೈನಲ್ಲಿ ಹಿಡಿದು ನೋಡುತ್ತಾ ಹಾಗೆಯೇ ಕಳೆದು ಹೋದಳು.

ಗಂಗಮ್ಮನ ಗಂಡನ ಬರವಣಿಗೆ ಹಿಂತಿರುಗಿ ಬಂದು ತನ್ನದು ಮಾತ್ರಾ ಗುರಿ ಮುಟ್ಟಿದೆ ಎಂದರೆ ಏನಿದರ ಅರ್ಥ? ನನ್ನಲ್ಲಿ ಅಸಾಧಾರಣ ಪ್ರತಿಭೆ ಇದೆಯೆಂದೇ? ಇಷ್ಟು ದಿನ ನನಗದರ ಅರಿವೇ ಇರಲಿಲ್ಲವಲ್ಲಾ? ಎಲ್ಲಿ ಅಡಗಿತ್ತು? ತಾನು ಇನ್ನು ಮುಂದೆ ಸುಮ್ಮನೇ ಕೂಡಬಾರದು. ಬರವಣಿಗೆಯ ಪ್ರಕಾರಗಳನ್ನು ವಿಸ್ತಾರಗೊಳಿಸಬೇಕು. ಕಥೆ, ಕವನ, ಪ್ರಬಂಧ, ಹಾಸ್ಯ, ಪ್ರವಾಸ ಲೇಖನ,ಜೀವನ ಚರಿತ್ರೆ ಗಳನ್ನು ಬರೆಯಲೇಬೇಕು. ಬರವಣಿಗೆ ಪಕ್ವವಾಗುತ್ತಿದ್ದಂತೆಯೇ ಬೈರಪ್ಪನವರಂತೆ ಕಾದಂಬರಿಗಳು ಬರೆದು  ಸಾಹಿತ್ಯ ಲೊಕಕ್ಕೆ ಸಮರ್ಪಿಸಬೇಕು. ಸಾಹಿತ್ಯ ಸ್ಪರ್ಧೆಗಳಲ್ಲಿ ಹೇಗಿದ್ದರೂ ಬಹುಮಾನಗಳು ಬಂದೇ ಬರುತ್ತವೆ. ವಿಮರ್ಶಕರ ಕಣ್ಣಿಗೆ ಬಿದ್ದು ಮಿಂಚಬೇಕು. ಇಷ್ಟಾದರೆ ಸಾಕು. ಪ್ರಶಸ್ತಿಗಳು ಸನ್ಮಾನಗಳು ಸಾಲುಗಟ್ಟಿ ಬರುತ್ತವೆ. ಸಭೆ ಸಮಾರಂಭಗಳಲ್ಲಿ ಭಾಷಣ ಕೇಳಲು ಬೆಲ್ಲಕ್ಕೆ ಇರುವೆ ಮುತ್ತುವಂತೆ ಮುತ್ತುತ್ತಾರೆ. ಅಲ್ಲಾ, ಅಷ್ಟೊಂದು ಪ್ರಶಸ್ತಿ ಫಲಕಗಳು, ಶಾಲುಗಳು ಬಂದರೆ ಹೇಗೆ ಸಂಬಾಳಿಸುವುದು? ತಮ್ಮ ಮನೆಯೋ ಚಿಕ್ಕದು. ಸರಸ್ವತಿ ಪುತ್ರರು ಎಂದೂ ಲಕ್ಷ್ಮೀಕಟಾಕ್ಷದಿಂದ ದೂರಉಳಿದವರು ಎಂಬುವುದು ವಿಶ್ವವಿದಿತ. ಇರುವ ಜಾಗದಲ್ಲೇ ಒಂದು ಬೀರು ಮಾಡಿಸುವಂತೆ ಪತಿದೇವರಿಗೆ ಹೇಳಬೇಕು. ಅದರಪೂರ ಪ್ರಶಸ್ತಿ ಫಲಕಗಳನ್ನು ಕಲಾತ್ಮಕವಾಗಿ ನೋಡುಗರು ಬೆರಗಾಗುವಂತೆ ಜೋಡಿಸಿಡಬೇಕು. ಸನ್ಮಾನದ ಭಾಗವಾದ ಅಗಣಿತ ಶಾಲುಗಳನ್ನೇನು ಮಾಡುವುದು? ತಾನೆಷ್ಟು ಹೊದೆಯಲು ಸಾಧ್ಯ? ಹೊದ್ದಾಗ ತನ್ನನ್ನು ವಯಸ್ಸಾದ ಅಜ್ಜಿ ಎಂದುಕೊಂಡುಬಿಟ್ಟರೆ? ಎಲ್ಲವನ್ನೂ ವೃದ್ಧಾಶ್ರಮವಾಸಿಗಳಿಗೆ ಹಂಚಿದರೆ ಹೇಗೆ? ವೀಡಿಯೋ ಕ್ಯಾಮರಾಗಳ ಮಿಂಚಿನ ನಡುವೆ ಹಂಚಿದರೆ ಮರುದಿನ ಪತ್ರಿಕೆಗಳ ತಲೆಬರಹಗಳಲ್ಲಿ ' ಪ್ರಖ್ಯಾತ  ಸಾಹಿತಿ ಶ್ರೀಮತಿ.....ಇವರ ಮಾನವೀಯತೆಯ ಇದೊಂದು ನಿದರ್ಶನ'ಎಂದು ಬಂದೀತು. ಸಾಹಿತಿಯ ಹೆಸರಿನೊಡನೆ ಸಾಮಾಜಿಕ ಕಾಯಕರ್ತೆ ಎನ್ನುವ ವಿಶೇಷಣವೂ ತನ್ನ ಹೆಸರಿನಮುಂದೆ ಬಾಲಂಗೋಚಿಯಂತೆ ಅಂಟಿಕೊಂಡೀತು. ಇಷ್ಟೆಲ್ಲಾ ಆದಮೇಲೆ ರಾಷ್ಟ್ರೀಯ ಮಟ್ಟದ ಪುರಸ್ಕಾರಗಳು ಒಂದರಮೇಲೊಂದು ನಾನು ತಾನೆಂದು ಬಂದಾವು. ಸರಸ್ವತೀ ಸಮ್ಮಾನ್, ಸಾಹಿತ್ಯ ಅಕಾಡಮಿ, ಜ್ಞಾನಪೀಠ.... ರೋಮಾಂಚನವಾಯಿತು.

ಇವೆಲ್ಲದರ ನಡುವೆ ಮತ್ತೊಂದು ಲೇಖನ ತಯಾರಾಯಿತು. ಪ್ರತಿಗಾಗಿ ಕುಳಿತವಳಿಗೆ ಪ್ರತಿ ಸೆಕೆಂಡ್ ನಿಮಿಷಗಳಾಗಿ. ನಿಮಿಷಗಳು ಗಂಟೆಗಳಾಗಿ ಗಂಟೆಗಳು ದಿನಗಳಾಗಿ, ದಿನಗಳು ಮಾಸಗಳಾಗಿ.....ಕಡೆಗೂ ಪೋಸ್ಟ್ಮನ್ನನ ಮಧುರ ಧ್ವನಿ ಕೇಳಿಸಿತು. ನಿರೀಕ್ಷಿಸಿದ ಪೋಸ್ಟ್ ಕಾಡನ್ನು ಓದುತ್ತಾ ಕುಳಿತೇ ಇದ್ದಳು. ಊಟದ  ವೇಳೆ ಅವ ಬಂದ. ದಿಗ್ಭ್ರಮೆ ಗೊಂಡವಳನ್ನು ಕಂಡ. ಕಾರ್ಡು ಓದಿ ಮತ್ತೆ ನಕ್ಕ. " ಒಳ್ಳೇದಾಯ್ತು ಬಿಡು. ಇಲ್ದಿದ್ರೆ ನೀನು ಡಜನ್ ಗಟ್ಲೆ ಪತ್ರಿಕೆಗ್ಳನ್ನ ಖರೀದಿಸಿ ಸಮಾರಾಧನೆ ಮಾಡ್ತಿದ್ದೆ. ಅದಕ್ಕೆ ಬರೋ ನನ್ನ ಸಂಬಳ ಸಾಕಾಗ್ತಿರ್ಲಿಲ್ಲ." ಯಾವುದೊ ಹಳೇ ಸಿನೆಮಾ ಕಾಡನ್ನು ಗುಗುಣಿಸುತ್ತಾ ಒಳಹೋದ.

ಕಾರ್ಡಿನಲ್ಲಿದ್ದುದು ಇಷ್ಟೇ.

ನಿಮ್ಮ ಲೇಖನ ತಿರಸ್ಕೃತವಾಗಿದೆ. ■

# ಸೇರಿಗೆ ಸವ್ವಾಸೇರು

(2021ರ ಸಪ್ಟಂಬರ್ ತಿಂಗಳಿನ ಅಪರಂಜಿ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಟಿ.ವಿ. ವಿಜಯೇಂದ್ರ ರಾವ್ ಇವರ 'ಸೇರಿಗೆ ಸವ್ವಾಸೇರು' ಹಾಸ್ಯ ಲೇಖನದ ಮುಂದುವರೆದ ಭಾಗ)

**। ಅಶೋಕ ಪೂಜಾರ**

ಪಾರ್ಥಸಾರಥಿಗೆ ತಾನು ಮೋಸ ಹೋದ ಸಂಗತಿ ಕೂಡಲೇ ತಿಳಿದುಬಿಟ್ಟಿತು. ತನಗೆ ಮೊದಲು ಉಚ್ಚರಿಸಲು ಬರಿತ್ತಿದ್ದ 'ಸಾ' ಕಾರವೇ ಹೊರಟು ಹೋಗಿ ತನ್ನ ಮಾತಿನ ಲಯವೇ ತಪ್ಪಿಹೋಯಿತಲ್ಲಾ ಎಂದು ಸ್ವಲ್ಪ ಹೊತ್ತು ಚಿಂತಿತನಾದ. ಅಕ್ಕ ಪಕ್ಕದಲ್ಲಿ ನೋಡಿದ, ಸುತ್ತ ಮುತ್ತಲು ನೋಡಿದ. ಅನತಿ ದೂರದಲ್ಲಿ ವಿಷ್ಣು ತನ್ನೊಳಗೇ ನಗುತ್ತ ಬೀಗುತ್ತ ಅತ್ತ ಹೋಗುತ್ತಿದ್ದ. 'ನನ್ನ ಗಂಡನ ಜೀವವನ್ನು ವಾಪಸು ಕೊಡು' ಅನ್ನುವ ಬೇಡಿಕೆಯೊಂದಿಗೆ ಯಮನನ್ನು ಬೆಂಬಿಡದೇ ಅನುಸರಿಸುತ್ತಿದ್ದ ಸಾವಿತ್ರಿಯಂತೆ, ತಕ್ಷಣವೆ ಪಾರ್ಥಸಾರಥಿ ವಿಷ್ಣು ಇದ್ದಲ್ಲಿಗೆ ಹೋಗಿ ಮುಟ್ಟಿದ. ವಿಷ್ಣುವನ್ನು ಪೀತಾಂಬರ ಹಿಡಿದು ತಡೆದು ನಿಲ್ಲಿಸಿ ಕೇಳಿದ, "ಏನು ವಿಷ್ಣು, ನೀನು ನನಗೆ ಹೀಗೆ ಮೋಸ ಮಾಡಬಹುದೇ, ನಾನು ನಿನಗೆ ಕೇಳಿದ ವರ 'ನನಗೆ ಸಾವೇ ಬರಬಾರದು ಎಂದು, ಆದರೆ ನೀನು ನನಗೆ ದಯಪಾಲಿಸಿದ ವರ, ನನಗೆ 'ಸಾ' ಉಚ್ಚಾರಣೆಯೇ ಬರಬಾರದೆಂದು. ನಿನ್ನ ವರವನ್ನು ನೀನು ತಿದ್ದುಪಡಿ ಮಾಡಲೇಬೇಕು. ನನಗೆ ಸಾವು ಬರಬಾರದ ಹಾಗೆ ಪ್ರಾಮಾಣಿಕವಾದ ವರ ಕೊಡು." ಎಂದು ದುಂಬಾಲು ಬಿದ್ದ. ವಿಷ್ಣು ಗತ್ಯಂತರವಿಲ್ಲದೇ ವರವನ್ನು ತಿದ್ದುಪಡಿ ಮಾಡಲು ಸಿದ್ಧನಾದ. ವಿಷ್ಣು ಹೇಳಿದ, "ನನ್ನ ವರವನ್ನು ತಿದ್ದುಪಡಿಯೊಂದಿಗೆ ಜಾರಿ ಮಾಡುತ್ತಿದ್ದೇನೆ, ನೀನು ಬದುಕಿರುವವರೆಗೂ ಸಾವು ನಿನ್ನ ಹತ್ತಿರ ಸುಳಿಯದಿರಲಿ. ಹೊರಟು ಹೋಗು." ಆಜ್ಞಾಪಿಸಿದ.

ಪಾರ್ಥಸಾರಥಿಯು ಸಂತೋಷದಿಂದ ಹೆಮ್ಮೆಯಿಂದ ವಾಪಸು ಬರುತ್ತಿದ್ದ. ತನ್ನ ಹೆಂಡತಿಗೆ ತಾನು ಪಡೆದುಕೊಂಡ ವರದ ಬಗ್ಗೆ ಹೇಳಬೇಕೆಂಬ ಕುತೂಹಲ. ಮಾರ್ಗ ಮಧ್ಯದಲ್ಲಿ ಕಾಲೇಜಿನ ವೇದಿಕೆಯ ಮೇಲೆ ಯಾವುದೋ ಕಾರ್ಯಕ್ರಮ ನಡೆಯುತ್ತಿತ್ತು. ಕುತೂಹಲ ತಡೆಯಲಾರದೇ ಹತ್ತಿರ ಹೋಗಿ ನೋಡಿದಾಗ, ದ. ರಾ. ಬೇಂದ್ರೆಯವರು ಕಾರ್ಯಕ್ರಮದ ಕೇಂದ್ರಬಿಂದುವಾಗಿ ಭಾಷಣ ಬಿಗಿಯುತ್ತಿದ್ದರು. ಅದೂ ಕೂಡಾ ಸಾವಿನ ಬಗ್ಗೆ ಇರಬೇಕೆ? ಅವರು ಹೇಳುತ್ತಿದ್ದರು, "ಸಾವು ಎಲ್ಲರಿಗೂ ಒಂದಿಲ್ಲ ಒಂದು ದಿವಸ ಬಂದೇ ಬರುತ್ತದೆ. ನಾನು ಸಾವಿಗೆ ಹೆದರುವುದಿಲ್ಲ, ಯಾಕಂದ್ರ ನಾ ಬದುಕಿರುವ ವರೆಗೆ ಸಾವು ನನ್ನ ಹತ್ತಿರ ಬರಂಗಿಲ್ಲ. ಅದು ಬಂದಾಗ ನಾನ ಇರೋದಿಲ್ಲ." ಎಲ್ಲರೂ ಗೊಳ್ಳೆಂದು ನಕ್ಕರು. ಆದರೆ ಪಾರ್ಥಸಾರಥಿ ಮಾತ್ರ ನಗಲಿಲ್ಲ. ಅದೇ ವರವನ್ನೆ ತಾನೆ ಅವನು ವಿಷ್ಣುವಿನಿಂದ ಪಡೆದದ್ದು? ದ.ರಾ. ಬೇಂದ್ರೆಯವರ ಭಾಷಣದ ವಿವರವಾದ ಅರ್ಥದ ಬಗ್ಗೆ ಗಂಭೀರವಾಗಿ ವಿಚಾರ ಮಾಡಿದ ಪಾರ್ಥಸಾರಥಿಗೆ ವಿಷ್ಣುವಿನ ಹೊಸ ವರಸೆ ಗೊತ್ತಾಗಿ ಹೋಯಿತು ಈ ವರವು ಕೂಡಾ ಇದ್ದೂ ಇಲ್ಲದ ಹಾಗೆ ಎಂದು ಪಾರ್ಥಸಾರಥಿಗೆ ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಪುನಃ ವಿಷ್ಣುವಿನ ಬಳಿ ದೌಡಾಯಿಸಿದ. ವಿಷ್ಣು ಇನ್ನೂ ವೈಕುಂಠವನ್ನು ತಲುಪಿದ್ದಿಲ್ಲ. ಪಾರ್ಥಸಾರಥಿ ಅಲ್ಲಿಗೆ ಹೋಗುವುದಕ್ಕೂ ವಿಷ್ಣು ವೈಕುಂಠವನ್ನುಮುಟ್ಟಿ ಒಳ ಪ್ರವೇಸಿಸಿವುದಕ್ಕೂ ಸರಿ ಹೋಯಿತು. ವೈಕುಂಠದ ಗೇಟನ್ನು

ದ್ವಾರಪಾಲಕ ಮುಚ್ಚುವುದರಲ್ಲಿದ್ದ. ಮುಚ್ಚುತ್ತಿದ್ದ ಗೇಟನ್ನು ಒತ್ತಿ ಹಿಡಿದು ದ್ವಾರಪಾಲಕನ ಅನುಮತಿಗೆ ಕಾಯದೇ ನೇರವಾಗಿ ವಿಷ್ಣುವಿನ ಸಿಂಹಾಸನದ ಬಳಿಯೇ ಬಂದು ಜೋರು ಧ್ವನಿಯಲ್ಲಿ ಕೇಳಿದ. "ವಿಷ್ಣು, ಈ ಸಾರೆಯೂ ನನಗೆ ನೀನು ಮೋಸ ಮಾಡಿದೆ. ನೀನು ಕೊಟ್ಟ ವರದ ಗೂಢಾರ್ಥ ವಿವರಣೆಯನ್ನು ಕನ್ನಡದ ಪ್ರಸಿದ್ಧ ಕವಿಗಳಾದ ದ.ರಾ. ಬೇಂದ್ರೆಯವರು ತಮ್ಮ ಭಾಷಣದಲ್ಲಿ ಸೊಗಸಾಗಿಯೇ ಹೇಳಿದ್ದಾರೆ. ನೀನು ಕೊಟ್ಟ ಎರಡನೆ ಸಾರೆಯ ವರವೂ ಕೂಡ ಹೊಸದನ್ನೇನೂ ದಯಪಾಲಿಸಿಲ್ಲ. 'ನೀನು ಬದುಕಿರುವವರೆಗೂ ಸಾವು ನಿನ್ನ ಹತ್ತಿರ ಸುಳಿಯದಿರಲಿ.' ಎಂದು ನೀನು ವರವನ್ನು ತಿದ್ದುಪಡಿ ಮಾಡಿರುವಿಯಷ್ಟೆ? ಇದು ಬದುಕಿರುವ ಎಲ್ಲ ಮಾನವರ ವಿಷಯವಾಗಿಯೂ ನಿಜವೇ ಆಗಿದೆ. ಅಂದ ಮೇಲೆ ನನಗೆ ಹೇಗೆ ಇದು ವರವಾಗಲು ಸಾಧ್ಯ?. ನಾನು ನನ್ನ ಕೋರಿಕೆಯನ್ನು ಪನಃ ಮಂಡಿಸುತ್ತಿದ್ದೇನೆ "ನನಗೆ ಸಾವು ಬರಕೂಡದು, ನಾನು ಅಜರಾಮರನಾಗಿರಬೇಕು ಈ ವರವನ್ನು ಕೊಡು." ವಿಷ್ಣು ಈ ಸಾರೆ ನಿಜವಾಗಿಯೂ ಚಿಂತಿತನಾದ.

ವಿಷ್ಣು ಹೇಳಿದ, "ಅದಕ್ಕಾಗಿ ನೀನು ಶ್ರಮಪಡಬೇಕಾಗುತ್ತದೆ, ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಚಿಕ್ಕಮಗಳೂರಿನ ಹತ್ತಿರ ಒಂದು ನದಿ ಉಗಮವಾಗಿ ಪೂರ್ವ ದಿಕ್ಕಿಗೆ ಹರಿಯುತ್ತ ಹೋಗುತ್ತದೆ. ಆ ನದಿ ಉಗಮವಾಗುವಲ್ಲಿ ಒಂದು ಗುಹೆ ಇದೆ. ಆ ಗುಹೆಯಲ್ಲಿ ಹೋಗಿ ಆ ನದಿಯ ಉಗಮಸ್ಥಾನದಲ್ಲಿಯ ಒಂದು ಬೊಗಸೆ ನೀರನ್ನು ಕುಡಿದರೆ ನಿನಗೆ ಮರಣವೇ ಬರಲಾರದು. ನೀನು ಅಜರಾಮರನಾಗುವೆ. ಇದು ಸತ್ಯ, ಸತ್ಯ ಸತ್ಯ." ಎಂದು ಹೇಳಿ ಅಂತರ್ಧಾನನಾದ. ಈ ಸಾರೆ ಮಾತ್ರ ಪಾರ್ಥಸಾರಥಿಗೆ ವಿಷ್ಣುವಿನ ವರದ ಮೇಲೆ ವಿಶ್ವಾಸ ಬಂತು. ಆ ನದಿಗಾಗಿ ಗೂಗಲ್ ಸರ್ಚ್ ಮಾಡಿ ಅದರ ಲೊಕೇಶನ್ ಕಂಡುಹಿಡಿದ.

ಮರುದಿವಸ ಮುಂಜಾನೆ ನಸುಕಿನಲ್ಲಿಯೇ ಹೊರಟು ಆ ನದಿಯ ಉಗಮಸ್ಥಾನದ ಗುಹೆಯನ್ನು ತಲುಪಿದ. ನದಿಯ ಉಗಮಸ್ಥಾನದಲ್ಲಿ ನೀರು ಪುಟಿಪುಟಿದು ಹೊರಸೂಸುತ್ತ ಬಿದ್ದು ಮುಂದಕ್ಕೆ ಹರಿದುಹೋಗುತ್ತಿತ್ತು. ಅಲ್ಲಿಯೇ ಕುಕ್ಕರಗಾಲಿನಲ್ಲಿ ಕುಳಿತುಕೊಂಡು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ನಂತರ ಬೊಗಸೆಯಲ್ಲಿ ನೀರು ಹಿಡಿದು ಕುಡಿಯಲು ಉದ್ಯುಕ್ತನಾದ. ಇನ್ನೇನು ಬೊಗಸೆಯಲ್ಲಿಯ ನೀರನ್ನು ಕುಡಿಯಬೇಕು ಅನ್ನುವಷ್ಟರಲ್ಲಿ ಒಂದು ಮೂಲೆಯಿಂದ ಒಂದು ಧ್ವನಿ ಕೇಳಬಂದಿತು. "ಪಾರ್ಥಸಾರಥಿ ಬೊಗಸೆಯಲ್ಲಿಯ ನೀರನ್ನು ಕುಡಿಯಬೇಡ. ಅದನ್ನು ಮೊದಲು ಕೆಳಗೆ ಚೆಲ್ಲು. ಪಾರ್ಥಸಾರಥಿ ಒಂದು ನಿಮಿಷ ದಿಗ್ಮೂಢನಾದ. ಆದರೂ ಕುಡಿಯಲು ಮುಂದಾದ. ಪುನಃ ಧ್ವನಿ ಹೇಳಿತು. "ಮೊದಲು ನೀನು ನೀರನ್ನು ಚೆಲ್ಲು. ನಾನು ಹೇಳುವುದನ್ನು ಕೇಳು. ನಂತರವೂ ಸಹ ನೀನು ನೀರನ್ನು ಕುಡಿಯಬೇಕು ಅಂದರೆ ಆ ಅವಕಾಶ ನಿನಗೆ ಇದ್ದೇ ಇದೆ." ಪಾರ್ಥಸಾರಥಿಗೆ ಅದು ಸರಿಯೆನಿಸಿತು. ಧ್ವನಿ ಬಂದ ಕಡೆಗೆ ನೋಡಿದ. ಒಂದು ಮುದಿ ಕಾಗೆ ಮೂಲೆಯಲ್ಲಿ ನಡುಗುತ್ತಾ ಕುಳಿತಿತ್ತು. ಅದು ಮಾತನ್ನು ಮುಂದುವರೆಸಿತು "ನಿನಗೆ ವಿಷ್ಣು ಇಲ್ಲಿ ಕಳಿಸಿರಬಹುದು. ನೀನು ನಿನಗೆ ಮರಣ ಬರಬಾರದು, ನೀನು ಅಜರಾಮರನಾಗಿರಬೇಕು ಅನ್ನುವ ವರ ಪಡೆದುಕೊಂಡು, ಅದರ ಪಾಲನೆಗಾಗಿ ಈ ನದಿಯ ಉಗಮಸ್ಥಾನದಿಂದ ಒಂದು ಬೊಗಸೆ ನೀರು ಕುಡಿಯಲು ಬಂದಿರುವೆಯಲ್ಲವೆ?" "ಹೌದು" ಪಾರ್ಥಸಾರಥಿ ಉತ್ತರಿಸಿದ. "ನಾನೂ ಸಹ ನಿನ್ನ ಹಾಗೆ ವರವನ್ನು ಪಡೆದುಕೊಂಡು ವಿಷ್ಣುವಿನ

ಮಾರ್ಗದರ್ಶನದಂತೆಯೆ ಇಲ್ಲಿಗೆ ಬಂದು ಒಂದು ಬೊಗಸೆ ನೀರನ್ನು ಕುಡಿದು ಬಿಟ್ಟೆ. ಆಗ ನನಗೆ ಉಪದೇಶ ಮಾಡಲು ಯಾರೂ ಇರಲಿಲ್ಲ. ಆದರೆ ನನ್ನ ಈಗಿನ ಸ್ಥಿತಿ ಯಾವ ಶತ್ರುವಿಗೂ ಬೇಡ." ಕಾಗೆ ಮತ್ತೆ ಮುಂದುವರೆದು ಹೇಳಿತು, "ನಾನು ಅಜರಾಮರನಾಗಿಬಿಟ್ಟಿದ್ದೇನೆ. ಆದರೆ ದುರಂತವೆಂದರೆ ನಾನು ಅಜರಾಮರನಾಗಿ ಕೆಲವು ಶತಮಾನಗಳೇ ಕಳೆದಿವೆ. ನನಗೆ ಮುಪ್ಪು ಆವರಿಸಿಕೊಂಡು ಬಿಟ್ಟಿದೆ. ನಡೆದಾಡಲು ಕಾಲಲ್ಲಿ ಶಕ್ತಿ ಇಲ್ಲ. ಎಲ್ಲ ಅಂಗಾಂಗಗಳು ಬಲಹೀನವಾಗಿವೆ. ನನ್ನ ಆಹಾರವನ್ನು ನಾನೇ ಸಂಪಾದನೆ ಮಾಡಿಕೊಳ್ಳಲಾರೆ. ಬೇರೆ ಬೇರೆ ಪ್ರಾಣಿ ಪಕ್ಷಿಗಳು ತಿಂದು ಉಳಿದಿದ್ದನ್ನು ನಾನು ತಿಂದು ಬದುಕುತ್ತಿದ್ದೆನೆ. ನನ್ನ ಜೀರ್ಣ ಶಕ್ತಿಯೂ ಕುಂಠಿತವಾಗಿದೆ. ನನಗೆ ಸರಿಯಾಗಿ ನಡೆದಾಡಲೂ ಕೂಡಾ ಆಗುತ್ತಿಲ್ಲ. ನನ್ನದೇಹವು ಹಲವಾರುಕಾಯಿಲೆಗಳ ಗೂಡಾಗಿಬಿಟ್ಟಿದೆ. ನನಗೆ ರಾತ್ರಿ ನಿದ್ರೆ ಬರಲಾರದು. ನನ್ನವರೆನ್ನುವವರು ಯಾರೂ ಇಲ್ಲ ನನ್ನ ಸಮಾನ ವಯಸ್ಕರೆಲ್ಲ ಯಾವಾಗಲೋ ಮರಣ ಹೊಂದಿದ್ದಾರೆ. ನನ್ನ ಪೀಳಿಗೆಯ ಯಾರೂ ನನ್ನನ್ನು ನೋಡಲು ಬರಲಾರರು. ನಾನು ಇತರರಂತೆ ಮರಣಿಸಬೇಕು ಎಂದು ಹಲವಾರು ಸಾರೆ ಆಸೆ ಪಟ್ಟಿದ್ದೇನೆ. ನನಗೆ ದಕ್ಕಿದ ವರದಿಂದಾಗಿ ನನಗೆ ಸಾವೇ ಬರುತ್ತಾ ಇಲ್ಲ. ಒಂದು ದೃಷ್ಟಿಕೋನದಿಂದ ನೋಡಿದರೆ, ನನಗೆ ಈ ಅಜರಾಮರತೆಯು ಶಾಪವಾಗಿ ಪರಿಣಮಿಸಿದೆ." ಯಾಕಾದರೂ ನಾನು ಈ ವರವನ್ನು ಪಡೆದುಕೊಂಡೆನೋ ಎಂದು ಪಶ್ಚಾತ್ತಾಪ ಪಡುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ವಿಚಾರ ಮಾಡು ನಿನು ಅಜರಾಮರನಾಗಬೇಕೆ? ನಿನಗೆ ಸಾವು ಬರಬಾರದೇ?" ಪಾರ್ಥಸಾರಥಿ ಇದನ್ನೆಲ್ಲ ಕೇಳಿದ ಮೇಲೆ ಸ್ವಲ್ಪ ಹೊತ್ತು ಯೋಚನೆಯಲ್ಲಿ ಮಗ್ನನಾದ. ಪುನಃ ಕಾಗೆ ತನ್ನ ಮಾತನ್ನು ಮುಂದುವರೆಸಿತು. "ಹುಟ್ಟು, ಶೈಶವ, ಬಾಲ್ಯ, ಯೌವನ, ಮುಪ್ಪು, ಸಾವು ಇವು ದೇವರು/ಸೃಷ್ಟಿ ವ್ಯವಸ್ಥೆ ಮಾಡಿದ ಜೀವನ ಚಕ್ರದ ಮಹತ್ವದ ಘಟ್ಟಗಳು. ಆಯಾ ಕಾಲಕ್ಕೆ ಅವು ಘಟಿಸಲೇಬೇಕು. ಬದುಕು, ಜೀವನದ ಸ್ವಾರಸ್ಯಗಳು ಇರುವುದೇ ಇವುಗಳಲ್ಲಿ" ಇದಕ್ಕೆ ವಿರುದ್ಧವಾದ ಯಾವುದೇ ಸ್ಥಿಗತಿಯು ಮೇಲ್ನೋಟಕ್ಕೆ ವರವಾಗಿ ಕಂಡರೂ ಅಂತರಾಳದಲ್ಲಿ ಶಾಪವೇ ಆಗಿರುತ್ತದೆ. ಸೃಷ್ಟಿಯ ನಿಯಮವನ್ನು ಮೀರಿ ನಡೆಯುವುದು ಅನಾಹುತಕ್ಕೆ ದಾರಿ ಮಾಡಿ ಕೊಡುತ್ತದೆ. ಇಂಥ ಅಜರಾಮರ ಜೀವನ ನಿನಗೆ ಬೇಕೇ? ವಿಚಾರ ಮಾಡು. ನಿನಗೆ ಉತ್ತರ 'ಹೌದು' ಎಂದು ಕಂಡುಬಂದರೆ ಖಂಡಿತವಾಗಿ ಬೊಗಸೆಯಲ್ಲಿ ನೀರನ್ನು ತಗೋ, ಕುಡಿದುಬಿಡು." ಪಾರ್ಥಸಾರಥಿಗೆ ಆವರಿಸಿದ ಅಜರಾಮರತೆಯ ಭ್ರಮೆ ಸರಿದು ಹೋಯಿತು. ಅವನಿಗೆ ಜ್ಞಾನೋದಯವಾಯಿತು. "ನಾನು ಅಜರಾಮರನಾಗುವುದು ಬೇಡ"ಎಂದು ಹೇಳುತ್ತ ಎದ್ದು ನಿಂತ ಪಾರ್ಥಸಾರಥಿ. ಕಾಗೆಗೆ ಧನ್ಯವಾದ ಹೇಳುತ್ತಾ ಹೊರಡಲನುವಾದ. ಕಾಗೆ ಅವನಿಗೆ ಪುನಃ ಹೇಳಿತು:

ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ
ದೇಹಿಮೆ ಕೃಪಯಾ ಶಂಭೋ ತ್ವಯಿ ಭಕ್ತಿಂ ಅಚಂಚಲಂ

ನೀನು ದೇವರಲ್ಲಿ ಬೇಡಿಕೊಳ್ಳಬೇಕಾದ ಯೋಗ್ಯ ವರ ಇದು ಅನ್ನುವುದನ್ನು ಮರೆಯಬೇಡ. ಈಗ ಪಾರ್ಥಸಾರಥಿಗೆ ತನ್ನ ಮುಂದಿನ ಗುರಿ ಸ್ಪಷ್ಟವಾಗಿ ಕಾಣತೊಡಗಿತು.

(ದ. ರಾ. ಬೇಂದ್ರೆಯವರ ಭಾಷಣ ಹಾಗು ಅಲೆಕ್ಸಾಂಡರ್ ದಿ ಗ್ರೇಟ್ ಇವರ ದೃಷ್ಟಾಂತಕತೆಯ ಪ್ರೇರಣೆಯಿಂದ)

■

# ಹ್ಯಾಪಿ ದೀಪಾವಳಿ ! ಧನ್ಯವಾದಗಳು!!

**। ಹಿರಿಯೂರು ರಾಘವೇಂದ್ರ**

ದೀಪಾವಳಿ ಸಡಗರ ಹತ್ತಿರ ಬಂದೇ ಬಿಡ್ತು. ಪಟಾಕಿ ಸದ್ದಿಗಿಂತ ನಾಗೇಂದ್ರನ ಸುದ್ದಿಯೇ ಹೆಚ್ಚು 'ಢಂ'ಗುಡುತ್ತಿತ್ತು.

"ಥತ್, ಈ ಮನುಷ್ಯ ಹೊಟ್ಟೆಗೆ ಇಡ್ಲಿ, ಚಟ್ನಿ ತಿನ್ತಾನೋ ಇಲ್ಲ ಇಡ್ಲಿ ಸಾಂಬಾರ್ ನೆಂಚಿಕೋತಾನೋ ಮೊದಲು ಗೊತ್ತಾಗಬೇಕು"

ಗುಂಡಣ್ಣನಿಗೆ ಕರತಾಮಲಕ ಸಿಟ್ಟಿತ್ತು ನಾಗೇಂದ್ರನ ಮೇಲೆ "ಒಂದು ಸಾರಿ ಬಚಾವ್ ಮಾಡಬಹ್ದು, ಎರಡು ಸಾರಿ ಬಚಾವ್ ಮಾಡಬಹ್ದು , ಎಷ್ಟು ಸಾರೀಂತ ಮುಂಡೇದನ್ನ ಉಳಿಸಿಕೊಳ್ಳೋದಕ್ಕಾಗುತ್ತೆ ?"

ಜೇಸೀ ಕೂಡಾ ತಾರಮ್ಮಯ್ಯ, ರಘುಕುಲ ರಾಮಚಂದಿರನ !

"ಇವನ ಕಾಟ ಇನ್ನು ತಡೆದುಕೊಳ್ಳೋದಕ್ಕೆ ಆಗೋದಿಲ್ಲಪ್ಪ ನನ್ ಕೈಲಿ" ಅರುಣಾನೂ ಬಿರುಸಿನ ಬಾಣವನ್ನೇ ಬಿಟ್ಟಳು.

"ಜೀವನ ಅಂದ್ಮೇಲೆ ಇದೆಲ್ಲಾ ಕಾಮನ್ನು. ನಾಗೇಂದ್ರ ನಮಗೆಲ್ಲ ಬಹಳ ಸಪೋರ್ಟ್ ಮಾಡಿದಾನೆ, ಗ್ರಾಟಿಟ್ಯೂಡ್ ಇರೋರು ಆಟಿಟ್ಯೂಡ್ ತೋರಿಸಬಾರದು"

ಕಚ್ಚಿಕೊಳ್ಳಲಿ ಬಿಡಲಿ ನಾಗೇಂದ್ರನ ಬಲಗೈ ಮಾಧು ತಿಪ್ಪೇ ಸಾರಿಸೋ ಕೆಲಸ ಮಾಡಿದ.

"ತೆಪ್ಪಗೆ ಕೂತ್ಕೊಳ್ಳಲೇ ನೀನು, ಮಳೆ ಗ್ಯಾಪಿನ ಮಧ್ಯೆ ತೂಕೊರ್ಂಡ್ ಸಪೋರ್ಟ್ ಮಾಡಬೇಡ "

ಲೋಕೀಗೂ ಉರಿದು ಹೋಗಿತ್ತು, ಮಾತು ತೆರದೇ ಬಿಟ್ಟ.

"ಏನಾಯ್ತು ಅಂತ ಒಂದೇ ಕಣ್ಣಲ್ಲಿ ಜೊಲ್ಲು ಸುರಿಸ್ತೀಯ, ಬಿಟ್ಹಾಕು ಈ ಸಾರಿ ಅವನಿಗೆ ಗ್ರಹಚಾರ, ಗ್ರಹಚಾರ ಬಿಡಿಸಿ ಬಿಡೋಣ. ಕಾಲ್ ಮಾಡಿ ಕರ್ಸೊ ಅವನ್ನ" ಗುಂಡಣ್ಣನದು ವರ್ಡಿಕ್ಟು.

"ಎಸ್. ಕರ್ಸೊ ಅವನ್ನ. ನಮಗೇನಾದ್ರೂ ಆದ್ರೆ ಎಳ್ಳು ಮುಕ್ಕೋಕ್ಕೆ ಇವನೊಬ್ನೇನಾ ಊರಲ್ಲಿರೋದು?" ಯಾವಾಗ ಜೇಸೀನೂ ಕಿರುಚಾಡಿದ್ನೋ ನಾಗೇಂದ್ರನಿಗೆ ಕಾಲ್ ಹೋಯ್ತು, ಅವ ಕಾಲಲ್ಲೇ ಕಾಲವಾಗೋದಕ್ಕೆ ಮುಂಚೆ ನಡೆದು ಬಂದ.

"ಏನೋ ನಾಗೇಂದ್ರ ನಿನ್ ಕಾಟ ! ಇದೆಲ್ಲ ಅತಿಯಾಯ್ತು ಅನ್ನಿಸೋದಿಲ್ವಾ ನಿಂಗೆ, ಪಾಪ ಮಹಾಮನೆ ಡೆಲಿವರಿ ಲೇಟಾದ್ರೆ ಕೊರಗೋ ಬಸುರೀ ಥರಾ ಕೊರಗ್ತಿದಾನೆ"

ಹೆಣ್ಣಾದ ಅರುಣಾ ಮತ್ತಿನ್ಯಾವ ಹೋಲಿಕೆ ಕೊಡೋದಕ್ಕೆ ಸಾಧ್ಯ ?

"ಒಳ್ಳೇ ಚೆನ್ನಾಯ್ತಲ್ಲ, ದೀಪಾವಳಿ ಬಂತು, ಮಹಾಮನೆ ಪಟಾಕಿ ಅಂಗಡಿ ಇಡ್ಲೀ , ಒಂದಷ್ಟು ಕಾಸು ಮಾಡ್ಕೊಳ್ಳೀ ಅಂತಾನೇ ನಾನು ಇಡ್ಲಿ ತಿನ್ತಾ ಇದ್ದೋನು

ಕೈಯೂ ತೊಳೀದೆ ದುಡ್ ಕೊಟ್ರೆ ಎಲ್ರೂ ಸೇರ್ಕೊಂಡು ನನಗೇ ಗುನ್ನಾ ಇಕ್ತಾ ಇದೀರಲ್ಲ" ಏನ್ ನಡೀತಿದೆ ಅಂತಾನೆ ನಾಗೇಂದ್ರನಿಗೆ ಅರ್ಥ ಆದ ಹಾಗೆ ಕಾಣಿಸಲಿಲ್ಲ!

"ಅದನ್ನು ನಾವು ಹೇಳೋದಕ್ಕಿಂತ ಫಸ್ಟ್ ಪಾರ್ಟಿ ಮಹಾಮನೇನೆ ಹೇಳೋದು ಬೆಸ್ಟು"

ಲೋಕಿ ಹಾಗಂದಿದ್ದೇ ತಡ ಮಹಾಮನೆ ಬಿಕ್ಕಳಿಸಿ ಖಾಲಿ ಇದ್ದ ಜೇಸೀ ತೊಡೆಯಮೇಲೆ ಪವಡಿಸಿ, ಅವನ ಪ್ಯಾಂಟ್ನಲ್ಲೇ ಕಣ್ಣೊರೆಸಿಕೊಂಡ.

ಜೇಸೀ ಅವನ ತಲೆ ಸವರಿದ, ಕರ್ಚೀಫಿನಿಂದ ಮೂಗೊರೆಸಿದ.

"ಇದ್ದಬದ್ ದುಡ್ಡು, ನಾಗೇಂದ್ರ ಕೊಟ್ಟ ಹಣ ಎರಡೂ ಸೇರಿಸಿ ಪಟಾಕಿ ಸ್ಟಾಲ್ ಹಾಕ್ದೆ. ರಾತ್ರಿ ಸುರಿದ ಮಳೆಗೆ ಎಲ್ಲ ಹರೋಗರ" ಎದ್ದು ಕೂತ ಮಹಾಮನೆ ಮಾತು ಮುಂದು 'ಒರೆಸಿದ !'

"ಎಲ್ಲದಕ್ಕೂ ಇವನೇ ಕಾರಣ"

ಸಹಾಯ ಮಾಡಿದ ನಾಗೇಂದ್ರನತ್ತಲೇ ಬೆಟ್ಟು ಮಡುಗಿದ ಮಹಾಮನೆ.

"ಥತ್ತೇರಿಕೆ ಹೆಲ್ಪ್ ಮಾಡಿದ್ದೂ ಅಲ್ದೇ ಬಲ್ಬ್ ಥರಾ ಬರ್ನಾಗಬೇಕಾ ನಾಗೇಂದ್ರ?" ಕುಡಿದಿರದಿದ್ದರೂ ಮಾಧು ಸಖತ್ ಕಿಕ್ ಕೊಟ್ಟ.

"ಇವನ ಹಾರೈಕೆಯೇ ನಂಗೆ ಮುಳಿವಾಯ್ತು. ಇವನು ತೆಪ್ಪಗಿದ್ದಿದ್ದರೆ ಪಟಾಕಿ ಮಾರಿ ಸಖತ್ ದುಡ್ಡು ಮಾಡಿಕೊಳ್ಳುತ್ತಿದ್ದೆ" ಸದಾ ಧಾರಾವಾಹಿ ನೋಡೋ ಮಹಾಮನೆ ಏನು ಹೇಳಿದ್ರೂ ಇನ್ಸ್ಟಾಲ್ಮೆಂಟಲ್ಲೇ ಹೇಳೋದು !

ಪಟಾರನೆ ಮಹಾಮನೆಯ ತಲೆಗೊಂದು ಮುಡುಗಿದ ಗುಂಡಣ್ಣ,

"ಕನ್ಕ್ಲೂಡ್ , ಕನ್ಕ್ಲೂಡ್ ಮಾಡು " ಎಂದ.

ನಾಗೇಂದ್ರ ಹೆಲ್ಪ್ ಮಾಡಿದ್ದೂ ಅಲ್ಲದೆ ಹಾಗೆ ಮಾಡಿದ್ದಕ್ಕೆ ಉಗಿಸಿಕೊಳ್ಳೋ ಸ್ಥಿತಿಗೆ ಬಂದು ತಲುಪಿದ್ದ !

"ಅವನು ಹೇಳ್ತಾ ಇದಾನೆ ಅಂದ್ಮೇಲೆ ಹೇಳ್ತಾ ಇದ್ದಾನೆ ವತ್ತಾಚ್ ! ತಪ್ಪು ಒಪ್ಕೊಂಡ್ರೆ ನಿನ್ನನ್ನು ಕ್ಷಮಿಸಿ ಅಪ್ಪಿಕೊಳ್ತೀವಿ, ಇಲ್ಲಾಂದ್ರೆ ಗೋಡೆಗೆ ಫೋಟೋ ಮಾಡಿಬಿಡ್ತೀವಿ ಗೊತ್ತಾಯ್ತಾ ?"

ಲೋಕಿ ಫೈನಲ್ ವಾರ್ನಿಂಗ್ ಕೊಟ್ಟ.

"ದೇವ್ರಾಣೆ ನನ್ನಿಂದ ತಪ್ಪಾಗಿಲ್ಲ, ಅದೇನು ಅಂತಾ ಅವನೇ ಹೇಳ್ಲಿ"

ನಾಗೇಂದ್ರ ಕ್ಲೈಮ್ಯಾಕ್ಸ್ ಗೆ ಸಿದ್ಧನಾಗಿ ಬಿಟ್ಟ !

"ಪಟಾಕಿ ಅಂಗಡಿ ಇಟ್ಕೋ, ಮೊದಲನೆಯ ಕಸ್ಟಮರ್ ಬೇಜಾನ್ ಪಟಾಕಿ ತಗೊಂಡ್ರು. ನನಗೆ ಸಖತ್ ಖುಷಿ ಆಯ್ತು. ಅವರು ಇನ್ನೇನು ದುಡ್ಡು ಕೊಡಬೇಕು, ನಾಗೇಂದ್ರನ ಮೆಸೇಜ್ ಬಂತು, ಅದನ್ನ ಓದಿ ಸಂಕಟ ಆಯ್ತು. ಅದೊಳ್ಳೆ ಪ್ರಿಡಿಕ್ಷನ್ ಇದ್ದಹಾಗಿತ್ತು. ರಾತ್ರೀನೇ ಜೋರುಮಳೆ. ಪಟಾಕಿ ಠುಸ್ಸು"

ಮಹಾಮನೆ ಸ್ಟೇಟ್ಮೆಂಟ್ ಸ್ಲಮ್ಮಲ್ಲಿ ಕೆಲಸ ಇಲ್ದೇ ಕೂತಿರೋರ ಎದುರಿಗೆ

ಇಂಗ್ಲಿಷ್ನಲ್ಲಿ ಮಾತಾಡಿದ ಹಾಗಿತ್ತು ! ರೇಗೋಯ್ತು ಎಲ್ಲರಿಗೂ, ವಿಷಯ ಬಿಟ್ಟು ಬೇರೆಲ್ಲಾ ಮಾತಾಡ್ತಿದಾನೆ ಮಹಾಮನೆ !

"ನಂ ಪೇಷನ್ಸ್ ಗೂ ಒಂದು ಮಿತಿ ಇರುತ್ತೆ. ನಾಗೇಂದ್ರನಿಂದ ನಾನು ಹಾಳಾದೆ, ನಾಗೇಂದ್ರನಿಂದ ನಾನು ಹಾಳಾದೆ ಅಂತ ನೀನು ಹೇಳಿದ್ದಕ್ಕೆ ನಾವೆಲ್ಲ ಈ ನಾಗೇಂದ್ರನಿಗೆ ಲೈಫ್ ಟೈಮಲ್ಲಿ ಬುದ್ಧೀ ಬರೋದಿಲ್ಲ ಅಂತ ಬೈಕೊಂಡ್ವಿ. ಈಗ ನೋಡಿದ್ರೆ ಅವನ ವಿಷಸ್ ಓದಿ ಹಾಳಾದೆ ಅಂತಿದೀಯ, ಅದೇನೂಂತ ವಿಷ್ ಮಾಡಿದ್ದ ಅಂತ ಸ್ವಲ್ಪ ಬೊಗಳೂ" ಅಂದ ತಾಳ್ಮೆ ಕಳೆದುಕೊಂಡ ಗುಂಡಣ್ಣ.

"ಹ್ಯಾಪಿ ದಿವಾಳಿ ಅಂತ ಮೆಸೇಜ್ ಮಾಡಿದ್ದ, ಮಳೆ ಬಂದು ನನ್ನ ದಿವಾಳಿ ಮಾಡಿಬಿಡ್ತು"

ಮಹಾಮನೆ ಹೇಳಿದಾಗ ಎಲ್ಲರೂ ಕಂಗಾಲಾಗಿ ಬಿಟ್ಟರು !

"ಥೋ ತಪ್ ಮಾಡಿಬಿಟ್ಟೆ. ಹ್ಯಾಪಿ ದೀಪಾವಳಿ ಅಂತ ವಿಷ್ ಮಾಡಬೇಕಿತ್ತು!

ದಿವಾಳಿ ಅಂದ್ಬಿಟ್ಟೆ!"

ಮಾಡದ ತಪ್ಪಿಗೆ ತೆಪ್ಪಗಾದ ನಾಗೇಂದ್ರ !

***

---

## ಪ್ರೊ. ಪ್ರಭುಪ್ರಸಾದ್ ಅವರು ತಮ್ಮ ಮೂರು ವರುಷದ ಮಗಳನ್ನು ಎಬ್ಬಿಸಲು ಹಾಡುತ್ತಿದ್ದ ಕವನ

ಮುದ್ದುಮಗಳೇ ಏಳು ಜಾಣೆ ಬೆಳಗಾಯಿತು
ಮಿನ್ನಿ ಮರಿ ಚಿನ್ನ ಮರಿ ಎದ್ದು ಬೇಗ ಬಾ
ಹೊರಗೆ ಬೆಳಕು ಹರಿದು ನಿನ್ನ ಕರೆಯುತಿದೆ ಬಾ
ನಿನ್ನ ಅಣ್ಣ ಶುಭನ ನೋಡು ಎದ್ದು ಆಗಲೇ
ಸೀಬೆ ಮರದ ಮೇಲೆ ಕಾಯಿ ಹುಡುಕುತಿರುವನು
ಇಲ್ಲ, ಚಿಟ್ಟೆಯೊಂದರ ಹಿಡಿಯೆ ಹೊಂಚು ಹಾಕುತಿರುವನು
ಕೆಂಪಿನೆದೆಯ ಕರಿಯ ಗುಬ್ಬಿ ಅಳಿಲು ಚಿಟ್ಟೆ ನಾಯಿಮರಿ
ಆಟವಾಡೆ ನಿನ್ನ ದಾರಿ ಕಾಯುತಿರುವುವು
ಬಲದ ಕೈಯನೂರಿ ಏಳು ಸಾಯಿರಾಮ ರಕ್ಷಿಸೆಂದು
ಕೈಯ ಮುಗಿಯುತ
ಮುಗುಳುನಗುವ ಸ್ವಾಮಿ ಮುಖವ ನೋಡು ಮೊದಲಿಗೆ
ಹಲ್ಲನುಜ್ಜಿ ಮುಖವ ತೊಳೆದು ಹಾಲು ಕುಡಿ ಬಾ

(ಸಂಭಾವನಾ ಗ್ರಂಥದಲ್ಲಿ ಮಗಳು ಶ್ರೀಮತಿ ಯಶೋಮಾಲಿನಿ ನೆನಪಿಸಿಕೊಂಡದ್ದು)

# ಹುರಿಗಾಳು ಪ್ರಸಂಗ

**। ವೈ. ಎನ್. ಗುಂಡೂರಾವ್**

ಹಳ್ಳಿಯಲ್ಲಿದ್ದಾಗ ಸ್ಕೂಲಿನಿಂದ ಬಂದ ನಂತರ ಸಂಜೆ ಮಾವಿನ ಹಣ್ಣು, ಸೀಬೆ ಹಣ್ಣು, ಬಾಳೆ ಹಣ್ಣು, ಏನಾದರೊಂದನ್ನು ತಿನ್ನಲು ನಮ್ಮಮ್ಮ ಸಿದ್ಧ ಮಾಡಿಟ್ಟಿರುತ್ತಿದ್ದಳು. ಇವು ಯಾವುವೂ ಇಲ್ಲವೆಂದರೆ ಕಡ್ಲೆಕಾಯಿ ಬೀಜ ಹುರಿದು ಖಾರ ಹಚ್ಚಿಡುವುದು, ಕಡ್ಲೆಪುರಿಗೆ ಖಾರ ಹಚ್ಚಿಡುವುದು, ಇಲ್ಲವೇ ಹುರಿಗಾಳು, ಚಕ್ಲಿ, ಕೋಡುಬಳೆ ಮುಂತಾದುವುಗಳನ್ನು ಸಿದ್ಧಮಾಡಿಕೊಂಡಿರುವುದು ರೂಢಿ. ಅರ್ಧ ಗಂಟೆ ಆಟವಾಡಿ ಹೊಟ್ಟೆ ಖಾಲಿ ಎನಿಸಿದಾಗ ನೀರು ಕುಡಿದು ಬರ್ತಿನಪ್ಪ ಎಂದು ಹೇಳಿ ಏನಾದರೂ ಕೊಡು ಎಂದು ನಮ್ಮಮ್ಮನನ್ನು ಪೀಡಿಸುವುದು ಇವೆಲ್ಲಾ ಇದ್ದದ್ದೇ.

ಇವೆಲ್ಲಾ ಈಗ ಏಕೆ ಜ್ಞಾಪಕಕ್ಕೆ ಬಂದಿತೆಂದರೆ ನನ್ನ ಮೊಮ್ಮಗ ಕೃಷ್ಣ ಸ್ಕೂಲಿನಿಂದ ಬಂದ ತಕ್ಷಣ ಅಜ್ಜಿ ಏನಾದರೂ ಕೊಡು ಎಂದು ನನ್ನಾಕೆಯನ್ನು ಪೀಡಿಸುತ್ತಿದ್ದ. ಅವನಿಗಾಗಿ ಚಕ್ಲಿ, ಕೋಡುಬಳೆ ಇಲ್ಲವೇ ಬೇಕರಿ ಐಟಂಸ್ ಅಥವಾ ಚಾಕೋಲೇಟ್ ಯಾವುದಾದರೊಂದು ಇರಲೇಬೇಕು. ಇವನ್ನು ತಿನ್ನುತ್ತಾ ಟಿವಿ ನೋಡುತ್ತ ಕೂತಿರುತ್ತಿದ್ದ. ನನ್ನಾಕೆ ಹಾಗೇ ಕೊಂಚ ರಿಲಾಕ್ಸ್ ಮಾಡಿಕೊಳ್ಳೋಣ ಎಂದು ರೂಮಿಗೆ ಹೋದರೆ ಅತ್ತ ಟಿವಿ ನೋಡುತ್ತಿದ್ದ ಕೃಷ್ಣ ಅಡುಗೆ ಮನೆಗೆ ಹೋಗಿ ಹಾರ್ಲಿಕ್ಸ್ ಡಬ್ಬವನ್ನೋ, ಬೋರ್ನ್ ವಿಟಾ ಡಬ್ಬವನ್ನೋ ತಂದಿಟ್ಟುಕೊಂಡು ಚಮಚೆಯಿಂದ ಸ್ವಲ್ಪ ಸ್ವಲ್ಪವೇ ತಿನ್ನತೊಡಗುತಿದ್ದ. ಒಂದು ದಿನ ಕೃಷ್ಣ ತಿಂಡಿ ಏನೂ ಕೇಳದೇ ನಿಶ್ಶಬ್ದವಾಗಿ ಟಿವಿ ನೋಡುತ್ತಾ ಕೂತುಬಿಟ್ಟಿದ್ದಾನಲ್ಲಾ ಎಂದು ನೋಡಿದರೆ ಟೋಸ್ಟ್ ಡಬ್ಬ ಹಿಡಿದು ಕುಳಿತಿದ್ದಾನೆ.

ಆದರೆ ನಮಗೆ ಹಳ್ಳಿಯಲ್ಲಿ ಹಾರ್ಲಿಕ್ಸ್, ಟೋಸ್ಟ್, ಬೋರ್ನ್‌ವಿಟಾ ಎಲ್ಲಿ ಸಿಗಬೇಕು. ಹುರಿಗಾಳು, ಚಕ್ಕುಲಿ, ಕೋಡುಬಳೆ ಇವಿಲ್ಲದಿದ್ದರೆ ಕಲ್ಲು ಸಕ್ಕರೆ ಕೊಬ್ಬರಿ ತುಂಡುಗಳನ್ನು ಜೋಬಿಗೆ ತುಂಬಿ ಅಮ್ಮ ಕಳಿಸುತ್ತಿದ್ದಳು. ಒಂದು ದಿನ ಹುರಿಗಾಳು ಜೇಬಿಗೆ ತುಂಬಿ ಆಟ ಆಡ್ಕೊಹೋಗು, ತಿರುಗಿ ಬರಬೇಡ ಎಂದು ಅಂಡಿನ ಮೇಲೆ ಒಂದು ಕೊಟ್ಟು ಕಳಿಸಿದಾಗ ತಿನ್ನುತ್ತಾ, ತಿನ್ನುತ್ತಾ, ಸೈಕಲ್ ರಿಮ್ ಓಡಿಸಿಕೊಂಡು ಆಂಜನೇಯನ ಗುಡಿ ಬಳಿ ಆಟವಾಡಲು ಸಿಗುತ್ತಾರೆಂದು ಹೊರಟೆ.

ನಾನು ಹೀಗೆ ಹುರಿಗಾಳು ಮೆಲ್ಲುತ್ತ ಹೋಗುತ್ತಿದ್ದುದನ್ನು ಶಾಂತ ( ನಮ್ಮಮ್ಮನ ಸೋದರ ಮಾವನ ಮಗಳು ) ನೋಡಿಬಿಟ್ಟಳು. ಏ, ಬಾಯಿಲ್ಲಿ ಎಂದು ಕರೆದಳು. ನಾನು ಯಾತಕ್ಕೋ ಕರೆಯುತ್ತಿದ್ದಾರೆಂದು ಹೋದರೆ ಚಕ್ಕನೆ ಚಡ್ಡಿ ಜೋಬಿಗೆ ಕೈ ಹಾಕಿ ಸ್ವಲ್ಪ ಹುರಿಗಳು ಎತ್ತಿಕೊಂಡು ತಿನ್ನುತ್ತಾ ಲೋ ಚನ್ನಾಗಿದೆ ಕಣೋ ಅಮ್ಮ ಮಾಡಿದ್ದಾ, ಶಾಂತ ಕೇಳಿದ್ಲು ಅಂತ ಒಂದರ್ಧ ಪಾವು ಹುರಿಗಾಳು ಬೇಕಂತೆ ಎಂದು ಇಸ್ಕೊಂಡು ಬಾ ಎಂದು ಕೈ ಬಿಟ್ಟಳು. ಬಿಟ್ಟಿದ್ದೇ ಸಾಕೆಂದು ಗುಡಿ ಹತ್ತಿರ ಓಡಿಬಿಟ್ಟೆ. ಏಕೆಂದರೆ ಅಮ್ಮ ಯಾರಿಗೂ ತೋರಿಸಬೇಡ ನಾನು ಜಾಸ್ತಿ ಮಾಡಿಲ್ಲ, ಮೆತ್ತಗೆ ತಿನ್ಕೊ ಎಂದು ಕೊಟ್ಟು ಕಳಿಸಿದ್ದಳು. ಆದರೆ ನಾನು ಈಗ ಶಾಂತಳ ಕೈಗೆ ಸಿಕ್ಕಿಕೊಂಡಿದ್ದೆ. ಈ ರೀತಿ ಶಾಂತಳಿಗೆ ಹುರಿಗಾಳು ಬೇಕಂತೆ ಅಂತ ಅಮ್ಮನ ಹತ್ತಿರ ಹೇಳಿದರೆ ನೀನೇಕೆ ಅವಳ ಮುಂದೆ ತಿನ್ನೋಕೆ ಹೋದೆ ಎಂದು ಮತ್ತೆ ಹೊಡೆತ ತಪ್ಪುತ್ತಿರಲಿಲ್ಲ. ತಂದು ಕೊಡದಿದ್ದರೆ ಶಾಂತಳ ಕಾಟ. ಆಟದ ನಂತರ ಆಂಜನೇಯನ ದೇವಸ್ಥಾನದ ಹತ್ತಿರ ನಿಂತು ನೋಡಿದರೆ ಶಾಂತ ಕುದುರೆ ಗೋಡೆ ಮೇಲೆ (ಜಗುಲಿಯ ಪಕ್ಕದ ಗೋಡೆ ) ಕಾಯುತ್ತಾ ಕುಳಿತಿದ್ದಾಳೆ. ನಾನು ಆಡುವಷ್ಟು ಹೊತ್ತು ಆಡಿ

ಸುಸ್ತಾದರೂ ಶಾಂತ ಎದ್ದು ಮನೆಯೊಳಕ್ಕೆ ಹೋಗುತ್ತಿಲ್ಲ. ಏನಪ್ಪಾ ಮಾಡುವುದು ಎಂದು ಯೋಚಿಸಿದೆ. ಕಡೆಗೊಂದು ಉಪಾಯ ಹೊಳೆದು ಎರಡು ಮೂರು ಬೀದಿಗಳನ್ನು ಹಾದು ಸ್ಕೂಲಿನ ಹತ್ತಿರ ಬಂದು ಮನೆ ಸೇರಿಕೊಂಡಿದ್ದೆ. ನೀರು ಕುಡಿಯುತ್ತಿದ್ದಾಗ ಎಷ್ಟು ಹೊತ್ತೋ ಆಟ ಆಡೋದು ಓದ್ಕೋ ಹೋಗು ಎಂದು ಅಮ್ಮ ಗದರಿ ಲಾಟೀನು ಹಚ್ಚಿ ತಂದು ಮುಂದಿಟ್ಟಳು.

ಮಾರನೆಯ ದಿನ ಹೊಲದ ಕಡೆ ಹೊರಟಾಗ ಬಟ್ಟೆ ಒಗೆಯಲು ಕೆರೆಗೆ ಹೋಗಿದ್ದ ಶಾಂತಳ ಕೈಗೆ ಸಿಕ್ಕಿಬೀಳಬೇಕೇ? ಬಾಯಿಲ್ಲಿ ಎಂದು ಕರೆದಳು. ಹೊಲಕ್ಕೆ ಹೋಗಬೇಕು ಎಂದು ತಪ್ಪಿಸಿಕೊಳ್ಳಲು ನೋಡಿದೆ. ಆದರೆ ಹಿಡಿದುಕೊಂಡು ಬಿಟ್ಟಳು. ಎಲ್ಲೋ ಹುರಿಗಾಳು, ನಿಮ್ಮಮ್ಮನ್ನ ಕೇಳಲೇ ಇಲ್ವಾ ? ಇವತ್ತು ಸಂಜೆ ತಗೊಂಡು ಬಾ ಎಂದು ಮತ್ತೆ ಒತ್ತಾಯಿಸಿದಳು. ನಾನು ಯಾವಾಗ ಹೊಲ, ಗದ್ದೆ, ಕೆರೆ, ದೇವಸ್ಥಾನ ಹೀಗೆ ಆಡಲು ಹೋದಾಗಲೂ ಶಾಂತ ಕುದುರೆ ಗೋಡೆ ಮೇಲೆ ಕುಳಿತು ಸಿಕ್ಕವರ ಜೊತೆ ಹರಟುತ್ತಲೇ ಇರುತ್ತಿದ್ದಳು. ಸುಮಾರು ಹತ್ತು ಹದಿನೈದು ದಿವಸ ಅವರ ಮನೆ ಮುಂದೆ ಓಡಾಡಿದ್ದರೆ ಕೇಳಿ.

ಆಗಲೇ ಹದಿನೈದು ದಿವಸ ಕಳೆದೇ ಹೋಗಿತ್ತು. ಶಾಂತಳ ಕೈಯಿಂದ ತಪ್ಪಿಸಿಕೊಳ್ಳಲು ಗದ್ದೆ ಹೊಲದ ಕಡೆ ಹೊರಟಾಗಲೆಲ್ಲಾ ಊರೆಲ್ಲಾ ಸುತ್ತಿಕೊಂಡು ತಲುಪುತ್ತಿದ್ದರೆ ಒಂದು ದಿನ ಹೊಲದಿಂದ ಹಿಂದಿರುಗುವಾಗ ಅರ್ಜೆಂಟ್ ಕೆಲಸವಿದ್ದುದರಿಂದ ಅವರ ಮನೆ ಮುಂದೆಯೇ ಬರಬೇಕಾಯ್ತು. ನಾನು ಅವರ ಮನೆ ಮುಂದೆ ಬರುವುದಕ್ಕೂ ಶಾಂತ ಬಾಗಿಲ ಬಳಿ ಬರುವುದಕ್ಕೂ ಸರಿಹೋಯ್ತು. ನನ್ನನ್ನು ಕಂಡವಳು ಲೋ ಲೋ ನಿಂತ್ಕೊಳೋ ಎಂದು ಹಿಡಿಯಲು ಬಂದಾಗ ಇನ್ನು ಇವಳ ಕೈಗೆ ಸಿಕ್ಕಿಕೊಂಡ್ರೆ ಮಹಾ ಕಷ್ಟ, ಹುರಿಗಾಳು ತರೋವರ್ಗೂ ಇವಳು ಬಿಡೋಲ್ಲ ಎಂದು ಓಡಿಬಿಟ್ಟೆ. ಮನೆಗೆ ಬಂದು ನೋಡಿದರೆ ಶಾಂತಳ ತಂದೆ ಅಂದರೆ ನಮ್ಮ ತಾಯಿಯ ಸೋದರ ಮಾವ, ರಾಮರಾಯರು ಅಮ್ಮನೊಡನೆ ಏನೋ ಮಾತನಾಡುತ್ತಾ ಕುಳಿತಿದ್ದರು. ಅಷ್ಟರಲ್ಲಿ ಪಕ್ಕದ ಬೀದಿಯ ಹುಡುಗನೊಬ್ಬ ರಾಮರಾಯರ ಬಳಿ ಓಡೋಡುತ್ತಾ ಬಂದು ಬುದ್ಧಿ, ಅಮ್ಮಾವ್ರು ಬಿದ್ದುಬಿಟ್ಟವ್ರೆ, ಬಿರ್ರನೆ ಬರಬೇಕಂತೆ ಎಂದಿದ್ದೇ ತಡ ಎದ್ದನೋ ಬಿದ್ದನೋ ಎಂದು ರಾಮರಾಯರು ಓಡಿದರು. ಶಾಂತ ಇವರ ಹತ್ತಿರ ಏನು ಹೇಳಿ ಕಳಿಸಿಲ್ಲ ಎಂದುಕೊಂಡು ಸಧ್ಯ ಬಚಾವಾದೆ ಎಂದು ನಿಟ್ಟುಸಿರು ಬಿಟ್ಟೆ.

ಆದರೆ ಮನೆ ತಲುಪಿದ ರಾಮರಾಯರು ಜ್ಞಾನತಪ್ಪಿ ಬಿದ್ದಿದ್ದ ಹೆಂಡತಿಯ ಮುಖಕ್ಕೆ ನೀರು ಚುಮುಕಿಸಿದಾಗ ಎಚ್ಚರಗೊಂಡರು. ಅನಂತರ ಎದುರು ಮನೆಯ ಪಂಡಿತರಿಂದ ಏನೋ ಔಷಧಿ ಕೊಡಿಸಿದ ನಂತರ ಸರಿಹೋದರು.

ಈ ವಿಷಯ ನಮ್ಮಮ್ಮನಿಗೆ ತಲುಪಿದಾಗ ಅಲ್ಲ ಕಣೋ ನಿನ್ನೆ ದಿನ ಶಾಂತ ಕರೆಯುತ್ತಿದ್ದರೆ ಓಡಿ ಬಂದುಬಿಟ್ಟೆಯಂತೆ. ಪಾಪ ಅಕ್ಕ ಜ್ಞಾನ ತಪ್ಪಿ ಬಿದ್ದಿದ್ದರಂತೆ. ಮಾವನನ್ನು ಕರೆಯಲು ನಿನಗೆ ಹೇಳೋಣವೆಂದರೆ ಹಾಗಾ ಓಡಿಬರುವುದು ಎಂದು ಅಮ್ಮ ರೇಗಾಡಿದಳು.

ಶಾಂತ ನನ್ನನ್ನು ಕರೆದದ್ದು ಅಕ್ಕ ಜ್ಞಾನತಪ್ಪಿ ಬಿದ್ದಿದ್ದಾಳೆಂಬ ವಿಷಯ ತಿಳಿಸಲೆಂಬುದಕ್ಕೆ ಎಂದು ನನಗಾದರೂ ಹೇಗೆ ತಿಳಿಯಬೇಕು. ಒಂದು ಪಕ್ಷ ಹುರಿಗಾಳು ತರಲಿಲ್ಲವೆಂದು ಹಿಡಿದುಕೊಂಡು ಬಿಟ್ಟಿದ್ದರೆ. ಅಮ್ಮನ ಬಳಿ ನಿಜ ಸ್ಥಿತಿ ತಿಳಿಸುವುದಾದರೂ ಹೇಗೆ. ಅದಕ್ಕೇ ಅಮ್ಮನ ಬಳಿ ಏನೂ ಹೇಳದೇ ಬಾಯಿ ಮುಚ್ಚಿಕೊಂಡು ಕುಳಿತುಬಿಟ್ಟೆ. ■

**● ದಂನಆ**

- ಹುಡುಗಿಯರೇಕೆ ರಕ್ತದಲ್ಲಿ ಪ್ರೇಮಪತ್ರಗಳನ್ನು ಬರೆಯುವುದಿಲ್ಲ?
- ಕಹಿ ಉಂಡ ಹೃದಯ ವಯಸ್ಸನ್ನು ಬಹು ಬೆಳೆಸಿ ಹೇಳುತ್ತದೆ.
- ಐ ನೆವೆರ್ ಲೂಸ್. ಈದರ್ ಐ ವಿನ್ ಆರ್ ಐ ಲರ್ನ್.
- ಪ್ರತಿ ಯಶಸ್ವೀ ಗಂಡನ ಹಿಂದೆ ಒಬ್ಬ ದಣಿದ ಮಹಿಳೆ ಇರುತ್ತಾಳೆ.
- ಬರೆಯುವವರು ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತಾರೆ. ಆದರೆ ಓದುಗರು ಸಿಗುವುದು ಕಷ್ಟ. ಓದುಗರನ್ನು ಸೃಷ್ಟಿಸುವುದು ಇನ್ನೂ ಕಷ್ಟ.
- ವಿಸ್ಡಂ ಈಸ್ ನೋಯಿಂಗ್ ವಾಟ್ ವಿ ಡು ನಾಟ್ ನೊ.
- 'ನಾನೊಬ್ಬ ಸೆಲ್ಫ್‌ಮೇಡ್ ಮ್ಯಾನ್' ಎಂದು ಒಬ್ಬ ಬೀಗಿದಾಗ ಅವನ ಸ್ನೇಹಿತನ ಪ್ರತಿಕ್ರಿಯೆ: 'ಸದ್ಯ, ದೇವರ ಜವಾಬ್ದಾರಿ ತಪ್ಪಿತು'.
- ಒಬ್ಬನನ್ನು ನಂಬಬೇಕೆ ಬೇಡವೆ ಎಂದು ನಿರ್ಧರಿಸಲು ಅತ್ಯುತ್ತಮ ಮಾರ್ಗ ಎಂದರೆ ಅವನನ್ನು ನಂಬುವುದು.
- ಯುದ್ಧ ಮುಗಿಯುವುದು ಯಾವಾಗ? ಶತ್ರು ಹಾಗೆ ಹೇಳಿದ ನಂತರ ಮಾತ್ರ.
- ಆನ್ ಟೀವಿ ಯು ಟಾಕ್ ಅಂಟಿಲ್ ಯು ಥಿಂಕ್ ಆಫ್ ಸಂಥಿಂಗ್ ಟು ಸೆ.
- ಧ್ಯಾನ ಮಾಡಲು ಹಿಮಾಲಯಕ್ಕೇ ಹೋಗಬೇಕಿಲ್ಲ. ರಸ್ತೆ ಬದಿಯಲ್ಲೇ ಮಾಡಬಹುದು, ಅದೇ ಸವಾಲು.
- ನಿಜವಾದ ಸ್ನೇಹಿತ ನಿಮ್ಮ ಕಣ್ಣೀರು ಒರೆಸುವವನಲ್ಲ; ನೀವು ಕಣ್ಣೀರು ಸುರಿಸದಂತೆ ಮಾಡುವವನು.
- ಗಂಟಲು ಕಟ್ಟಿದಾಗ ಮಾಡರ್ನ್ ಮಗು ತನ್ನ ಮಮ್ಮೀಗೆ ಹೇಳಿತಂತೆ: ಸಂಬಡಿ ಹ್ಯಾಸ್ ಟರ್ನ್ಡ್ ಡೌನ್ ಮೈ ವಾಲ್ಯೂಮ್.
- ನೀವು ಆಯ್ಕೆ ಮಾಡಬೇಕಾದ ಪರಿಸ್ಥಿತಿ ಬಂದಿದ್ದು ನೀವು ಆಯ್ಕೆ ಮಾಡದೇ ಇದ್ದರೂ ಅದೇ ಒಂದು ಆಯ್ಕೆಯೇ ಆಗಿರುತ್ತದೆ ಅಲ್ಲವೆ.
- ವಾಟ್ ರಿಯಲಿ ಫ್ಲಾಟರ್ಸ್ ಎ ಮ್ಯಾನ್ ಈಸ್ ದಟ್ ಯು ಥಿಂಕ್ ಹಿಮ್ ವರ್ತ್ ಫ್ಲಾಟರಿಂಗ್.

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.

ಉತ್ತರಭೂಪ
ಪ್ರಶ್ನೋತ್ತರಗಳ
ಸಂಗ್ರಹ




# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ, ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**

**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**

ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

# ಮಾತು ಬಿಡೋದು

**। ಸುಕೇಶವ**

ಸೋಮು ತನ್ನ ಹೆಂಡತಿ ಸೋಮಿಯ ಜೊತೆ ಒಂದು ವಾರದಿಂದ ಮಾತು ಬಿಟ್ಟಿದ್ದಾನೆ. ಮಾತು ಬಿಡೋದು ಏನಂತೀರ. ಸೋಮುಗೆ ಹೆಂಡತಿಯ ಮೇಲೆ ಯಾವುದೋ ಕಾರಣಕ್ಕೆ ಬೇಜಾರಾದರೆ ಮಾತು ಬಿಡುತ್ತಾನೆ. ಅಂದರೆ ಅವನೂ ಅವಳ ಜೊತೆ ಮಾತಾಡೋಲ್ಲ, ಅವಳು ಮಾತಾಡೋಕೆ ಬಂದರೆ ಪ್ರತಿಕ್ರಿಯೆ ನೀಡೋಲ್ಲ. ಮನೇಲಿ ಇರೋದು ಇಬ್ಬರೇ ಆಗಿರುವಾಗ ಇದೆಂಥಾ ವಿಚಿತ್ರ ಎಂದರೆ ಅದು ಸೋಮಿಗೆ ಅಭ್ಯಾಸವಾಗಿದೆ. ಬರೀ ಸೋಮು ಮಾತ್ರ ಅಲ್ಲ ಸೋಮಿಯೂ ಗಂಡನ ಜೊತೆ ಮಾತು ಬಿಡುತ್ತಾಳೆ. ಆಯಾ ಸಂದರ್ಭಗಳಿಗೆ ಅನುಗುಣವಾಗಿ ಈ ಮಾತು ಬಿಡೋದು ಹತ್ತೋ ಹದಿನೈದು ದಿನವೋ ಇರುತ್ತದೆ. ನಂತರ ಅವರಿಗೇ ಗೊತ್ತಾಗದ ಹಾಗೆ ಮಾತು ಷುರು ಮಾಡಿಕೊಳ್ಳುತ್ತಾರೆ. ಮಾತು ಬಿಟ್ಟಾಗ ಒಬ್ಬರಿಗೆ ಇನ್ನೊಬ್ಬರ ಮೇಲೆ ಬೇಸರವೇ ಹೊರತು ಸಿಟ್ಟಿರೋಲ್ಲ. ಸೋಮು ಹೆಂಡತಿ ಜೊತೆ ಮಾತು ಬಿಟ್ಟಿದ್ದರೂ ಅವಳು ಮಾಡಿದ ಕಾಫಿ, ತಿಂಡಿ, ಊಟ ಎಲ್ಲವನ್ನು ಮಾಡುತ್ತಾನೆ. ಹಾಗೆಯೇ ಸೋಮಿ ಗಂಡನ ಮೇಲೆ ಮಾತು ಬಿಟ್ಟಿದ್ದರೂ ಅವನ ಬಟ್ಟೆಗಳನ್ನು ಒಪ್ಪ ಓರಣ ಮಾಡುವುದು, ಅವನು ತಂದ ತರಕಾರಿಗಳನ್ನು ತೆಗೆದಿಟ್ಟುಕೊಳ್ಳುವುದು, ರಾತ್ರಿ ಸೇಬು ಹಣ್ಣು ಹೆಚ್ಚಿ ಕೊಡುವುದು ಮಾಡುತ್ತಾಳೆ. ಸಂಸಾರ ಚನ್ನಾಗೇ ನಡೆಯುತ್ತಿರುತ್ತದೆ. ಆದರೆ ಮಾತಿಲ್ಲ. ಇಂಥಾ ಸಂದರ್ಭದಲ್ಲಿ ಅಪ್ಪಿ ತಪ್ಪಿ ನೆಂಟರು ಬಂದುಬಿಟ್ಟರೆ ಅವರ ಈ ಪಂದ್ಯ ನಿಂತೇಹೋಗುತ್ತದೆ.

ಈ ಮಾತು ಬಿಡುವ ಸಂಗತಿ ಸೋಮುಗೆ ಅವನ ವಂಶಪಾರಂಪರ್ಯವಾಗಿ ಬಂದಿದೆ. ಸೋಮಿ ಮನೆ ಕಡೆಯೂ ಮಾತು ಬಿಡುವವರಿದ್ದರು. ಸೋಮು ಅಜ್ಜ ಅಜ್ಜಿ, ಅಪ್ಪ ಅಮ್ಮ ಚಿಕ್ಕಪ್ಪ ಚಿಕ್ಕಮ್ಮ ಅಪ್ಪ ಚಿಕ್ಕಪ್ಪ ಹೀಗೆ ಅವರವರು ಮಾತು ಬಿಡುತ್ತಿದ್ದರು. ಮಾತು ಬಿಟ್ಟ ಸಂದರ್ಭದಲ್ಲಿ ಚಿಕ್ಕಪ್ಪ ಮನೆಗೆ ಬಂದರೂ ಅಪ್ಪ ಮಾತಾಡಿಸುತ್ತಿರಲಿಲ್ಲ. ಅಮ್ಮನೇ ಚಿಕ್ಕಪ್ಪನನ್ನು ವಿಚಾರಿಸಿಕೊಳ್ಳುತ್ತಿದ್ದರು. ಅಣ್ಣ ನನ್ನ ಜೊತೆ ಮಾತು ಬಿಟ್ಟಿರುವಾಗ ನಾನೇಕೆ ಅವನ ಮನೆಗೆ ಹೋಗಬೇಕು ಅಂತ ಚಿಕ್ಕಪ್ಪ ಬರದೇ ಇರುತ್ತಿರಲಿಲ್ಲ. ವಾಪಸ್ ಊರಿಗೆ ಹೊರಟಾಗ ಅಪ್ಪ ವರಾಂಡಲ್ಲೇ ಕೂತಿದ್ದರೂ ಚಿಕ್ಕಪ್ಪ ಅಡಿಗೆ ಮನೆ ಕಡೆ ನೋಡಿ ಅತ್ತಿಗೇ ನಾನು ಹೋಗಿಬರ್ತೀನಿ ಅಂತ ಹೇಳುತ್ತಿದ್ದರು. ಆಗ ಅಪ್ಪ ಅಡಿಗೆ ಮನೆ ಕಡೆ ನೋಡಿ ಲೇ, ಅವನಿಗೆ ಹುಷಾರಾಗಿ ಹೋಗಿ ಬಾ ಅಂತ ಹೇಳೇ ಎನ್ನುತ್ತಿದ್ದರು. ಇಂಥಾ ಹತ್ತು ಹಲವಾರು ಸನ್ನಿವೇಶಗಳನ್ನು ಕಣ್ಣಾರೆ ಕಂಡಿರುವ ಸೋಮುಗೆ ಮಾತು ಬಿಡುವುದು ಅಭ್ಯಾಸವಾಗಿ ಹೋಗಿದೆ. ಸುಮಾರು ಇಂಥಾ ಅನುಭವಗಳೇ ಸೋಮಿಗೂ ಆಗಿದೆ. ಮದುವೆಯಾಗಿ ಬಂದ ಮೊದಲ ದಿನಗಳಲ್ಲಿ ಸೋಮಿ ಗಂಡನೊಂದಿಗೆ ಮಾತಾಡುತ್ತಾ ಈ ವಿಚಾರಗಳನ್ನು ಹೇಳಿದಾಗ ಸೋಮು ನಕ್ಕು ನನಗೆ ನಿನ್ನ ಮೇಲೆ ಬೇಜಾರಾದರೆ ಮಾತು ಬಿಡಬಹುದು ಎಂದಿದ್ದ.

ಈ ಮಾತು ಬಿಡುವ ವಿಚಾರದಲ್ಲಿ ಒಂದು ವಿಚಿತ್ರ ಎಂದರೆ ನಾನು ಯಾಕೆ ನಿನ್ನೊಂದಿಗೆ ಮಾತು ಬಿಡುತ್ತಿದ್ದೇನೆ ಎನ್ನುವುದನ್ನು ಹೇಳುವುದಿಲ್ಲ. ಅವರೇ ತಿಳಿದುಕೊಳ್ಳಬೇಕು ಎನ್ನುವುದು ಅವರ ಇಷ್ಟ. ಉದಾಹರಣೆಗೆ ಸೋಮು ಇದ್ದಕ್ಕಿದ್ದಂತೆ ಹೆಂಡತಿಯೊಂದಿಗೆ ಮಾತು ಬಿಟ್ಟ ಎಂದರೆ ಸೋಮು ನಾನು ನಿನ್ನ ಈ ನಡವಳಿಕೆಗೆ

ನಿನ್ನೊಂದಿಗೆ ಮಾತು ಬಿಟ್ಟಿದ್ದೇನೆ ಎಂದು ಹೇಳುತ್ತಿರಲಿಲ್ಲ. ಅಂಥಾ ಸಂದರ್ಭಗಳಲ್ಲಿ ಸೋಮಿ ಇವರು ನನ್ನೊಂದಿಗೆ ಯಾಕೆ ಮಾತುಬಿಟ್ಟರು ಎಂದು ತಲೆಕೆರೆದುಕೊಂಡು ಉತ್ತರ ಹೊಳೆಯದೇ ಮಾತು ಬಿಟ್ಟೋರು ಅವರು, ಅವರೇ ಷುರು ಮಾಡಲಿ ಎಂದು ಸುಮ್ಮನಾಗುತ್ತಿದ್ದಳು. ಸೋಮುಗೂ ಹೀಗೇ ಆಗ್ತಿತ್ತು. ನಮ್ಮ ಸಿನಿಮಾಗಳಲ್ಲಿ ಒಬ್ಬರು ಇನ್ನೊಬ್ಬರಿಗೆ ಹೊಡೆಯೋಕೆ ಹೋದಾಗ ಅಪ್ಪಾ ಯಾಕೆ ಹೊಡೀತ ಇದೀಯ ಅಂತ ಹೇಳಿ ಹೊಡಿ ಎನ್ನುತ್ತಾರೆ. ಆದರೆ ಮಾತು ಬಿಡುವ ವಿಚಾರದಲ್ಲಿ ಹೀಗೆ ಹೇಳಿ ಮಾತು ಬಿಡುವ ವಿಚಾರವೇ ಇಲ್ಲ. ಸೋಮು ಚಿಕ್ಕವನಾಗಿದ್ದಾಗ ನಿಮ್ಮಪ್ಪ ನನ್ನ ಜೊತೆ ಮಾತು ಬಿಟ್ಟಿದ್ದಾರೆ ಯಾಕೆ ಬಿಟ್ಟಿದ್ದಾರೆ ಅಂತ ಆ ಭಗವಂತನಿಗೇ ಗೊತ್ತು ಅನ್ನುತ್ತಿದ್ದಳು. ಸೋಮು ಅಪ್ಪ ವಿಚಿತ್ರ ಅಂತೆ. ಸಾರಿಗೆ ಉಪ್ಪು ಜಾಸ್ತಿಯಾಗಿದ್ರು ಮಾತು ಬಿಡ್ತಿದ್ರಂತೆ, ಪೇಟೆಗೆ ಹೋಗಬೇಕು ಬೇಗ ರೆಡಿಯಾಗು ಎಂದರು ಬೇಗ ರೆಡಿಯಾಗದಿದ್ದರೆ ಮಾತು ಬಿಡ್ತಿದ್ರಂತೆ. ಟೈಮ್ ನೋಡಿ ಒಂಭತ್ತು ಗಂಟೆಯಾಯಿತು ತಟ್ಟೆ ಹಾಕು ಎನ್ನುತ್ತಿದ್ದರು. ತಟ್ಟೆ ಹಾಕೋದು ತಡವಾದರೂ ಮಾತು ಬಿಡ್ತಿದ್ರಂತೆ. ಇಂಥವುಗಳೆಲ್ಲಾ ಒಂದೆರಡು ವಾರ ಇದ್ದು ಮತ್ತೆ ಸರಿಹೋಗೋದು.

ಒಂದು ಸಾರಿ ಸೋಮು ಅಪ್ಪ ಹೆಂಡತಿಯೊಂದಿಗೆ ಮಾತು ಬಿಟ್ಟು ಹದಿನೈದು ದಿನ ಆಗಿತ್ತು. ಮತ್ತೆ ಮಾತು ಮುಂದುವರಿಸುವ ಯಾವ ಸೂಚನೆಯೂ ಕಾಣುತ್ತಿರಲಿಲ್ಲ. ಇಬ್ಬರೂ ಗಟ್ಟಿಯಾಗಿದ್ದರು. ಅಂಥಾ ದಿನಗಳಲ್ಲಿ ಸೋಮು ಅಪ್ಪ ಸ್ನಾನಕ್ಕೆ ಹೋಗಿದ್ದರಂತೆ. ಆಗ ಅವರು ಸ್ನಾನದ ಮನೆಯಿಂದಲೇ ಯಾರಾದ್ರೂ ಸೋಪು ತಂದುಕೊಡಿ ಅಂತ ಕೂಗಿದರಂತೆ. ಆಗ ಸೋಮು, ಅವನ ತಮ್ಮ ತಂಗಿ ಎಲ್ಲಾ ಶಾಲೆಗೆ ಹೋಗಿದ್ದರಂತೆ ಇದ್ದಿದ್ದು ಇಬ್ಬರೇ. ಇನ್ಯಾರು ಸೋಪು ತಂದುಕೊಡಬೇಕು. ಆಗ ಸೋಮು ಅಮ್ಮನೇ ಸೋಪು ತಗೊಂಡು ಹೋಗಿ ಕೊಡೋಕೆ ಬಚ್ಚಲು ಮನೆಗೆ ಹೋದಾಗ ಸೋಮು ಅಪ್ಪ ಬರೋಳು ಬಂದಿದೀಯ ಒಂದಿಷ್ಟು ಬೆನ್ನು ತಿಕ್ಕಿ ಹೋಗು ಅಂದ್ರಂತೆ. ಬೆನ್ನು ತಿಕ್ಕುವ ನೆಪದಲ್ಲಿ ಮತ್ತೆ ಮಾತು ಮುಂದುವರಿಯಿತಂತೆ.

ಸೋಮು ಸಂಸಾರ ಷುರು ಮಾಡಿದ ಮೇಲೆ ಈ ಸಂಗತಿಗಳೆಲ್ಲಾ ಅವನಿಗೆ ಪದೇ ಪದೇ ನೆನಪಿಗೆ ಬರುತ್ತಿದ್ದವು. ಸೋಮು ಹೆಂಡತಿಯೊಂದಿಗೆ ಮಾತು ಬಿಟ್ಟಿರುವುದು ಅಬ್ಬಬ್ಬಾ ಎಂದರೆ ಹದಿನೈದು ದಿನಗಳು. ವಿಚಿತ್ರ ಎಂದರೆ ಅಷ್ಟು ದಿನ ಮಾತು ಬಿಟ್ಟಿದ್ದಕ್ಕೆ ಯಾರಿಗೂ ಬೇಜಾರು ಇರುವುದಿಲ್ಲ. ಮತ್ತೆ ಮಾತು ಷುರು ಮಾಡಿದೆವಲ್ಲಾ ಎನ್ನೋದೇ ಸಮಾಧಾನ. ವಿಚಯ ಏನೂಂತ ಮೊದಲೇ ಮಾತಾಡಿಬಿಟ್ಟರೆ ಮಾತು ಬಿಡುವ ಪ್ರಸಂಗವೇ ಬರೋದಿಲ್ಲ. ಆದರೆ ಅವರ ಸಂಸಾರಕ್ಕೆ ಹೊಸ ಹುರುಪು ತರುವಂತೆ ಈ ಮಾತು ಬಿಡುವ ಪ್ರಕ್ರಿಯೆ ನಡೆಯುತ್ತಲೇ ಇದೆ.

ಮಾತು ಬಿಡುವುದು ಸಿಲ್ಲಿ ಇರಬಹುದು. ಆದರೆ ಮಾತು ಬಿಟ್ಟವರಿಗೆ ಅದು ಪ್ರತಿಷ್ಠೆ. ನಾನು ಅವಳೊಂದಿಗೆ ಯಾಕೆ ಮಾತು ಬಿಟ್ಟಿದ್ದೀನಿ ಎಂದು ಅವಳೇ ಪತ್ತೆ ಮಾಡಲಿ ಎಂದು ಸೋಮು ಇರಾದೆ. ಆದರೆ ಅಹಂಕಾರಕ್ಕೆ ಉದಾಸೀನವೇ ಮದ್ದು ಎನ್ನುವುದು ಸೋಮಿ ರೀತಿ. ಅದಕ್ಕೇ ಆಗಾಗ ಸೋಮು ಮನೆಯಲ್ಲಿ ನೀರವ ಮೌನ ಇರುತ್ತದೆ. ಈಗ ಸೋಮು ಹೆಂಡತಿಯೊಂದಿಗೆ ಮಾತು ಬಿಟ್ಟು ಹದಿನೈದು ದಿನಗಳಾಗಿವೆ. ಎಲ್ಲವೂ ಮೌನದಲ್ಲೇ ನಡೆದುಹೋಗುತ್ತಿದೆ. ಗಂಡ ಹೆಂಡತಿ ಜಗಳ ಉಂಡು ಮಲಗುವ ತನಕ ಎನ್ನುವಂತಿಲ್ಲ. ಇಬ್ಬರೂ ಒಂದೇ ಹಾಸಿಗೆಯಲ್ಲಿ

ಮಲಗಿದರೂ ಒಬ್ಬರು ಇನ್ನೊಬ್ಬರನ್ನು ಮುಟ್ಟುವ ಸಾಹಸ ಮಾಡಲ್ಲ.

ಸೋಮು ಈಗ ಯಾಕೆ ಮಾತು ಬಿಟ್ಟಿದ್ದಾನೆ ಎನ್ನುವುದು ಅವನಿಗೆ ಗೊತ್ತಿದೆ. ಆದರೆ ಅವನು ನೀನು ಯಾಕೆ ಹಾಗೆ ಮಾಡಿದೆ ಅಂತ ಹೆಂಡತಿಯನ್ನು ಕೇಳಿ ಪರಿಸ್ಥಿತಿ ಅರ್ಥ ಮಾಡಿಕೊಳ್ಳಬಹುದಿತ್ತು. ಗಂಡ ಮಾತು ಬಿಟ್ಟಿರುವುದು ಇದಕ್ಕೇ ಅಂತ ಸೋಮಿ ಅವನಿಗೆ ಸರಿಯಾದ ವಿಚಾರ ತಿಳಿಸಬಹುದಿತ್ತು. ಆದರೆ ಇಬ್ಬರೂ ಈ ಪ್ರಯತ್ನ ಮಾಡಲಿಲ್ಲ. ಅವತ್ತು ಸೋಮು ಆಫೀಸಿನಲ್ಲಿ ಇರುವಾಗ ಅವನ ತಂದೆ ಫೋನ್ ಮಾಡಿ ಸೋಮು ನಿನ್ನಿಂದ ನನಗೆ ಬಹಳ ಉಪಕಾರವಾಯಿತಯ್ಯ ಅಂದಿದ್ದರು. ಏನು ನಾನೇನು ಮಾಡಿದೆ ಅಂತ ಕೇಳಿದರೆ ಅವತ್ತು ನಾನು ನಿನಗೆ ಫೋನ್ ಮಾಡಿದೆ ನೀನು ಮೀಟಿಂಗಲ್ಲಿ ಇದ್ದೆಯಂತೆ. ನನಗೆ ಅರ್ಜಂಟಾಗಿ ಐವತ್ತು ಸಾವಿರ ರೂಪಾಯಿ ಬೇಕಿತ್ತು. ಸೋಮಿಗೆ ಫೋನ್ ಮಾಡಿದೆ ಅವಳು ಕೂಡಲೇ ಡಿಡಿ ಕಳಿಸಿದಳು. ನನಗೆ ಉಪಕಾರವಾಯಿತು. ಮುಂದಿನ ವಾರ ನಿನಗೆ ಹಣ ಹಿಂದಿರುಗಿಸುತ್ತೇನೆ ಅಂದರು. ಸೋಮು ಅಪ್ಪಾ ಮಗನ ನಡುವೆ ಈ ಹಣದ ವ್ಯವಹಾರ ಯಾಕಪ್ಪಾ. ನೀವೇನು ನನಗೆ ಹಣ ಹಿಂದಿರುಗಿಸೋದು ಬೇಡ ಎಂದಿದ್ದ. ಮನೆಯಲ್ಲಿ ಇಟ್ಟಿದ್ದ ಐವತ್ತು ಸಾವಿರ ರೂಪಾಯಿ ಎಲ್ಲಿ ಹೋಯಿತು ಎನ್ನುವುದಕ್ಕೆ ಈಗ ಉತ್ತರ ಸಿಕ್ಕಿತು. ಸೋಮು ಆ ಹಣವನ್ನು ಸೋಮಿ ತನ್ನ ತವರು ಮನೆಗೆ ಕಳಿಸಿದ್ದಾಳೆ ಅಂತ ಅವಳ ಮೇಲೆ ಕೋಪಗೊಂಡು ಮಾತು ಬಿಟ್ಟಿದ್ದ. ಈಗ ಪರಿಸ್ಥಿತಿ ಸರಿಹೋಯಿತು.

ಸೋಮು ಮನೆಗೆ ಹೋದಾಗ ಕಾಫಿ ತಂದುಕೊಟ್ಟ ಸೋಮಿಗೆ ನಾನು ಇವಳೊಂದಿಗೆ ಮಾತು ಬಿಟ್ಟಿದ್ದೇನೆ ಎನ್ನುವುದನ್ನೇ ಮರೆತವನಂತೆ ಅಪ್ಪ ಫೋನ್ ಮಾಡಿದ್ರು ನೀನು ಅವರಿಗೆ ಐವತ್ತು ಸಾವಿರ ರೂಪಾಯಿ ಡಿಡಿ ಕಳಿಸಿದೆಯಂತೆ ಅಂದ. ಸೋಮಿಯೂ ಅಷ್ಟೇ ಸಹಜವಾಗಿ ಹೌದು ತುಂಬಾ ಅರ್ಜಂಟು ಇವತ್ತೇ ಕಳಿಸಬೇಕು ಅಂದರು. ಅದಕ್ಕೇ ಕಳಿಸಿದೆ ಅಂದಳು. ಹೋಗಲಿ ಬಿಡು ಒಳ್ಳೆಯ ಕೆಲಸವೇ ಮಾಡಿದೆ ಎಂದು ಸೋಮು ಹೆಂಡತಿಯ ಮುಖ ನೋಡಿ ನಕ್ಕ. ಸೋಮಿಯೂ ನಕ್ಕಳು. ಇಷ್ಟು ದಿವಸ ನಾವಿಬ್ಬರೂ ಮಾತು ಬಿಟ್ಟಿದ್ದೆವು ಎನ್ನುವುದೇ ಅವರಿಗೆ ಮರೆತಂತೆ ಮತ್ತೆ ಎಂದಿನಂತೆ ಮಾತಾಡಲು ಷುರು ಮಾಡಿದರು. ಒಬ್ಬರಿಗೆ ಇನ್ನೊಬ್ಬರ ಮೇಲೆ ಬೇಸರವೂ ಇರಲಿಲ್ಲ ಕೋಪವೂ ಇರಲಿಲ್ಲ. ಅವತ್ತು ರಾತ್ರಿ ಸೋಮು ಸೋಮಿ ಭುಜ ಬಳಸಿ ಇನ್ನು ಮೇಲೆ ನಾವು ಹೀಗೆ ಮಾತು ಬಿಡುವುದು ಬೇಡ. ಎಲ್ಲ ಮುಕ್ತವಾಗಿ ಮಾತಾಡೋಣ. ಮನಸಿಗೆ ಬೇಜಾರಾಗಿದ್ದರೆ ಅದನ್ನು ಮಾತಾಡಿಬಿಡೋಣ. ಈ ಮುಸುಕಿನೊಳಗಣ ಗುದ್ದಾಟ ಯಾಕೆ ಎಂದ. ಅದಕ್ಕೆ ಸೋಮಿ ಇಲ್ಲಾ ನಾನು ಮಾತು ಬಿಡುವ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತೇನೆ ಎಂದಳು. ಯಾಕೆ ಅಂತ ಸೋಮು ಕೇಳಿದ್ದಕ್ಕೆ ಹದಿನೈದು ದಿನ ಮಾತು ಬಿಟ್ಟಿದ್ದೆವು ಎಂದರೆ ಹದಿನಾರನೇ ದಿನ ಬಹಳ ಮಜವಾಗಿರುತ್ತೆ ಅಂದು ಸೋಮುನ ಬಲವಾಗಿ ತಬ್ಬಿದಳು. ಸೋಮು ಖುಷಿಯಾಗಿ ಬಹುಶ: ನಮ್ಮ ಹಿರಿಯರೂ ಇದೇ ಕಾರಣಕ್ಕೆ ಮಾತು ಬಿಡುತ್ತಿದ್ದರೋ ಏನೋ. ಇದು ಸುಖೀ ಸಂಸಾರದ ಒಂದು ಭಾಗವಾಗಿರಬಹುದು. ಹಾಗಿದ್ದರೆ ನಾನೂ ಸೋಮಿಯೊಂದಿಗೆ ಆಗಾಗ ಮಾತು ಬಿಡುವುದನ್ನು ಮುಂದುವರಿಸಿಕೊಂಡು ಹೋಗುತ್ತೇನೆ ಅಂದುಕೊಂಡ.

■

# ಕಾಂಕ್ರೀಟ್ ಕಾಡಿನಲ್ಲಿ ಮಾನವ ಹೃದಯಗಳು !

**। ಎಂ. ಎಸ್. ರಘುನಂದನ**

ಮೊನ್ನೆ ಸುಮಾರು ಹತ್ತು ದಿನಗಳನ್ನು ನನ್ನ ಹುಟ್ಟೂರು ಬೆಂಗಳೂರಿನಲ್ಲಿ ಕಳೆದೆ. ನಾನು ಹುಟ್ಟಿದ ಮತ್ತು ನನ್ನ ಜೀವಿತದ ಮೊದಲ ಮೂವತ್ತು ದಶಕಗಳನ್ನು ಕಳೆದ ನಗರ ಈಗ ಕೆಲವು ವರುಷಗಳಿಂದ ನನಗೆ ಅಪರಿಚಿತವೆನಿಸುತ್ತದೆ. ಅಲ್ಲಿಯ ಸ್ಥಳಾಕೃತಿಯಲ್ಲಿ ಆಗಿರುವ ಬದಲಾವಣೆಗಳು, ರಸ್ತೆ, ಕಟ್ಟಡಗಳು, ಜೀವನ, ರೀತಿ ನೀತಿಗಳು, ಹೊಸದೆನಿಸುತ್ತದೆ.

ಇಂಚಿಂಚನ್ನು ಆವರಿಸಿಕೊಂಡಿರುವ ಕಟ್ಟಡಗಳು, ಉಳಿದ ಸ್ಥಳವನ್ನೆಲ್ಲಾ ತುಂಬಿಕೊಂಡಿರುವ ವಾಹನಗಳು, ರಭಸದ ಸಂಚಾರ, ಅಷ್ಟೇ ರಭಸದ ಜೀವನ, ಅಕ್ಕಪಕ್ಕದವರ ಪರಿಚಯವಿಲ್ಲದ, ಯಾರದೂ ಎಗ್ಗಿಲ್ಲದ ಜೀವನ ಶೈಲಿ ಬೇಸರ ತರುತ್ತದೆ. ವರುಷದಲ್ಲಿ ಎರಡು ಮೂರುಬಾರಿಯಾದರೂ ಬೆಂಗಳೂರಿನ ದರ್ಶನವಾಗುತ್ತಾದರೂ ಆ ಕಾಂಕ್ರೀಟು ಕಾಡಿನ ವಿಹಂಗಮ ದೃಶ್ಯ ಕಂಡಿರಲಿಲ್ಲ.

ಮೊನ್ನೆ ನನ್ನ ಸಂಭಂದಿಕರೊಬ್ಬರು ವಾಸವಿರುವ ಕಟ್ಟಡದ ಇಪ್ಪತ್ತೈದನೆಯ ಮಜಲಿನಿಂದ ಕಂಡ ಬೆಂಗಳೂರಿನ ದೃಶ್ಯ ಖೇದಕರವಾಗಿತ್ತು. ಆದರೂ ಈ ಯಾಂತ್ರಿಕ ಜೀವನದ ಗಡಿಬಿಡಿಯ ಮಧ್ಯದಲ್ಲಿಯೇ ಸಂಭವಿಸಿದ ಕೆಲವು ಘಟನೆಗಳು, ಅಪರಿಚಿತರೊಡನೆಯ ಸಂವಹನ, ಸಂಭಾಷಣೆಗಳು ಕಾಂಕ್ರೀಟು ಕಾಡಿನ ಅಂತರಾಳದೊಳಗೆ  ಇನ್ನೂ ಬಡಿದುಕೊಳ್ಳುತ್ತಿರುವ ಮಾನವ ಹೃದಯವನ್ನು, ನಗರವಾಸಿಗಳ ಪರಸ್ಪರ ಹೃದಯ ಸಂಬಂಧವನ್ನು ತೋರಿಸಿದವು.

ಮೇಲೆ ಹೇಳಿದ ಸಂಬಂಧಿಕರ ಮನೆಗೆ ಮುಂಜಾನೆ ಒಂಭತ್ತರ ಹೊತ್ತಿಗೆ ತಲುಪುವುದೆಂದು ನಿರ್ಧಾರವಾಗಿತ್ತು. ಅಂತೆಯೇ ನಾನು ನನ್ನ ಪತ್ನಿಯೊಡನೆ ಸುಮಾರು ಎಂಟೂವರೆಗೆ ಮನೆಯಿಂದ ಹೊರಬಿದ್ದೆ. ಆಟೋರಿಕ್ಷಾ ಹಿಡಿಯಲು ಆಚೀಚೆ ನೋಡುತ್ತಾ ಕೊಂಚದೂರ ನಡೆದಿದ್ದಾಗ ನನ್ನ ಪತ್ನಿಯ ಲಕ್ಷ್ಯ ನಾನು ಧರಿಸಿದ್ದ ಅಂಗಿಯ ಮೇಲೆ ಬಿತ್ತು. "ಇದೇನು ಬಟ್ಟೆ ಹಾಕಿಕೊಂಡಿದೀರಿ? ಮಾಸಲಾಗಿಹೋಗಿದೆ. ಇಷ್ಟೊಂದು ಸುಕ್ಕು. ಜತೆಗೆ ಮಸಿ ಕಲೆಗಳು ಬೇರೆ. ರಾತ್ರಿ ಇದನ್ನು ಹಾಕಿಕೊಂಡೇ ಮಲಗಿದ್ದಿರೇನೋ. ಸರಿಯಾದ ಬಟ್ಟೆ ಹಾಕಿಕೊಳ್ಳಬಾರದೇ? ಬಂದಲ್ಲಿ ಹೋದಲ್ಲಿ ಮಾನ ತೆಗೆಯುತ್ತೀರಿ" ಆಕೆಯ ಮಾತಿನ ಪ್ರವಾಹ ಇನ್ನೂ ಮುಂದುವರೆಯುತ್ತಿತ್ತೇನೋ? ನಮ್ಮ ಹಿಂದಿನಿಂದ ಬಂದ ಒಂದು ಧ್ವನಿ ಆ ಪ್ರವಾಹಕ್ಕೆ ತಡೆಹಾಕಿತು  "ಬಿಡೀಮ್ಮಾ, ಯಾಕೆ ಬೇಜಾರು ಮಾಡ್ಕೋತೀರಿ? ಗಂಡಸರಿಗೇನು? ಏನು ಹಾಕ್ಕೊಂಡಿದ್ರೂ ನಡೆಯತ್ತೆ. ಈ ಬಟ್ಟೆ ಬರೆ ಒಡವೆ ಅಲಂಕಾರ ಎಲ್ಲಾ ನಮಗೇ ಅಲ್ವ ಬಂದಿರೋದು?"  ಹಿಂದೆ ತಿರುಗಿದೆವು. ನಮ್ಮ ಹಿಂದೆ ನಡೆದು ಬರುತ್ತಿದ್ದ ಯಾರೋ ಒಬ್ಬ ಮನೆಕೆಲಸದಾಕೆ ನಮ್ಮ ಮಾತು ಕೇಳಿಸಿಕೊಂಡು, ನಮ್ಮ ಸಂಭಾಷಣೆಯಲ್ಲಿ ಪಾಲ್ಗೊಂಡು, ನನ್ನ ಪರ ವಹಿಸಿ ನನ್ನಾಕೆಯ ಬಾಯಿ ಮುಚ್ಚಿಸಿದ್ದಳು!

ಒಂದು ಸಂಜೆ ಹಾಗೆಯೇ ನಡೆದಾಡಿಕೊಂಡು ಬರಲೆಂದು ಹೊರಟು ಮನೆಯಿಂದ ದೂರಬಂದಿದ್ದೆ. ಕತ್ತಲಾಗುತ್ತಿತ್ತು. ಮೋಡ ಕಟ್ಟಿಕೊಂಡು ಮಳೆಬರುವಂತೆ ಕಂಡಿತು. ಕೊಂಚ ಬೇಗ ಮನೆ ತಲುಪಿದರೆ ವಾಸಿ ಎನಿಸಿ, ರಸ್ತೆಯಲ್ಲಿ ಕಂಡ

ಆಟೋರಿಕ್ಷಾ ನಿಲ್ಲಿಸಿ ಹತ್ತಿದೆ. ಎಲ್ಲಿಗೆ ಹೋಗಬೇಕೆಂದು ಕೇಳಿ, ಮೀಟರ ಚಾಲೂ ಮಾಡಿದ ಆಟೋ ಚಾಲಕ, ನನ್ನ ಚಡ್ಡಿ ಟೀ ಷರಟು, ಬೂಟು ಕಂಡು "ವಾಕಿಂಗ್ ಹೊರಟಿದ್ರಾ ಸಾರ" ಎಂದ. "ಹೌದು ಸ್ವಾಮೀ". "ಮತ್ತೆ ಗಾಡಿ ಹತ್ತುಬಿಟ್ರೀ?" "ಏನೋ ಕೊಂಚ ಅರ್ಜೆಂಟು ಕೆಲಸ ನೆನಪಾಯ್ತು ನೋಡಿ, ಬೇಗ ಮನೇಗೆ ಹೋಗಬೇಕಾಯ್ತು." "ಸರಿ ಬಿಡಿ. ದಿನಾ ವಾಕಿಂಗ್ ಮಾಡ್ತೀರಾ ಸಾರ?" "ಹೌದು ಸ್ವಾಮೀ". "ಅದಕ್ಕೇ ನೋಡಿ, ಫಿಟ್ಟಾಗಿದೀರಾ". "ಏನೋ ಸ್ವಾಮೀ ದೇವರ ದಯೆ. ಇದುವರೆಗೂ ಚೆನ್ನಾಗಿದೀನಿ." "ಹಂಗೇ ಇರ್ಬೇಕು ಬಿಡಿ. ಒಳ್ಳೇದು. ನಿಮ್ಮಂತೋರನ್ನ ನೋಡ್ದ್ರೆ ನಮಗೂ ವಾಕಿಂಗು ಗೀಕಿಂಗು ಮಾಡ್ಬೇಕು ಅನ್ನಿಸ್ತದೆ. ಆದ್ರೆ ನೋಡಿ, ಆಗೋದೇ ಇಲ್ಲ. ಒಳ್ಳೇದೆಲ್ಲಾ ಹಂಗೇ ಸ್ವಾಮೀ. ಶುರುಮಾಡೋದು ಬಾಳ ಕಷ್ಟ. ಅದೇ ಕೆಟ್ಟದ್ದೇನಾದ್ರೂ ಮನಸ್ಗೆ ಬರ್ಲಿ ನೋಡಿ, ತಕ್ಷಣ ಸುರು ಆಗೋಗತ್ತೈತೆ" ಹೀಗೆ ಪ್ರಾರಂಭವಾದ ಮಾತುಕತೆಯು ಉಭಯ ಕುಶಲೋಪರಿ, ನೌಕರಿ, ಸಂಸಾರ, ಮಕ್ಕಳು ಮರಿಗಳ ವಿದ್ಯಾಭ್ಯಾಸ, ಮದುವೆ ಮುಂತಾದ ಹಾದಿಗಳಲ್ಲಿ ಹರಿದಾಡುವ ಹೊತ್ತಿಗೆ ನಾನು ಇಳಿಯುವ ಸ್ಥಳ ಬಂತು. "ನಾನು ಸುಮ್ನೆ ಇರಲ್ಲ ನೋಡಿ, ಎಲ್ರನ್ನೂ ಮಾತಾಡಿಸ್ ಬಿಡ್ತೀನಿ. ಕೆಲವ್ರು ಮಾತಾಡ್ತಾರೆ. ಕೆಲವ್ರು ಬೇಜಾರಾಗ್ತಾರೆ. ನಿಮ್ಮಂತೋರು ಸಿಕ್ಕಿದ್ರೆ ಮನಸ್ಗೆ ಏನೋ ಸಂತೋಷ. ನಮಸ್ಕಾರ, ಬರ್ತೀನಿ" ಎಂದು ಆಟೋ ಚಾಲಕ ಬೀಳ್ಕೊಂಡ. ಆತನೊಡನೆ ನಡೆಸಿದ ಸಂಭಾಷಣೆ ನನಗೂ ಮನಸ್ಸಿಗೆ ಹಿತವೆನ್ನಿಸಿತು.

ಬೇಕರೀಗೆ ತಿಂಡಿ ತೊಗೊಳೋಕೆ ಹೋಗಿದ್ದೆ. ಎರಡು ಖಾರ ಬನ್ನು, ಒಂದು ಪ್ಯಾಕೆಟ್ ಖಾರಸೇವು ಕೊಂಡೆ. ಬೇಕರಿಯ ಅಯ್ಯಂಗಾರಿ ಹಬ್ಬಕ್ಕಾಗಿ ಸಿಹಿಬೂಂದಿ ಮಾಡಿ ಇಟ್ಟಿದ್ದ.

"ಸ್ವೀಟ್ ಬೇಡ್ವಾ ಸಾರ? ಹಬ್ಬಕ್ಕೆ ಬರೀ ಖಾರ ತೊಗೊಂಡಿದ್ದೀರಿ".

"ಬೇಡಾ ಸ್ವಾಮೀ ಇಷ್ಟು ಸಾಕು"

"ಹಂಗಂದ್ರೆ ಹೆಂಗೆ ಸಾರ್ ? ಬೂಂದಿ ಏನ್ ದಿನಾ ಮಾಡ್ತೀವಾ? ಹಬ್ಬಕ್ಕೆ ಅಂತ ಮಾಡಿದ್ದು. ಫ್ರೆಶ್ ಆಗಿದೆ. ತೊಗೋಳಿ ಕಾಲ್ ಕೆಜಿ"

"ಬೇಡಾ ಸ್ವಾಮೀ. ಈಚೆಗೆ ಹುಡುಗರು ಸಿಹಿ ತಿನ್ನೋದೇ ಇಲ್ಲ."

ನಮ್ಮ ಮಾತುಕತೆ ಕೇಳುತ್ತಿದ್ದ ಮತ್ತೊಬ್ಬ ಗಿರಾಕಿ ಮಧ್ಯೆ ಬಾಯಿ ಹಾಕಿದರು

"ಅವರಿಗೇನು ಬೇಕೋ ಅದನ್ನ ಕೊಡ್ರೀ. ನೀವು ಯಾವಾಗ್ಲೂ ಬಂದೋರಿಗೆ ನಾಮ ಹಾಕಿ ನಿಮ್ಮ ವ್ಯಾಪಾರ ಗಿಟ್ಟಿಸ್ಕೊಳ್ಳೋಕೆ ನೋಡ್ತಿರ್ತೀರ"

"ಅಷ್ಟೇ ಅಲ್ವಾ ಸ್ವಾಮೀ ವ್ಯವಹಾರ ? ಎಲ್ರೂ ಒಬ್ಬರಿಗೊಬ್ಬರು ನಾಮ ಹಾಕಕ್ಕೇ ನೋಡ್ತಿರ್ತಾರೆ. ನನಗೆ ನಾಮ ಹಾಕೋರೂ ಇರ್ತಾರೆ. ಅದಕ್ಕೇ ನೋಡಿ, ಬೇರೆಯವರಿಗೆ ಯಾಕೆ ಕೆಲಸ ಅಂತ ನನ್ನ ನಾಮ ನಾನೇ ಹಾಕಿಕೊಂಡು ಬಿಡ್ತೀನಿ" ಬೇಕರಿಯ ಅಯ್ಯಂಗಾರಿ ತನ್ನ ಹಣೆಯ ಮೇಲೆ ಢಾಳಾಗಿ ಕಾಣುತ್ತಿದ್ದ ನಾಮವನ್ನು ಬೊಟ್ಟು ಮಾಡಿ ತೋರಿಸಿದ !

ಮೊನ್ನೆ ಗೋವಾದ ಪಣಜಿಯಲ್ಲಿ ಒಂದು ಚಿತ್ರ ಪ್ರದರ್ಶನವನ್ನು ನೋಡುತ್ತಿದ್ದೆ. ಗೋವಾದ ಸಣ್ಣ ಹಳ್ಳಿಯೊಂದರಲ್ಲಿ ಅನೇಕ ದಶಕಗಳ ಕಾಲ ವಾಸವಾಗಿದ್ದು,

ಸಾವಿರದೊಂಭೈನೂರ ಎಂಭತ್ತರ ಸಮಯದಲ್ಲಿ ತನ್ನ ದೇಶಕ್ಕೆ ವಾಪಸಾದ ವಿದೇಶಿ ಕಲಾಕಾರನೊಬ್ಬನ ಚಿತ್ರಗಳ ಪ್ರದರ್ಶನ.

ತಾನು ವಾಪಸಾಗುವ ಮುನ್ನ ಆತ ಹೇಳಿದ ಮಾತು ಹೀಗೆ "ಇನ್ನು ಇಲ್ಲಿ ವಾಸಿಸಲು ಸಾಧ್ಯವಾಗದು. ಎಲ್ಲೆಡೆ ಅಭಿವೃದ್ಧಿ ಮತ್ತು ಹಣದ ತಾಂಡವ. ಹಳ್ಳಿಗರಿಗೆ ಪರಸ್ಪರ ಮಾತುಕತೆಯಾಡಲು, ಹರಟಲು, ಸಮಯವಿಲ್ಲ. ಅವರು ನಗುವುದನ್ನೂ ಮರೆತುಬಿಟ್ಟಿದ್ದಾರೆ ಎನಿಸುತ್ತದೆ". ನನ್ನ ಹುಟ್ಟೂರಿನ ಬಗ್ಗೆ ನನಗೆ ಅಂಥಹುದೇ ಅಭಿಪ್ರಾಯ ಮೂಡುತ್ತಿತ್ತು.

ಹಾಗಾಗಿಯೇ ಮೇಲೆ ಬರೆದ ಸಂಭಾಷಣೆಗಳ ಅನುಭವ ಮನಸ್ಸಿನ ಮೇಲೆ ತಂಗಾಳಿ ಬೀಸಿದಂತೆನಿಸಿತು! ■

---

## ಪ್ರೊ. ಪ್ರಭುಪ್ರಸಾದ್

ಅಭಿನಂದನಾ ಗ್ರಂಥ – ಪ್ರಶಾಂತ




ಪ್ರೊ. ಪ್ರಭುಪ್ರಸಾದ್ ಕನ್ನಡದ ಅಪ್ರತಿಮ ಹಾಸ್ಯ ಬರಹಗಾರ ನಾ. ಕಸ್ತೂರಿಯವರ ಸಮಕಾಲೀನರು, ಬಹುಮುಖ ಪ್ರತಿಭೆಯ ವಿದ್ವಾಂಸರು, ಸುಸಂಸ್ಕೃತರು, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಮಾನ ಪ್ರಭುತ್ವ ಉಳ್ಳವರು. ಜೊತೆಗೆ ಅವರು ಅಪರಂಜಿಯ ಅಭಿಮಾನಿಗಳು ಮತ್ತು ಅಪರಂಜಿಯ ಬರಹಗಾರರು. ಅವರಿಗೆ ತೊಂಭತ್ತು ತುಂಬಿದ ಸಂದರ್ಭದಲ್ಲಿ ಅವರ ಸ್ನೇಹಿತರು, ಹಿತೈಷಿಗಳು, ಆತ್ಮೀಯರು ಎಲ್ಲರೂ ಸೇರಿ ಅವರಿಗೆ ಲೇಖನಗಳ ಸರಮಾಲೆಯ ಮೂಲಕ ಅಭಿನಂದನೆ ಸಲ್ಲಿಸಿರುವ ಗ್ರಂಥ –ಪ್ರಶಾಂತ. ಜೀವನ ಸಾಧನೆ ಮತ್ತು ಸಮೀಕ್ಷೆ ಎಂಬ ಎರಡು ವಿಭಾಗಗಳಲ್ಲಿ ಸುಮಾರು 71 ಲೇಖನಗಳಲ್ಲಿ ಪ್ರೊ. ಪ್ರಭುಪ್ರಸಾದ್ ಅವರ ಜೀವನವೂ, ಸಾಧನೆಯೂ ಮತ್ತು ಸಾಹಿತ್ಯ ಸೇವೆಯೂ ಸೇರಿಕೊಂಡಿದೆ. ಪ್ರೊ. ಪ್ರಭುಪ್ರಸಾದ್ ಅವರ ಒಡನಾಡಿಗಳು ತಮ್ಮ ಗೆಳೆಯರೊಂದಿಗೆ ಕಳೆದ ದಿನಗಳ ಸವಿ ನೆನಪನ್ನು ಮೆಲುಕು ಹಾಕಿದ್ದಾರೆ. ಈ ಅಭಿನಂದನಾ ಗ್ರಂಥ ಓದುತ್ತಿದ್ದಂತೆ ಒಂದು ಅನನ್ಯ ಅನುಭವ ಓದುಗರದ್ದಾಗುತ್ತದೆ. ಈ ಗ್ರಂಥ ಹೊರಬರಲು ಕಾರಣರಾದವರಿಗೆಲ್ಲಾ ಅಪರಂಜಿಯ ಅಭಿನಂದನೆಗಳು ಮತ್ತು ಪ್ರೊ. ಪ್ರಭುಪ್ರಸಾದ್ ಅವರಿಗೆ ಶುಭ ಹಾರೈಕೆಗಳು.

# ಕೆಲವು ಚುಟುಕಗಳು

**– ಬೇಲೂರು ರಾಮಮೂರ್ತಿ**

ಮುಖ್ಯಮಂತ್ರಿಯ ಕುರ್ಚಿ ಆಸೆ ಹಲವರಿಗೆ
ಸಾಕು ಅದೊಂದೇ ರಾಜಕೀಯ worryಗೆ
ಜನಗಳ ಕಣ್ಣಿಗೆ ಮಾತ್ರ ಚಿತ್ತ ಅಭಿವೃದ್ಧಿಯತ್ತ
ಆದರೆ ಗಮನವೆಲ್ಲ ದೊಡ್ಡ ಕುರ್ಚಿಯತ್ತ

***

ಪ್ರತಿ ಬಾರಿ ಶಾಸಕರಾದವರೂ ಮಾಡುತ್ತಾರೆ
ಕುಟುಂಬದವರೊಂದಿಗೆ ವಿದೇಶ ಪ್ರವಾಸ
ಅದಕ್ಕೆ ಹೆಸರು ಮಾತ್ರ ಅಭಿವೃದ್ದಿ ಅಧ್ಯಯನ
ಆದರೆ ಆಗುವುದು ಮಾತ್ರ ಮೋಜಿನ ಯಾನ

***

ರಾಜಕೀಯ ಅಂದರೆ ಕಪ್ಪು ಹಣದ ಉಗ್ರಾಣ
ಬಿಡುವುದಿಲ್ಲ ಹಣ ಬೇಕಾದರೆ ಬಿಡುತ್ತಾರೆ ಪ್ರಾಣ
ಗೊತ್ತು ಇವರಿಗೆ ನಮ್ಮನ್ನು ಧಾಳಿಮಾಡುವುದಿಲ್ಲ
ದುಡ್ಡು ಕೂಡಿಹಾಕಲು ಯಾರದೂ ಮುಲಾಜಿಲ್ಲ

***

ಗ್ರಾಮ ವಾಸ್ತವ್ಯ ಮಾಡಿದರೂ ಗ್ರಾಮಗಳ ಸ್ಥಿತಿ
ಏನೂ ಬದಲಾಗಿಲ್ಲ ಇನ್ನೂ ಅದೇ ಇದೆ ಪರಿಸ್ಥಿತಿ
ಮತ್ತೆ ರಾಜಕಾರಿಣಿಗಳ ಬಾಯಲ್ಲಿ ಅದೇ ಮಂತ್ರ
ಪಠಿಸುವುದೊಂದು ಬರೀ ರಾಜಕೀಯ ಕುತಂತ್ರ

■

# "ಯಾರಿಗೆ ಗೊತ್ತು ಏನಾಯ್ತೆಂದು....! "

**। ವಿ.ವಿಜಯೇಂದ್ರ ರಾವ್**

ಅವನು ಅವಳನ್ನು ಮೊಟ್ಟಮೊದಲು ನೋಡಿದ್ದು ರೇಷನ್ ಅಂಗಡಿಯಲ್ಲಿ...

ನಂತರ ಎರಡನೇ ಬಾರಿ ನೋಡಿದ್ದು ಗಣೇಶನ ದೇವಸ್ಥಾನದಲ್ಲಿ...

ಮೂರನೆಯ ಸರ್ತಿ ಅವನು ಅವಳನ್ನು ನೋಡಿದ್ದು ಲೈಬ್ರರಿಯಲ್ಲಿ...

ಸಣ್ಣದಾಗಿ ಮುಗುಳ್ನಕ್ಕಳು.ಇಬ್ಬರಲ್ಲೂ ಏನೋ ಹೊಂದಾಣಿಕೆ ಇದೇ ಅನ್ನಿಸತೊಡಗಿತು.ಅವಳಿಗೂ ಹಾಗೆ ಅನ್ನಿಸಿತು ಅನ್ಸುತ್ತೆ. ಹಾಗೆ ನೋಡುತ್ತಾ, ನೋಡುತ್ತಾ ಇಬ್ಬರ ನಡುವೆ ಪ್ರೇಮ ಬೆಳೀತಾ ಹೋಯ್ತು. ಆದರೆ, ಇಬ್ಬರೂ ಇನ್ನೊಬ್ಬರೇ ಮೊದಲು ನಿವೇದನೆ ಮಾಡಲೆಂದು ಬಿಗುಮಾನ ತೋರಿದರು.

ಕೊನೆಗೆ, ಒಂದು ದಿನ ಅವನೇ ಸೋತು ಅವಳ ಬಗ್ಗೆ ಅಲ್ಪಸ್ವಲ್ಪ ತಿಳಿದು, ಅವಳಿಗೆ ಧೈರ್ಯದಿಂದ.... 'ಮಾಲಿನಿ ಐ ಲವ್ ಯೂ ' ಎಂದನು.

ಅದಕ್ಕೆ ಅವಳು – ನನ್ನ ಹೆಸರು ಅರ್ಧ ಮಾತ್ರ ತಿಳಿದುಕೊಂಡಿದ್ದೀರಾ, ನನ್ನ ಹೆಸರು ಪದ್ಮ ಮಾಲಿನಿ ಅಂತ.ನಿಮ್ಮ ಪ್ರೀತಿಯು ಅರ್ಧ ಮಾತ್ರಾನಾ ಎಂದು ಛೇಡಿಸಿದಾಗ, ಅಯ್ಯೋ ಇಲ್ರಿ, ಮನಃಪೂರ್ವಕವಾಗಿ ಪ್ರೀತಿಸುತ್ತೀನಿ. ನೀವು ಎಂದು ಕೇಳಿದಾಗ....

ಅವಳು – ನೀವು ಏನು ಕೆಲಸ ಮಾಡುತ್ತೀರಾ ? ಎಂದು ಕೇಳಿದಾಗ, ಕೆಲಸ ಹುಡುಕುತ್ತಿದ್ದೀನಿ, ಇನ್ನೂ ಸಿಕ್ಕಿಲ್ಲ ಎಂದನು. ಆಗ ಅವಳು – ಬೇಗ ಸಿಗುತ್ತೆ, ಬೇಜಾರಾಗಬೇಡಿ ಎಂದು ಸಾಂತ್ವನ ಹೇಳಿದಳು.ಮತ್ತು ನಿಮ್ಮ ಮನೆಯಲ್ಲಿ ಯಾರೆಲ್ಲಾ ಇದ್ದೀರಾ ಎಂದು ಕೇಳಿದಾಗ, ಒಬ್ಬ ಅಣ್ಣ ಇದ್ದಾನೆ.ಅವನಿಗೆ ಮದುವೆಯಾಗಿದೆ ಎಂದಾಗ, ಓಹ್ ಹೌದಾ, ಒಳ್ಳೆಯದಾಯಿತು ಎಂದಳು.ಆಗ ಅವನು – ನೀವು ನಿಮ್ಮ ಅಭಿಪ್ರಾಯ ತಿಳಿಸಲೇ ಇಲ್ಲವಲ್ಲ ಎಂದು ಕೇಳಿದಾಗ, ಅವಳು – ನನಗೆ ಸ್ವಲ್ಪ ಟೈಮ್ ಬೇಕು.ಎರಡು ತಿಂಗಳ ನಂತರ ನಾನು ನನ್ನ ಅಭಿಪ್ರಾಯ ತಿಳಿಸುತ್ತೀನಿ ಎಂದಳು.

ಅವನಿಗೋ ಎರಡು ತಿಂಗಳು ಎರಡು ಯುಗದಂತೆ ಆಯಿತು...... ಕೊನೆಗೂ ಆ ದಿನ ಬಂತು. ಅವಳು ಏನು ಹೇಳಿದಳು ಅಂದರೆ.....? ....................

.

.

ಯಾರಿಗೆ ಗೊತ್ತು ?... ಯಾಕೆಂದರೆ ನಾನು ಓದುತ್ತಿದ್ದ ಗಾಂಧಿ ಬಜಾರಿನಲ್ಲಿ ಚುರುಮುರಿ ಕಟ್ಟಿಕೊಟ್ಟ ಪುಟ್ಟ ಪೇಪರಿನಲ್ಲಿ ಅಷ್ಟೇ ಇತ್ತು....ಬಾಕಿಯದು ಕತ್ತರಿಸಿ ಹೋಗಿತ್ತು....!

**ನೀತಿ: ಇನ್ಮೇಲೆ, ಚುರುಮುರಿಯನ್ನು ಹತ್ತು ರೂಪಾಯಿಗೆ ಕೊಳ್ಳದೇ, ಮೂವತ್ತು ರೂಪಾಯಿಗೆ ಕೊಂಡರೆ, ದೊಡ್ಡ ಪೇಪರಿನಲ್ಲಿ ಕಟ್ಟಿಕೊಡುವುದರಿಂದ ಪೂರ್ತಿಯಾಗಿ ಕತೆ ಸಿಗಬಹುದು ಅನ್ಸುತ್ತೆ ಅಲ್ವೇ...!**

■